ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 8 ಸಂಚಿಕೆ 37

ಸೆಪ್ಟಂಬರ್ 14, 2014

ಪುಟ 16 ರೂ. 10/-







'ನೈಸ್' ಕಂಪನಿಯ ಭೂಕಬಳಿಕೆಗೆ ತಡೆ ಒಡ್ಡಲು ಕರೆ'



ಪ್ರಧಾನಿಗಳ ಜಪಾನ್ ಭೇಟಿ ಮತ್ತದೇ ಗೋಬೆಲ್ಸ್ ಪ್ರಚಾರ ವೈಖರಿ




ಏನಿದು ರಾಮಚಂದ್ರಾಪುರ ಮಠದ ಗೋಸ್ವಾಮಿಯ 'ರಾಮಕಥಾ' ಹಗರಣ?



ಮರಕುಂಬಿ ದಲಿತರ ಮೇಲೆ ಹಲ್ಲೆ: ಗುಡಿಸಲುಗಳಿಗೆ ಬೆಂಕಿ

ವೇದಗಳಿಂದ ವೇದಾಂತದವರೆಗಿನ ಪಯಣದಲ್ಲಿ ಮೊದಲ ತಿರುವು

ಭಾಗ – 37



ಚೋಮನ ದುಡಿ

ಜಿ. ಎನ್. ನಾಗರಾಜ್

ವೇದಗಳು, ಅದರ ಮುಂದುವರಿಕೆಯಾಗಿ ಬ್ರಾಹ್ಮಣಗಳು, ಅವುಗಳ ಮುಂದುವರಿಕೆಯಾಗಿ ಅರಣ್ಯಕಗಳು, ಉಪನಿಷತ್‌ಗಳು. ಇದು ನಮ್ಮ ಪರಂಪರೆ ಎಂದು ಸಾರುತ್ತಾ ಬರಲಾಗಿದೆ. ಉಪನಿಷತ್‌ಗಳೇ ವೇದಾಂತ. ಭಾರತದ ಸಂಸ್ಕೃತಿಯ ಹಿಂದು ಧರ್ಮದ ಮೂಲ. ಮುಂದಿನೆಲ್ಲಾ ಹಿಂದೂ ಧರ್ಮದ ಆಚಾರ್ಯರುಗಳು ವೇದಗಳನ್ನೇ, ಉಪನಿಷತ್‌ಗಳನ್ನೇ ಆಧಾರವಾಗಿಟ್ಟಕೊಂಡು ಅವುಗಳ ಚಿಂತನೆಯನ್ನೇ ವಿವರಿಸುತ್ತಿದ್ದೇವೆಂದೇ ಬಿಂಬಿಸಿದ್ದಾರೆ. ಇತ್ತೀಚಿನ ಪದಗುಚ್ಛ ಬಳಕೆ ಮಾಡುವುದಾದರೆ 'ಪೋಸ್ ಕೊಟ್ಟಿದ್ದಾರೆ'. ನಮ್ಮ ದೇಶದಲ್ಲಿ ವೇದ ಪ್ರಾಮಾಣ್ಯವನ್ನು ಒಪ್ಪುತ್ತೀರೋ ಅಥವಾ ಒಪ್ಪುವುದಿಲ್ಲವೋ ಎಂಬುದು ಎಲ್ಲ ಧಾರ್ಮಿಕ ಪಂಥಗಳು, ಸಂತರ ಮೇಲಿನ ಸವಾಲು. ಆಸ್ತಿಕ–ನಾಸ್ತಿಕ ಎಂಬ ಬಹಳ ಪ್ರಧಾನ ವಿಂಗಡಣೆಯೂ ಕೂಡ ನಮ್ಮ ದೇಶದಲ್ಲಿ ದೇವರನ್ನು ಒಪ್ಪುತ್ತೀರೋ ಇಲ್ಲವೋ ಎಂಬುದರ ಮೇಲೇ ಆಧಾರವಾಗಿಲ್ಲ. ಬದಲಾಗಿ ಸಾವಿರಾರು ವರ್ಷಗಳಿಂದ ವೇದ ಪ್ರಾಮಾಣ್ಯವನ್ನು ಒಪ್ಪುತ್ತೀರೊ ಇಲ್ಲವೋ ಎಂಬುದೇ ಆಧಾರ. ಇತ್ತೀಚಿನ ತಲೆಮಾರುಗಳ ಜನರಿಗೆ ಇದು ವಿಚಿತ್ರವೆಂದೂ ಕಾಣಬಹುದು. ಅವರಿಗೆಲ್ಲಾ ವಿಶ್ವದೆಲ್ಲಾ ಕಡೆ ಇರುವ ಆಸ್ತಿಕ, ನಾಸ್ತಿಕ ಕಲ್ಪನೆಗಳು– ದೇವರ ಅಸ್ತಿತ್ವವನ್ನು ಒಪ್ಪುತ್ತಾರೋ ಅಲ್ಲವೋ ಎಂಬ ಅರ್ಥವಿರುವ ಪರಿಕಲ್ಪನೆಗಳು ಮಾತ್ರ ಗೊತ್ತು. ಆದರೆ ನಮ್ಮ ದೇಶದಲ್ಲಿ ಈ ವಿಚಿತ್ರ ಸಾವಿರಾರು ವರ್ಷಗಳಿಂದ ಇತ್ತು.

ಆದರೆ ವೇದಗಳಲ್ಲಿ ಏನಿದೆ ಎಂಬ ಬಗ್ಗೆ ಸರಿಯಾದ ಅರಿವಿಲ್ಲದೆಯೇ ವೇದ ಪ್ರಾಮಾಣ್ಯ ವನ್ನೊಪ್ಪುವ ಆಸ್ತಿಕರಾಗುತ್ತಾರೆ. ಇದು ಭಾರತದಲ್ಲಿ ಸನ್ನಡತೆ, ಬುದ್ಧಿವಂತಿಕೆ, ಧರ್ಮ, ನೀತಿ ಎಲ್ಲವನ್ನೂ ಅಳೆಯುವ ಮಾನದಂಡ ವಾಗುತ್ತದೆ. ವೇದಗಳಲ್ಲೇನಿದೆ ಎಂಬುದೇ ತಿಳಿಯದೆ ವೇದಗಳನ್ನೊಪ್ಪುವ ಈ ಆಸ್ತಿಕರು ವೇದಗಳನ್ನೊಪ್ಪದ ಎಲ್ಲರ ಮೇಲೆ ಕಂಡ ಕಂಡಂತೆ ಆಪಾದನೆಗಳನ್ನು ಹೊರಿಸುವುದು ಮಾತ್ರವಲ್ಲ ಅವರ ಮೇಲೆ ಧಾಳಿ ಮಾಡುವುದಕ್ಕೂ ಹೇಸಿಲ್ಲ.



ವೇದಗಳೇ ಆಸ್ತಿಕತೆಯ ಆಧಾರ, ಆದರೆ ವೇದಗಳ ಅರ್ಥ ಯಾರಿಗೆ ಗೊತ್ತಿದೆ ?

ವೇದಗಳಲ್ಲೇನಿದೆ ಎಂದು ಈ ಆಸ್ತಿಕರಿಗೆ ಗೊತ್ತಿಲ್ಲ ಎಂದು ಹೇಗೆ ಹೇಳುತ್ತೀರಿ ಎಂದು ನೀವು ಕೇಳಬಹುದು. ಎಲ್ಲಾ ಜ್ಞಾನದ ನಿಧಿ ಎಂದು ಅದರಲ್ಲಿ ಈ ಎಲ್ಲ ಚಿಂತನೆ, ವಿಚಾರಗಳಿವೆ ಎಂದು ಯಾವ ವೇದಗಳನ್ನು ಬಿಂಬಿಸಲಾಗಿದೆಯೋ ಅವುಗಳನ್ನು ನೋಡಿದರೆ ಗೊತ್ತಾಗುತ್ತದೆ ಒಂದೋ ಅವರಿಗೆ ಗೊತ್ತಿಲ್ಲ, ಇಲ್ಲಾ ಅವರು ಗೊತ್ತಿದ್ದೂ ಜನರಿಗೆ ಅರೆ ಬರೆ ಅಥವಾ ಪೂರ್ಣ ಸುಳ್ಳು ಹೇಳುತ್ತಿದ್ದಾರೆ ಎಂದು ಭಾವಿಸಬೇಕಾಗುತ್ತದೆ. ಆದರೆ ಆಸ್ತಿಕರು ಅವರ ಜಾತಿಗಳಿಗೆ ಸಂಬಂಧಿಸಿದ ಮಠಾಧೀಶರು, ಸ್ವಾಮಿಗಳು ಇತ್ಯಾದಿ ಧಾರ್ಮಿಕ ಮುಖಂಡರ ಮೇಲೆ ಅವರ ಉಪನ್ಯಾಸ, ಉಪದೇಶಗಳ ಮೇಲೆ ನಂಬಿಕೆಯನ್ನಿಟ್ಟವರೇ ಹೊರತು ವೇದಗಳನ್ನು ಸ್ವತಃ ಅಭ್ಯಾಸ ಮಾಡಿದವರಲ್ಲ. ಅದರಲ್ಲಿ ವಿವಿಧ ಗೋತ್ರ ಹಾಗೂ ಪಂಗಡಗಳ ಬ್ರಾಹ್ಮಣರು ವೇದಗಳನ್ನು ಏರು ಧ್ವನಿಯಲ್ಲಿ ನಿಶ್ಚಿತ ರೀತಿಯಲ್ಲಿ ಉಚ್ಚಾರಣೆ ಮಾಡುತ್ತಾ ವೇದಗಳನ್ನು ಬಾಯಿಪಾಠ ಮಾಡಿದವರೇ ಹೊರತು ಅವುಗಳನ್ನು ಅಧ್ಯಯನ ಮಾಡಿದವರಲ್ಲ, ಅರ್ಥ ಮಾಡಿಕೊಂಡವರಲ್ಲ ಎಂಬುದನ್ನು ಹಿಂದಿನ ಸಂಚಿಕೆಯೊಂದರಲ್ಲಿ ವಿವರವಾಗಿ ವೇದ ಪಾರಂಗತರೆಂದು ಹೆಸರಾಗಿದ್ದ ಕೇರಳದ ನಂಬೂದರಿಪಾದ್ ಕುಟುಂಬದವರೇ ಬರೆದ "ವೇದಗಳಲ್ಲೇನಿದೆ ?" ಎಂಬ ಪುಸ್ತಕದಿಂದ ಉದಾಹರಣೆ ನೀಡಿದ್ದನ್ನು ನೆಪಿಸಿಕೊಳ್ಳಬಹುದು. ವೇದಗಳಲ್ಲಿರುವ ಪ್ರಾಚೀನ ಸಂಸ್ಕೃತ ಭಾಷೆ ಇಂದಿನ ಅನೇಕ ಸಂಸ್ಕೃತ ಪಂಡಿತರಿಗೂ ತಿಳಿಯದ ಪದಗಳಿಂದ ಕೂಡಿದ್ದು ಮಾತ್ರವಲ್ಲ ಅದನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡಲೆಂದೇ ರಚಿಸಲ್ಪಟ್ಟ ವೇದಗಳ ಕಾಲಕ್ಕೆ ಹತ್ತಿರವಾದ ನಿಘಂಟುವಿನಲ್ಲಿ ಕೂಡ ವಿವರಿಸಲಾಗದ ಪದಗಳಿವೆ ಎಂಬುದು ವೇದಗಳನ್ನು ಅಧ್ಯಯನ ಮಾಡ ಹೊರಟಾಗ ಕಂಡುಕೊಂಡ ಸತ್ಯ. ಹೀಗೆ ವೇದಗಳನ್ನು ಬಾಯಿಪಾಠ ಮಾಡಿದವರಿಗೇ ಅವರು ಉಚ್ಛರಿಸುತ್ತಿದ್ದ ಮಂತ್ರಗಳ ಅರ್ಥ ಗೊತ್ತಿಲ್ಲವೆಂದ ಮೇಲೆ ಉಳಿದವರ ಪಾಡೇನು? ಇನ್ನು ಕಂಠಪಾಠ ಮಾಡಿದವರು ಕೂಡ ತಮ್ಮ ಗೋತ್ರ, ಅದರಲ್ಲಿ ತಮ್ಮ ವಂಶದವರಿಗೆ ಯಾವ ವೇದದ ಯಾವ ಭಾಗವನ್ನು ಹಂಚಿಕೊಡಲಾಗಿದೆಯೋ ಆ ಭಾಗವನ್ನು ಮಾತ್ರ ಕಂಠಪಾಠ ಮಾಡುವುದು ಒಂದು ಕಟ್ಟಳೆ. ಹಾಗೆ ಕಂಠಪಾಠ ಮಾಡಿದವರಿಗೆ ಆ ವೇದದ ಪೂರ್ಣ ಭಾಗದ ಪರಿಚಯವೂ ಇರುತ್ತಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ವೇದವೇ ಪ್ರಾಮಾಣ್ಯ ಮತ್ತು ಅದನ್ನು ಒಪ್ಪುವವರು ಮಾತ್ರ ಆಸ್ತಿಕರು ಎಂದರೆ ಅದಕ್ಕೆ ಏನಾದರೂ ಅರ್ಥವಿದೆಯೇ? ಇದು ಪ್ರಶ್ನೆ.

ಆರ್ಯರ ಜನಾಂಗದ ಇತಿಹಾಸದ ದೃಷ್ಟಿಯಿಂದ ವೇದಗಳಲ್ಲೇನಿದೆ ಎಂಬುದನ್ನು ಈ ಲೇಖನ ಮಾಲೆಯಲ್ಲಿ ಉದ್ದಕ್ಕೂ ಉಲ್ಲೇಖಿಸಲಾಗಿದೆ. ವೇದಗಳಿಂದ ವೇದಾಂತದವರೆಗಿನ ಪಯಣದಲ್ಲಿ ಎರಡು ತಿರುವುಗಳು ಸ್ಪಷ್ಟವಾಗಿ ಕಾಣುತ್ತವೆ. ಒಂದು ಋಗ್ವೇದದಲ್ಲಿ ಕಾಣುವ ಬುಡಕಟ್ಟು ಜೀವನ ಮತ್ತು ಅದರ ಗಾಢ ನೆನಪುಗಳ ನಂತರದ ಮೊದಲ ತಿರುವು ವೈಭವದ ಯಜ್ಞಗಳು ಮತ್ತು ಪೌರೋಹಿತ್ಯಕ್ಕೆ ಪ್ರಾಮುಖ್ಯತೆ ನೀಡಿದ ಯಜುರ್ವೇದ, ಅಥರ್ವಣ ವೇದ(ಕೆಲ ಹಳೆಯ ಭಾಗಗಳನ್ನು ಹೊರತುಪಡಿಸಿ) ಹಾಗೂ ಬ್ರಾಹ್ಮಣಗಳು, ನಂತರ ಎರಡನೇ ತಿರುವು ಯಜ್ಞಗಳ ಪ್ರಾಮುಖ್ಯತೆ ಕಡಿಮೆಯಾದ ಅರಣ್ಯಗಳಲ್ಲಿ ಏಕಾಂತದ ಧ್ಯಾನ, ತಪಸ್ಸುಗಳು ಮುಖ್ಯವಾದ ಅರಣ್ಯಕಗಳು ಮತ್ತು ಉಪನಿಷತ್‌ಗಳು.

ಋಗ್ವೇದದಲ್ಲೇನಿದೆ?

ಬುಡುಕಟ್ಟುಗಳ ಜೀವನದಿಂದ ಆಗತಾನೆ ರಾಜ ಪ್ರಭುತ್ವದ ಹಂತಕ್ಕೆ ಬದಲಾಗುತ್ತಿದ್ದ ಸಮಾಜ ರಚನೆಯನ್ನು ಋಗ್ವೇದದಲ್ಲಿ ಕಾಣುತ್ತೇವೆ. ಇಲ್ಲಿ ರಾಜ ಪ್ರಭುತ್ವವೂ ಇನ್ನೂ ಬುಡಕಟ್ಟುಗಳ ನಾಯಕರು ರಾಜನ್ಯರಾಗಿ ರೂಪುಗೊಳ್ಳುತ್ತಿದ್ದ ಕಾಲ. ಇಂತಹ ಕಾಲಘಟ್ಟವನ್ನು ಚಿತ್ರಿಸುವ ಋಗ್ವೇದದಲ್ಲಿ ಜಾನಪದ ಗೀತೆಗಳಂತಹ ಮುಗ್ಧ ಪ್ರಕೃತಿ ಪ್ರೇಮವನ್ನು ವ್ಯಕ್ತ ಪಡಿಸಿದ ಸೂಕ್ತಗಳಿವೆ. ಬೆಳಗನ್ನು, ಉಷೆಯನ್ನು ವರ್ಣಿಸುವ ಸೂಕ್ತಗಳು ಬಹಳ ಸುಂದರವಾದ ಕಾವ್ಯ. ಹಿಂದೆ ನಾನು ಹೇಳಿರುವಂತೆ ಜಾನಪದರು ಭೂಮ್ತಾಯಿಯ ಬಗ್ಗೆ ಹೃದಯದಾಳದಿಂದ ಪ್ರಾರ್ಥಿಸುವ ಗೀತೆಗಳಂತೆ ಕಾಣುತ್ತವೆ.

ಪ್ರಾಧ್ಯಾಪಕ ಹಿರಿಯಣ್ಣನವರು ಹೇಳುತ್ತಾರೆ: "ಪ್ರಾಚೀನ ವೇದಿಕ ಆಚರಣೆಗಳು ಅವುಗಳಿಗೆ ಸ್ಫೂರ್ತಿ ನೀಡಿದ ಉದ್ದೇಶ ದಂತೆಯೇ ರೂಪದ ಲ್ಲಿಯೂ ಸರಳ ವಾಗಿಯೇ ಇದ್ದವು. ಆ ಕಾಲದ ಆರ್ಯರು ಪೂಜಿಸು ತ್ತಿದ್ದ ದೇವತೆಗಳು ಪರಿಚಿತವಾದ ಪ್ರಕೃತಿ ಶಕ್ತಿಗಳು. ಅವರಿಗೆ ಅರ್ಪಿಸುತ್ತಿದ್ದ ವಸ್ತುಗಳು ಹಾಲು, ಧಾನ್ಯ, ತುಪ್ಪ ಮುಂತಾದವು. ಉದ್ದೇಶವೋ ಮಕ್ಕಳು, ದನ ಮುಂತಾದುವನ್ನು ಪಡೆಯುವ ಸಾಮಾನ್ಯ ಬಯಕೆ ಅಥವಾ ಶತ್ರುಗಳ ನಿವಾರಣೆ. ಕೆಲವೊಮ್ಮೆ ಯಜ್ಞವನ್ನು ಆಚರಿಸುತ್ತಿದ್ದುದು ಆಗಲೇ ದೇವತೆಗಳಿಂದ ಪಡೆದ ಅನುಗ್ರಹಗಳಿಗಾಗಿ ಅವರಿಗೆ ಕೃತಜ್ಞತೆ ಸೂಚಿಸುವುದಕ್ಕೆ. "ಋಗ್ವೇದದಲ್ಲಿ ವರ್ಣಿತವಾದ ಯಜ್ಞಗಳ ರೂಪವೇ ಬೇರೆ. ಅಲ್ಲಿಯ ಅಶ್ವಮೇಧ ಯಾಗ ದನಗಳಿಗೆ ಇತರ ಸಾಕು ಪ್ರಾಣಿಗಳಿಗೆ ಮೇವನ್ನು ಹುಡುಕುವ ವಿಧಾನ ಮತ್ತು ಪ್ರಾಚೀನ ಫಲವಂತಿಕೆಯ ಕಲ್ಪನೆಗಳ ಆಚರಣೆ. ಅದರಲ್ಲಿ ರಾಣಿ ಅಥವಾ ಬುಡಕಟ್ಟು ನಾಯಕನ ಹೆಂಡತಿ ಒಂದು ವರ್ಷ ವಿವಿಧ ಪ್ರದೇಶಗಳಲ್ಲಿ ತಿರುಗಿ ಗೆದ್ದು ಬಂದ ಅಶ್ವದ ಜೊತೆ ಸಂಭೋಗ ಮಾಡುವ ಅಥವಾ ಬಲಿಯಾದ ನಂತರ ಅಶ್ವದ ಶಿಶ್ನವನ್ನು ತನ್ನ ಯೋನಿಯಲ್ಲಿರಿಸಿಕೊಳ್ಳುವ ಭಾಗಗಳೂ ಇದ್ದವು. ಇಂತಹ ಸಂದರ್ಭದಲ್ಲಿ ಆ ಯಜ್ಞಗಳಲ್ಲಿ ಮಂತ್ರಗಳನ್ನು ಉಚ್ಚರಿಸುವ ಪುರೋಹಿತರು ಈ ರಾಣಿಯ ಜೊತೆ ಲೈಂಗಿಕ ಹಾಸ್ಯ ಮಾಡುವ ಸಂಭಾಷಣೆಗಳನ್ನೂ ಬ್ರಾಹ್ಮಣಗಳಲ್ಲಿ ನೀಡಲಾಗಿದೆ.

ಹಾಗೇ ವಾಜಪೇಯ ಯಾಗ ಇತ್ಯಾದಿ ಅನೇಕ ಯಾಗಗಳು ಬುಡಕಟ್ಟು ಜನರು ಆ ದಿನ ಸಂಪಾದಿಸಿದ ಆಹಾರ–ಬೇಟೆ ಅಥವ ಇತರ ಗೆಡ್ಡೆ ಗೆಣಸುಗಳು ಇತ್ಯಾದಿಗಳನ್ನು ಇಡೀ ಬುಡಕಟ್ಟಿನ ಎಲ್ಲ ಜನರೂ ಒಟ್ಟಿಗೆ ಕುಳಿತು ಹಂಚಿಕೊಳ್ಳುವ ವಿಧಾನಗಳೆಂದು ವಿವರಿಸಲ್ಪಟ್ಟಿವೆ. ಋಗ್ವೇದದಲ್ಲಿ ಭಾಗ ಎಂಬ ಅರ್ಥವಿರುವ ಪದಗಳು ಹಲವಿವೆ ಮತ್ತು 60–70 ಬಾರಿ ಉಲ್ಲೇಖಿಸಲಾಗಿದೆ. ಹಲವು ದೇವತೆಗಳನ್ನು ಸಂಪತ್ತಿನ ಹಂಚಿಕೆ ಮಾಡಬೇಕೆಂದು ಪ್ರಾರ್ಥಿಸಲಾಗಿದೆ. ಅಥರ್ವಣ ವೇದವು ಋಗ್ವೇದಕ್ಕಿಂತ ಈಚಿನದಾದರೂ ಕೆಲವು ಅಂಶಗಳಲ್ಲಿ ಧಾರ್ಮಿಕ ನಂಬಿಕೆಯ ಪ್ರಾಚೀನತರ ಮುಖವನ್ನು ನಿರೂಪಿಸುತ್ತದೆ. ಆ ಕಾಲದ ಜಾನಪದ ಆಚರಣೆಗಳು ಅಥರ್ವ ವೇದದಿಂದ ತಿಳಿದು ಬರುತ್ತದೆ.

ಹೀಗೆ ಋಗ್ವೇದದಲ್ಲಿ ಇದ್ದ ಸರಳ ಆಚರಣೆಗಳು ಮುಂದೆ ಏನಾದವು ಎಂಬ ಬಗ್ಗೆ ಪ್ರೊ. ಹಿರಿಯಣ್ಣನವರು ಹೀಗೆ ಹೇಳುತ್ತಾರೆ : "ಈ ಸರಳತೆ ಬೇಗನೆ ಮಾಯವಾಯಿತು. ಕೆಲವು ಪ್ರಾಚೀನ ಮಂತ್ರಗಳಲ್ಲೇ ಈ ಶಿಶು ಸಹಜ ಪೂಜೆಗೆ ಬದಲಾಗಿ ಪುರೋಹಿತ ವರ್ಗಕ್ಕೆ ಸಂಬಂಧಿಸಿದ ವ್ಯವಸ್ತಿತವಾದ ಯಜ್ಞ ಪಂಥವು ಅಸ್ತಿತ್ವಕ್ಕೆ ಬಂದಿರುವುದನ್ನು ಕಾಣುತ್ತೇವೆ. ಅನಂತರದ ಮಂತ್ರಗಳು ಮತ್ತು ಬ್ರಾಹ್ಮಣಗಳ ಯುಗದಲ್ಲಿ ಅವು ಹಾಗೆ ಮೀರಿ ಬೆಳೆದು ವಿಸ್ತಾರವಾದ ಕಲಾಪಗಳಿಂದ ತುಂಬಿಹೋದವು.. ಇನ್ನು ಗಮನಾರ್ಹವೆಂದರೆ ಹವಿಸ್ಸನ್ನು ಅರ್ಪಿಸುತ್ತಿದ್ದ ಮನೋಭಾವದಲ್ಲಿ ಆದ ಬದಲಾವಣೆ. ಯಜ್ಞವು ದೇವತೆಗಳನ್ನು ಒಲಿಸಿಕೊಳ್ಳುವ ಸಾಧನವಲ್ಲ. ಯಾಜಕನು ಬಯಸುವುದನ್ನು ಅವರು ನೀಡಿಯೇ ತೀರುವಂತೆ ಬಲಾತ್ಕಾರ ಮಾಡುವ ವಿಧಾನ. ಈಗ ಯಜ್ಞವನ್ನು ದೇವತೆಗಳಿಗಿಂತಲೂ ಮೇಲಿನ ಸ್ಥಾನಕ್ಕೆ ಏರಿಸಲಾಯಿತು."

ಈ ವಿವರಣೆಯು ಹಲವು ವಿಷಯಗಳನ್ನು ಸ್ಪಷ್ಟ ಪಡಿಸುತ್ತವೆ. ಒಂದು ಆರ್ಯ ಸಮಾಜದಲ್ಲಿ ಬುಡಕಟ್ಟು ಜೀವನ ಕ್ರಮದಿಂದ ರಾಜತ್ವದ ಕಡೆಗೆ ಚಲಿಸಿದಂತೆ ಅವರ ಧಾರ್ಮಿಕ ಆಚರಣೆಗಳು ಆಡಂಬರಗೊಂಡವು. ಅದರೆ ಹೊಸದೇ ಆದ ಧರ್ಮವನ್ನೇನೂ ಹುಟ್ಟು ಹಾಕಲಿಲ್ಲ. ಆದರೆ ಬುಡಕಟ್ಟು ಆಚರಣೆಗಳನ್ನೇ ತಮ್ಮ ಹೊಸ ಕಾಲದ ರಾಜತ್ವದ ಅಗತ್ಯಗಳಿಗೆ ಒಗ್ಗಿಸಿಕೊಂಡರು. ಅದನ್ನೇ ವೈಭವೀಕರಿಸಿದರು. ಅಂದರೆ ಹೊರ ನೋಟಕ್ಕೆ ಅದೇ ನಂಬಿಕೆಗಳು. ಜನರು ಈಗಾಗಲೇ ಬಹಳ ಕಾಲದಿಂದ ನಂಬಿಕೊಂಡು ಬಂದ ಆಚರಣೆಗಳು ಮತ್ತು ದೇವತೆಗಳು. ರಾಜತ್ವಕ್ಕೆ ಜನರು ಅಡಿಯಾಳಾಗಿ ಬದುಕುವುದನ್ನು ಒಪ್ಪಿಕೊಳ್ಳುವಂತೆ ಮಾಡುವುದಕ್ಕೆ ಈ ಆಚರಣೆಗಳಲ್ಲಿ ಜನರಿಗೆ ಇರುವ ನಂಬಿಕೆಯನ್ನೇ ಉಪಯೋಗಿಸಲಾಯಿತು. ಈ ಪ್ರಕ್ರಿಯೆಯಲ್ಲಿ ಪುರೋಹಿತ ಶಾಹಿಯ ಸೃಷ್ಟಿಯಾಯಿತು. ರಾಜನ್ಯರು ಮತ್ತು ಪುರೋಹಿತಶಾಹಿಯ ನಡುವೆ ಏರ್ಪಟ್ಟ ಈ ಮೈತ್ರಿ ಪರಸ್ಪರ ಬಹಳ ಪ್ರಯೋಜಕವಾಯಿತು. ಇದರಿಂದ ಸ್ವತಂತ್ರ ಜೀವನ ನಡೆಸುತ್ತಿದ್ದ ಬುಡುಕಟ್ಟು ಜನರನ್ನು ರಾಜತ್ವದ ಗುಲಾಮಗಿರಿಗೆ ತಳ್ಳಲು ಸಾಧ್ಯವಾಯಿತು. ವರ್ಣ ವ್ಯವಸ್ಥೆ ಎಂಬುದು ಈ ಮೈತ್ರಿ ಜನರ ಮೇಲೆ ಹೇರಿದ ಶೋಷಣೆಯ ವ್ಯವಸ್ಥೆ. ಹೀಗೆ ಧರ್ಮ ಜನ ಜೀವನದಲ್ಲಿ ವಹಿಸಿದ ಪಾತ್ರ ಸ್ಪಷ್ಟವಾಗುತ್ತದೆ. ಉಪನಿಷತ್‌ಗಳ ಸಂದರ್ಭದ ಚಿಂತನೆಯ ಬೆಳವಣಿಗೆ ಈ ವಿಷಯವನ್ನು ಇನ್ನೂ ಬಹಳ ವಿವರವಾಗಿ ನಮ್ಮ ಮುಂದಿಡುತ್ತದೆ. ಭಾರತದಲ್ಲಿ ಬೆಳೆದ ಧಾರ್ಮಿಕ ಚಿಂತನೆಯ ಬೆಳವಣಿಗೆಯ ಎರಡನೇ ತಿರುವನ್ನು ಅದು ಸೂಚಿಸುತ್ತದೆ. ●

ಸಂಪಾದಕೀಯ

ಅತಿವೃಷ್ಟಿ: ಕಾಂಗ್ರೆಸ್ ಸರ್ಕಾರ ನೆರವಿಗೆ ಧಾವಿಸಲಿ ಬಿಜೆಪಿ ರಾಜಕಾರಣ ಮಾಡದಿರಲಿ



ನಿತ್ಯಾನಂದಸ್ವಾಮಿ

ಬರದ ಭೀತಿಯಿಂದ ಕಂಗೆಟ್ಟ ರಾಜ್ಯದ ರೈತರು ಈಗ ಅತಿವೃಷ್ಟಿ ಅನಾಹುತದಿಂದ ಆಘಾತಕ್ಕೀಡಾಗಿದ್ದಾರೆ. ಮುಂಗಾರು ಮುನಿಸಿಕೊಂಡಿತ್ತು. ಆಗೊಮ್ಮೆ ಈಗೊಮ್ಮೆ ಬಿದ್ದ ಮಳೆ ಹನಿಗಳನ್ನು ನಂಬಿದ ರೈತರು ತೊಗರಿ, ಹತ್ತಿ, ಶೇಂಗಾ, ಗೋವಿನ ಜೋಳ ಮುಂತಾದ ಬೆಳೆಗಳನ್ನು ಬಿತ್ತಿದ್ದರು. ಎಕರೆಗೆ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿದ್ದರು. ಆದರೆ ಕಳೆದ ಹದಿನೈದು ದಿನಗಳಿಂದ ಧಾರಾಕಾರವಾಗಿ ಸುರಿದ ಮಳೆಯಿಂದ ಅಪಾರ ಪ್ರಮಾಣದ ಬೆಳೆ ಹಾನಿ ಸಂಭವಿಸಿದೆ. ರಾಜ್ಯದ ಒಟ್ಟು ಎಂಟು ಜಿಲ್ಲೆಗಳ ಸುಮಾರು ಐವತ್ತನಾಲ್ಕು ಸಾವಿರ ಹೆಕ್ಟರ್ ಭೂಮಿಯಲ್ಲಿ ಬೆಳೆದಿದ್ದ ಬೆಳೆ ನಾಶವಾಗಿದೆ. ಸುಮಾರು ಹತ್ತು ಸಾವಿರ ಮನೆಗಳು ಕುಸಿದು ಬಿದ್ದಿವೆ. 22 ಜನ ಸಾವನ್ನಪ್ಪಿದ್ದಾರೆ. 100ಕ್ಕೂ ಹೆಚ್ಚು ಜಾನುವಾರುಗಳು ಸತ್ತಿವೆ ಎಂದು ವರದಿಯಾಗಿದೆ. ರಾಜ್ಯ ಸರಕಾರವೇ ಒಪ್ಪಿಕೊಂಡಿರುವಂತೆ ರಾಜ್ಯದಲ್ಲಿ ಒಟ್ಟು 350 ಕೋಟಿ ರೂ. ಗಳಿಗೂ ಹೆಚ್ಚಿನ ಮೌಲ್ಯದ ಆಸ್ತಿಪಾಸ್ತಿ ನಷ್ಟ ಸಂಭವಿಸಿದೆ.

ಆತಿವೃಷ್ಟಿಯಿಂದ ಬೆಳೆಹಾನಿ ಅನುಭವಿಸಿರುವ ರೈತರು, ನಷ್ಟಕ್ಕೀಡಾದ ಇತರ ಸಂತ್ರಸ್ತರು ಪರಿಹಾರಕ್ಕಾಗಿ, ಸರ್ಕಾರ ನೆರವಿಗಾಗಿ ದಾರಿ ಕಾಯುತ್ತಿದ್ದಾರೆ. ಕೆಲ ವರ್ಷಗಳ ಹಿಂದೆ ನೆರೆಯಿಂದಾಗಿ ಸೂರು ಕಳೆದುಕೊಂಡವರಿಗೆ ಪುನರ್ವಸತಿ ಕಲ್ಪಿಸುವುದು ಇದುವರೆಗೂ ಆಗಿಲ್ಲ. ರಾಜ್ಯ ಸರ್ಕಾರದಿಂದ 97 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. 350 ಕೋಟಿ ರೂ. ನಷ್ಟವಾಗಿದೆ ಎಂದು ಹೇಳಿಕೊಂಡಿರುವ ರಾಜ್ಯ ಸರಕಾರ ಈಗ ಕೇವಲ 97 ಕೋಟಿ ರೂ. ಬಿಡುಗಡೆ ಮಾಡಿರುವುದು ಯಾವ ಮೂಲೆಗೆ ? ರಾಜ್ಯ ಸರಕಾರ ಅತಿವೃಷ್ಟಿ ವಿಷಯದಲ್ಲಿ ಅಷ್ಟೇನು ಕಾಳಜಿ ವ್ಯಕ್ತ ಪಡಿಸುತ್ತಿಲ್ಲ. ಸಿದ್ದು ಸರಕಾರಕ್ಕೆ ಜನರ ಸಮಸ್ಯೆಗಳತ್ತ ಗಮನ ನೀಡಲು ಸಮಯವೇ ಇಲ್ಲದಂತಾಗಿದೆ. ಪಕ್ಷದೊಳಗೆ ಆಂತರಿಕ ಕಿತ್ತಾಟ ತಾರಕಕ್ಕೇರಿದೆ. ಮಂತ್ರಿಮಂಡಲದ ವಿಸ್ತರಣೆ, ಉಪ ಮುಖ್ಯಮಂತ್ರಿ ಸ್ಥಾನ ಮತ್ತು ನಿಗಮ ಹಾಗೂ ಮಂಡಳಿಗಳಿಗೆ ನೇಮಕಾತಿ ಪ್ರಶ್ನೆಗಳು ಕಗ್ಗಂಟಾಗಿವೆ. ಶಾಸಕರ ನಡುವಿನ ಅಸಮಾಧಾನ ಯಾವುದೇ ಕ್ಷಣದಲ್ಲಿ ಸ್ಫೋಟಿಸುವ ಸಾಧ್ಯತೆಗಳಿವೆ. ಜಿಲ್ಲಾ ಉಸ್ತುವಾರಿ ಮಂತ್ರಿಗಳು ಅತ್ತ ತಲೆ ಹಾಕದೇ ಇರುವುದರಿಂದ ಅಧಿಕಾರಿಗಳು ತಲೆಕೆಡಿಸಿಕೊಳ್ಳುತ್ತಿಲ್ಲ.

ಸಿದ್ದರಾಮಯ್ಯ ಸರಕಾರ ತಕ್ಷಣ ಸಂತ್ರಸ್ತರ ನೆರವಿಗೆ ಧಾವಿಸಬೇಕು. ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಗರಿಷ್ಟ ಮೊತ್ತವನ್ನು ಬಿಡುಗಡೆ ಮಾಡಬೇಕು. ಮೃತ ಪಟ್ಟವರ ಕುಟುಂಬಗಳಿಗೆ ನೀಡಲಾದ 1.5 ಲಕ್ಷ ರೂ. ಪರಿಹಾರ ಸಾಲದು. ಪ್ರತಿ ಕುಟುಂಬಕ್ಕೆ ಕನಿಷ್ಟ 5 ಲಕ್ಷ ರೂ. ಪರಿಹಾರ ನೀಡಬೇಕು. ಬೆಳೆ ಹಾನಿ ಅನುಭವಿಸಿದ ರೈತರಿಗೆ ಎಕರೆಗೆ ಐದು ಸಾವಿರ ರೂ. ದಿಂದ ಹತ್ತು ಸಾವಿರ ರೂ. ವರೆಗೂ ಪರಿಹಾರ ನೀಡಬೇಕು. ಮನೆಗಳನ್ನು ಕಳೆದುಕೊಂಡವರಿಗೆ ಉಚಿತವಾಗಿ ಮನೆಗಳನ್ನು ಕಟ್ಟಿಕೊಡಬೇಕು. ಒಂದು ಕಡೆ ಅತಿವೃಷ್ಟಿಯಾದರೆ ರಾಜ್ಯದ ನಾಲ್ಕೈದು ಜಿಲ್ಲೆಗಳಲ್ಲಿ ಜನರು ಬರದ ಬೇಗೆಯಲ್ಲಿ ಬೇಯುತ್ತಿದ್ದಾರೆ. ಬರಪರಿಹಾರದ ದೃಷ್ಟಿಯಿಂದಲೂ ಜನರಿಗೆ ಸೂಕ್ತ ನೆರವಿನ ಹಸ್ತ ಚಾಚಲು ಸರ್ಕಾರ ಮುಂದಾಗಬೇಕು.

ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ರಾಜ್ಯದಲ್ಲಿ ಅತಿವೃಷ್ಟಿ ಹೆಸರಿನಲ್ಲಿ ರಾಜಕಾರಣ ಮಾಡುವುದನ್ನು ನಿಲ್ಲಿಸಬೇಕು. ಅತಿವೃಷ್ಟಿಯಿಂದ ಆಗಿರುವ ಹಾನಿಯನ್ನು ಅಂದಾಜು ಮಾಡಲು ಕೇಂದ್ರ ಸರಕಾರ ತಂಡವನ್ನು ಕೂಡಲೇ ಕಳುಹಿಸುವಂತೆ ಆಗ್ರಹಿಸಬೇಕು. ಪರಿಹಾರ ಹಾಗೂ ಪುರ್ನವಸತಿ ಕಲ್ಪಿಸಲು ಕೇಂದ್ರ ಗರಿಷ್ಟ ನೆರವು ನೀಡುವಂತೆ ರಾಜ್ಯ ಬಿಜೆಪಿ ಪಟ್ಟು ಹಿಡಿಯಬೇಕು. ಕೇಂದ್ರದಿಂದ ನೀಡುವ ಪರಿಹಾರವನ್ನು ವಿಳಂಭವಿಲ್ಲದೇ ಒದಗಿಸಲು ಕೇಂದ್ರ ಸರಕಾರದ ಮೇಲೆ ರಾಜ್ಯ ಬಿಜೆಪಿ ಒತ್ತಡ ಹೇರಬೇಕು. ಇದನ್ನು ಬಿಟ್ಟು ರಾಜ್ಯದಾದ್ಯಂತ ಪ್ರವಾಸ ಮಾಡುವ ಹೆಸರಿನಲ್ಲಿ ಜನರ ನಡುವೆ ಗೊಂದಲವನ್ನು ಉಂಟುಮಾಡುವದನ್ನು ನಿಲ್ಲಿಸಬೇಕು. ಕಾಂಗ್ರೆಸ್ ಆಗಲಿ, ಬಿಜೆಪಿ ಆಗಲಿ, ಎರಡು ಆಡಳಿತ ಪಕ್ಷಗಳು ಒಂದು ರಾಜ್ಯದಲ್ಲಿ ಅಧಿಕಾರ ಹೊಂದಿದ್ದರೆ, ಬಿಜೆಪಿ ಕೇಂದ್ರದಲ್ಲಿ ಅಧಿಕಾರ ಹೊಂದಿದೆ. ಎರಡು ಸರಕಾರಗಳು ಅತಿವೃಷ್ಟಿ ಸಂದರ್ಭದಲ್ಲಿ ಹೊಣೆಗಾರಿಕೆಯನ್ನು ಪ್ರದರ್ಶಿಸಬೇಕು ಅದನ್ನು ಬಿಟ್ಟು ಒಂದು ಇನ್ನೊಂದರ ಮೇಲೆ ಆರೋಪ ಹೊರಿಸಿ ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ.

ಜ್ವಲಂತ ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕಾಗಿ ಆಗ್ರಹಿಸಿ 10 ಸೆಪ್ಟೆಂಬರ್ 2014 ರಾಜ್ಯವ್ಯಾಪಿ ಚಳುವಳಿ

ಶಾಲಾ-ಕಾಲೇಜು-ವಿಶ್ವವಿದ್ಯಾಲಯ ಬಂದ್‌ಗೆ ಕರೆ

ಜಗತ್ತನ್ನು ಬದಲಾಯಿಸಲು ಶಿಕ್ಷಣ ಒಂದು ಶಕ್ತಿಯುತ ಆಯುಧ ಎನ್ನುವ ನೆಲ್ಸನ್ ಮಂಡೇಲಾರವರ ವಾಣಿಯಂತೆ ಒಂದು ಸಮಾಜದ ಸರ್ವಾಂಗೀಣ ಅಭಿವೃದ್ದಿಗೆ ಶಿಕ್ಷಣ ತಳಪಾಯವಾಗಿದೆ. ವಿದ್ಯಾರ್ಥಿ-ಯುವಜನರನ್ನು ದೇಶದ ಅಭಿವೃದ್ದಿಯಲ್ಲಿ ತೊಡಗಿಸಬೇಕಾದರೆ ಶಿಕ್ಷಣ ಕ್ಷೇತ್ರವನ್ನು ಆದ್ಯತೆಯಾಗಿ ಪರಿಗಣಿಸಿ ವೈಜ್ಞಾನಿಕವಾದ ಗುಣಮಟ್ಟದ ಶಿಕ್ಷಣವನ್ನು ನೀಡುವುದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಂವಿಧಾನ ಬದ್ಧ ಕರ್ತವ್ಯವಾಗಿದೆ. ಆದರೆ ನಮ್ಮನ್ನು ಆಳುತ್ತಿರುವ ಪ್ರಭುತ್ವಗಳು ಶಿಕ್ಷಣ ನೀಡುವ ಮೂಲ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಾ ಶಿಕ್ಷಣ ವಿರೋಧಿ ನೀತಿಗಳನ್ನು ಜಾರಿಗೆ ತರುತ್ತಿವೆ. ರಾಜ್ಯದ ಶೈಕ್ಷಣಿಕ ಕ್ಷೇತ್ರ ಸಮಸ್ಯೆಗಳ ಗೂಡಾಗಿದೆ. 6 ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣ ನೀಡಬೇಕೆನ್ನುವ ಆರ್.ಟಿ.ಇ. (ಶಿಕ್ಷಣ ಹಕ್ಕು ಕಾಯ್ದೆ)ಯನ್ನು ಸಮರ್ಪಕವಾಗಿ ಜಾರಿಗೊಳಿಸುತ್ತಿಲ್ಲ. ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಪೂರ್ವ ಶಿಕ್ಷಣ ಕೇಂದ್ರಗಳನ್ನು ಸರ್ಕಾರ ಪ್ರಾರಂಭಿಸುವ ಬದಲಾಗಿ ಖಾಸಗಿಯವರಿಗೆ ನಡೆಸಲು ಅವಕಾಶ ಕಲ್ಪಿಸಿಕೊಟ್ಟಿರುವುದರಿಂದ ಶಿಕ್ಷಣದ ಖಾಸಗೀಕರಣ, ವ್ಯಾಪಾರೀಕರಣದ ಧಾಳಿ ಈ ಹಂತದಿಂದಲೇ ವ್ಯಾಪಕವಾಗಿದೆ. ಬಹುತೇಕ ಖಾಸಗಿ ಶಿಕ್ಷಣ ಸಂಸ್ಥೆಗಳು ಕಾನೂನು ಬಾಹಿರವಾಗಿ ಡೊನೇಷನ್ ವಸೂಲಿಯಲ್ಲಿ ತೊಡಗಿವೆ ಮತ್ತು ಇವುಗಳೇ ಸರ್ಕಾರವನ್ನು ನಿಯಂತ್ರಿಸುತ್ತಿವೆ. ರಾಜ್ಯದಲ್ಲಿ 1 ಲಕ್ಷ 68 ಸಾವಿರ ಮಕ್ಕಳು ಶಾಲಾ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಅಕ್ಷರ ದಾಸೋಹ ಬಿಸಿಯೂಟ ಯೋಜನೆಯನ್ನು ಖಾಸಗಿಕರಣಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ. ಪ್ರತಿಷ್ಠಿತ ನಗರಗಳು ಸೇರಿದಂತೆ ರಾಜ್ಯದಲ್ಲೆಡೆ ನಾಯಿ ಕೊಡೆಯಂತೆ ಖಾಸಗಿ ಶಿಕ್ಷಣ ಸಂಸ್ಥೆಗಳು ತಲೆ ಎತ್ತುತ್ತಿವೆ.

ಕನಿಷ್ಟ ಮೂಲಭೂತ ಸೌಲಭ್ಯಗಳೇ ಇಲ್ಲ

ಸರ್ಕಾರಿ ಶಾಲಾ-ಕಾಲೇಜುಗಳು ಕನಿಷ್ಠ ಮೂಲಭೂತ ಸೌಲಭ್ಯಗಳಿಲ್ಲದೇ ನರಳುತ್ತಿವೆ. ವಿದ್ಯಾರ್ಥಿಗಳ ಕೊರತೆಯ ನೆಪವೊಡ್ಡಿ ಈಗಾಗಲೇ 3170 ಸರ್ಕಾರಿ ಶಾಲೆಗಳನ್ನು ಮುಚ್ಚಲಾಗಿದೆ. ಶೇ. 68 ರಷ್ಟು ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯಗಳಿಲ್ಲ ಎಂಬ ಅಂಕಿ ಅಂಶವನ್ನು ಸರ್ಕಾರವೇ ಹೇಳುತ್ತಿದೆ. ಮರದ ನೆರಳಲ್ಲಿ, ಬಿಸಿಲಿನಲ್ಲಿ, ಹಲವೆಡೆ ಪಾಠ ನಡೆಯುತ್ತಿವೆ. ಶುದ್ದ ಕುಡಿಯುವ ನೀರು, ಸುಸಜ್ಜಿತ ಕಟ್ಟಡ, ಬೆಂಚುಗಳು, ಗ್ರಂಥಾಲಯ, ಕ್ರೀಡಾಂಗಣಗಳು ಸೇರಿದಂತೆ ಇನ್ನಿತರ ಮೂಲಭೂತ ಸೌಲಭ್ಯವಿಲ್ಲದೇ ಸರ್ಕಾರಿ ಶಿಕ್ಷಣ ಸಂಸ್ಥೆಗಳು ನರಳುತ್ತಿವೆ.

ಉನ್ನತ ಶಿಕ್ಷಣದ ಮಟ್ಟ ಕುಸಿಯುತ್ತಿದೆ

ರಾಜ್ಯದಲ್ಲಿ ಪಿಯುಸಿ ಮತ್ತು ಪದವಿ ಶಿಕ್ಷಣದ ಸ್ಥಿತಿ ಚಿಂತಾಜನಕವಾಗಿದೆ. ಉನ್ನತ ಶಿಕ್ಷಣವನ್ನು ಅಭಿವೃದ್ಧಿ ಪಡಿಸಲು ಸರಕಾರ ಆಸಕ್ತಿ ತೋರುತ್ತಿಲ್ಲ. ಪರಿಣಾಮ ರಾಜ್ಯದಲ್ಲಿ ಪದವಿ ಕಲಿಯುವವರ ಸಂಖ್ಯೆ ಕೇವಲ 11% ರಷ್ಟಿದೆ. ಸರಕಾರಿ ವಿ.ವಿ.ಗಳನ್ನು ಬಲಪಡಿಸುವುದರ ಬದಲಾಗಿ ಖಾಸಗಿ ವಿ.ವಿ.ಗಳನ್ನು ಹೆಚ್ಚಾಗಿ ತೆರೆಯಲಾಗುತ್ತಿದೆ. ಉನ್ನತ ಶಿಕ್ಷಣವು ಖಾಸಗಿ ವ್ಯಕ್ತಿಗಳ ಹಿಡಿತದಲ್ಲಿರುವುದರಿಂದ ಹಣ ಉಳ್ಳವರಿಗೆ ಮಾತ್ರ ಶಿಕ್ಷಣ ಎನ್ನುವಂತಾಗಿದೆ. ವೃತ್ತಿ ಶಿಕ್ಷಣ ಮಾರಾಟದ ಸರಕಾಗಿದೆ. ರಾಜ್ಯ ಸರಕಾರ ಸಿ.ಇ.ಟಿ. ಗೊಂದಲವನ್ನು ಸರಿ ಪಡಿಸದ ಕಾರಣ ಕಾಮೆಡ್-ಕೆ ಈ ಬಾರಿ ಹೆಚ್ಚು ಲಾಭ ಮಾಡಿಕೊಂಡಿದೆ.

ಹೆಚ್ಚುತ್ತಿರುವ ಅತ್ಯಾಚಾರಿಗಳ ಅಟ್ಟಹಾಸ

ರಾಷ್ಟದಲ್ಲಿ ಮತ್ತು ರಾಜ್ಯದಲ್ಲಿ ದಿನೇ ದಿನೇ ಅತ್ಯಾಚಾರಿಗಳ ಅಟ್ಟಹಾಸ ಹೆಚ್ಚುತ್ತಿದೆ. ಮನೆಯಲ್ಲಿ, ಶಾಲೆಯಲ್ಲಿ, ಸರ್ಕಾರಿ-ಖಾಸಗಿ ಕಛೇರಿಗಳಲ್ಲಿ, ಬೀದಿಯಲ್ಲಿ ಎಲ್ಲಿ ನೋಡಿದರೂ ಅತ್ಯಾಚಾರದ ಪ್ರಕರಣಗಳು ಹೆಚ್ಚಾಗುತ್ತಿವೆ. 3ರಿಂದ4 ವರ್ಷದ ಮಕ್ಕಳಿಂದ ಹಿಡಿದು ವಯೋವೃದ್ದೆಯವರೆಗೆ, ಮಹಿಳೆಯರಿಗೆ ರಕ್ಷಣೆಯೇ ಇಲ್ಲದಂತಾಗಿದೆ. ಪ್ರತಿ 20 ನಿಮಿಷಗಳಿಗೊಮ್ಮೆ ಒಂದು ಅತ್ಯಾಚಾರ ಪ್ರಕರಣ ವರದಿಯಾಗುತ್ತಿವೆ. ಒಟ್ಟು 23,582 ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ. ಅದರಲ್ಲಿ ಶಿಕ್ಷೆಯಾಗಿದ್ದು ಕೇವಲ ಶೇ. 25 ರಷ್ಟು ಪ್ರಕರಣಗಳಲ್ಲಿ ಮಾತ್ರ. ರಾಜ್ಯದಲ್ಲಿ 2008 ರಿಂದ 2012ರವರಗೆ 2,741 ಅತ್ಯಾಚಾರ ಪ್ರಕರಣಗಳು, 32 ಸಾಮೂಹಿಕ ಅತ್ಯಾಚಾರಗಳು, 12,352 ಲೈಂಗಿಕ ಕಿರುಕುಳಗಳು ಪ್ರಕರಣಗಳು ದಾಖಲಾಗಿವೆ. ಸುಪ್ರಿಂ ಕೋರ್ಟ್ ನಿರ್ದೇಶನದಂತೆ ಎಲ್ಲಾ ಶಾಲಾ ಕಾಲೇಜುಗಳಲ್ಲಿ 'ಲೈಂಗಿಕ ಕಿರುಕುಳ ವಿರೋಧಿ ಸಮಿತಿ'ಯನ್ನು ರಚಿಸಲು ಶಿಕ್ಷಣ ಇಲಾಖೆ ಮುತುವರ್ಜಿ ವಹಿಸದಿರುವುದು ವಿಷಾದನೀಯವಾಗಿದೆ.

ಖಾಲಿ- ಖಾಲಿ ಹುದ್ದೆಗಳು

ನೇಮಕಾತಿ ನಿಂತು ಹೋಗಿದೆ. ಶಿಕ್ಷಕ-ಉಪನ್ಯಾಸಕ-ಭೋದಕೇತರ ಸಿಬ್ಬಂದಿಗಳಿಲ್ಲದೆ ಶಾಲಾ ಕಾಲೇಜುಗಳಲ್ಲಿ ಶೈಕ್ಷಣಿಕ ಪೂರಕ ವಾತಾವರಣವಿಲ್ಲದಂತಾಗಿದೆ. ಶಿಕ್ಷಕ-ಉಪನ್ಯಾಸಕರಿಗೆ ಹೆಚ್ಚುವರಿ ಕೆಲಸದ ಒತ್ತಡದಿಂದಾಗಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ತೊಡಕಾಗಿದೆ. ತರಬೇತಿ ಪಡೆದ ಲಕ್ಷಾಂತರ ಉದ್ಯೋಗಕಾಂಕ್ಷಿಗಳಿದ್ದರೂ ನೇಮಕಾತಿ ನಡೆಯುತ್ತಿಲ್ಲ. 38 ಸಾವಿರ ಶಿಕ್ಷಕರ ಹುದ್ದೆಗಳು, ಶೇ.27 ರಷ್ಟು ಕಾಲೇಜು ಹಾಗೂ ವಿ.ವಿ.ಗಳಲ್ಲಿ ಸಮಾಜ ಕಲ್ಯಾಣ ಇಲಾಖೆ ಹಾಗೂ ಆರೋಗ್ಯ ಇಲಾಖೆಗಳಲ್ಲಿ ಸಾವಿರಾರು ಹುದ್ದೆಗಳು ಖಾಲಿಯಿವೆ. ಖಾಯಂ ನೇಮಾಕಾತಿಯ ಬದಲಾಗಿ ಅತಿಥಿ, ಗುತ್ತಿಗೆ, ಹೊರಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುತ್ತಿರುವುದು ಉದ್ಯೋಗದ ಅಭದ್ರತೆಯನ್ನು ಹೆಚ್ಚಿಸಿದೆ. ಸಾರ್ವಜನಿಕ ವಲಯದಲ್ಲಿ ಖಾಸಗೀಕರಣದ ಪ್ರಕ್ರಿಯೆಗೆ ಹೆಚ್ಚು ಒತ್ತು ನೀಡುತ್ತಿರುವುದು ದುರಂತವಾಗಿದೆ.

ಸಮಸ್ಯೆಗಳ ಕೂಪವಾಗಿರುವ ಸರ್ಕಾರಿ ಹಾಸ್ಟೆಲ್‌ಗಳು

ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಮುಖ್ಯವಾಹಿನಿಗೆ ತರುವ ಕಾರಣಕ್ಕಾಗಿ ಸಂವಿಧಾನದ ಸಾಮಾಜಿಕ ನ್ಯಾಯದ ಆಶಯದಂತೆ ಪ್ರಾರಂಭವಾಗಿರುವ ಹಿಂದುಳಿದ ವರ್ಗಗಳ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಗಳು ನಡೆಸುತ್ತಿರುವ ಬಿಸಿಎಂ ಮತ್ತು ಎಸ್‌ಸಿ/ಎಸ್‌ಟಿ ಹಾಸ್ಟೆಲ್‌ಗಳು ಮೂಲ ಗುರಿಯನ್ನು ತಲುಪುತ್ತಿಲ್ಲ. ಮೂಲಸೌಲಭ್ಯಗಳಿಲ್ಲದ ಕಾರಣ ವಿದ್ಯಾರ್ಥಿಗಳ ಸ್ಥಿತಿ ಶೋಚನೀಯವಾಗಿದೆ. ವಿದ್ಯಾರ್ಥಿನಿಲಯಗಳು ಶೈಕ್ಷಣಿಕ ವಾತಾವರಣಕ್ಕೆ ಪೂರಕವಾಗಿಲ್ಲ. ದೇಶದೆಲ್ಲೆಡೆ ಪ್ರತಿನಿತ್ಯ ಆಹಾರ ಪದಾರ್ಥಗಳ ಬೆಲೆ ಗಗನೆಕ್ಕೇರುತ್ತಿದೆ. ಕೊಲೆ, ಭ್ರಷ್ಟಾಚಾರ, ದರೋಡೆ, ಅತ್ಯಾಚಾರ, ಹಗರಣ, ದೇಶದ ಖನಿಜ ಸಂಪತ್ತನ್ನು ಲೂಟಿ ಮಾಡಿ ಜೈಲಿನಲ್ಲಿರುವ ಖೈದಿಗಳಿಗೆ ದಿನಕ್ಕೆ ಸುಮಾರು 120 ರೂ.ಗಳನ್ನು ನೀಡುತ್ತಿರುವ ರಾಜ್ಯ ಸರ್ಕಾರ ಹಾಸ್ಟೆಲ್ ವಿದ್ಯಾರ್ಥಿಗಳ ದಿನದ ಊಟಕ್ಕೆ

ಪುಟ 15 ಕ್ಕೆ

ಕೋಲಾರ : 'ಜನವಾದಿ ಮಹಿಳಾ ಸಂಘಟನೆ' ನೇತೃತ್ವ

'30 ಸಾವಿರ ಸಸಿ ನೆಡುವ ಯಶಸ್ವಿ ಆಂದೋಲನ'

'28,730 ಮಹಿಳೆಯರ ಸದಸ್ಯತ್ವ ನೋಂದಾಯಿಸಿದ ಏಕದಿನ ಅಭಿಯಾನ'-

– ವಿ. ಗೀತಾ

ಮಹಿಳೆಯರು ತಮ್ಮ ಹಕ್ಕುಗಳನ್ನು ಅರಿತುಕೊಳ್ಳುವುದು.. ನಮ್ಮ ಸಮಾಜದಲ್ಲಿ ಮಹಿಳೆಯರಿಗೆ ತಲೆತಲಾಂತರಗಳಿಂದ ಆಗುತ್ತಾ ಬರುತ್ತಿರುವ ಅಗಾಧ ಅನ್ಯಾಯಗಳನ್ನು ಅರ್ಥಮಾಡಿಕೊಳ್ಳುವುದು.. ತೀವ್ರಗೊಳ್ಳುತ್ತಿರುವ ತಮ್ಮ ಮೇಲಿನ ಹಿಂಸೆ, ದಾಳಿ, ಅತ್ಯಾಚಾರ, ಶೋಷಣೆ ಮುಂತಾದ ಪ್ರವೃತ್ತಿಗಳನ್ನು ಸಮರ್ಥವಾಗಿ ಎದುರಿಸಲು ಸಜ್ಜಾಗುವುದು.. ಇವೆಲ್ಲಾ ನಮ್ಮ ಸಮಾಜದ ಒಂದು ತುರ್ತು ಅಗತ್ಯವಾಗಿದೆ ಮತ್ತು ಒಂದು ದೊಡ್ಡ ಸವಾಲಾಗಿದೆ. ಇದನ್ನು ಸಾಧಿಸಲು ಮಹಿಳೆ ಸಂಘಟಿತಳಾಗಬೇಕಿದೆ.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ಮಹಿಳೆಯರನ್ನು ಸಂಘಟಿಸಿ ಅವರಲ್ಲಿ ತಮ್ಮ ಹಕ್ಕುಗಳ ಬಗೆಗೆ ಹಾಗೂ ತಮಗಾಗುತ್ತಿರುವ ಅನ್ಯಾಯಗಳ ಬಗೆಗೆ ಅರಿವು ಮೂಡಿಸುವ ಹಾಗೂ ಅವರನ್ನು ಒಂದುಗೂಡಿಸುವ ಒಂದು ವೇದಿಕೆಯಾಗಿದೆ.

ಜನವಾದಿ ಮಹಿಳಾ ಸಂಘಟನೆಯ ಕೋಲಾರ ಜಿಲ್ಲಾ ಸಮಿತಿಯು ಮಹಿಳೆಯರು ಎದುರಿಸುತ್ತಿರುವ ನಾನಾ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸುತ್ತಾ, ನಾನಾ ಬಗೆಯ ಸಮಾಜಮುಖಿ ಚಟುವಟಿಕೆಗಳಲ್ಲಿ ಅವರನ್ನು ತೊಡಗಿಸುವ ಪ್ರಯತ್ನಗಳನ್ನೂ ಮಾಡುತ್ತಿದೆ. ಹಾಗೆಯೇ ಅವರನ್ನು ಸಂಘಟಿಸಿ ಅವರಲ್ಲಿ ಅರಿವು ಜಾಗೃತಿ ಮೂಡಿಸುವ ಕೆಲಸವನ್ನು ಮಾಡುತ್ತ ಬರುತ್ತಿದೆ. ಈ ನಿಟ್ಟಿನಲ್ಲಿ ಈ ಸಮಿತಿಯು ಯೋಜಿಸಿದ ಒಂದು ಸಾಮೂಹಿಕ ಆಂದೋಲನವು ವಿಶೇಷವಾಗಿ ಎಲ್ಲರ ಗಮನ ಸೆಳೆಯುತ್ತಿದೆ. ಅದು ಮಹಿಳಾ ಸಂಘಟನೆಯ ಸಾಮೂಹಿಕ ಸದಸ್ಯತ್ವ ಆಂದೋಲನ ಹಾಗು ಸಾಮೂಹಿಕವಾಗಿ ಸಸಿ ನೆಡುವ ಕಾರ್ಯಕ್ರಮ.

ವಿಶಿಷ್ಟ ಸ್ವಾತಂತ್ರ್ಯ ದಿನಾಚರಣೆ–ಸಸಿ ನೆಡುವ ಅಭಿಯಾನ

ಆಗಸ್ಟ್ 15, 2014 ರಂದು ಕೋಲಾರ ಜಿಲ್ಲೆಯ ಸುಮಾರು 210 ಗ್ರಾಮಗಳಲ್ಲಿ ಮಹಿಳೆಯರು ಗುಂಪು ಗುಂಪಾಗಿ ನಿಂತು ಸಾಮೂಹಿಕವಾಗಿ ಸಸಿ ನೆಡುವ ಕೆಲಸದಲ್ಲಿ ನಿರತರಾಗಿದ್ದರು. ದೇಶದ 68 ನೇ ಸ್ವಾತಂತ್ರ್ಯ ದಿನದಂದು ಜಿಲ್ಲೆಯ ಈ ಗ್ರಾಮಗಳಲ್ಲಿ ಒಟ್ಟಾರೆ ಸುಮಾರು 30 ಸಾವಿರ ಸಸಿಗಳನ್ನು ನೆಡಲಾಗಿದೆ.

ಯಾಕೆ ಮೂವತ್ತು ಸಾವಿರ ?

ಮೇ ತಿಂಗಳಿನಲ್ಲಿ 'ಜನವಾದಿ ಮಹಿಳಾ ಸಂಘಟನೆ'ಯ ಒಂದು ದಿನದ ಸಾಮೂಹಿಕ ಸದಸ್ಯತ್ವ ಆಂದೋಲನದ ಮೂಲಕ 28 ಸಾವಿರಕ್ಕೂ ಅಧಿಕ ಸದಸ್ಯತ್ವ ನೋಂದಾಯಿಸಲಾಗಿದೆ. ಆ ನಂತರ ಆದ ಸದಸ್ಯತ್ವ ಸೇರಿ ಜಿಲ್ಲೆಯ ಸದಸ್ಯತ್ವ ಸುಮಾರು 30 ಸಾವಿರದಷ್ಟಾಗಿದೆ. ಈ ಪ್ರತಿಯೊಂದು ಸದಸ್ಯತ್ವಕ್ಕೆ ಒಂದು ಸಸಿ ನೆಡುವುದು ಎಂಬ ಯೋಜನೆಯಂತೆ ಕಾರ್ಯಕ್ರಮ ರೂಪಿಸಿ ಯಶಸ್ವಿಯಾದ ಸಸಿ ನೆಡುವ ಈ ಆಂದೋಲನ ನಡೆದಿದೆ.

'ಸಾಮೂಹಿಕ ಸದಸ್ಯತ್ವ ಅಂದೋಲನ'ದ ಹಿಂದಿನ ಸ್ಫೂರ್ತಿ

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ–ಯಂದು ಅಂದರೆ ಮಾರ್ಚ್ 8, 2014ರಂದು ಕೋಲಾರ ಜಿಲ್ಲೆಯಲ್ಲಿ ಮಹಿಳೆಯರಿಗೆ ಬಸ್ಸುಗಳಲ್ಲಿ ಆಸನಗಳನ್ನು ಕಾಯ್ದಿರಿಸುವ ಹಕ್ಕೊತ್ತಾಯಕ್ಕಾಗಿ ನಡೆಸಿದ ಹೋರಾಟದ ಭಾಗವಾಗಿ ಅದೇ ದಿನ 'ಉರಟ ಅಗ್ರಹಾರ' ಎಂಬ ಗ್ರಾಮದಲ್ಲಿ ಸದಸ್ಯತ್ವ ನೋಂದಾವಣೆ ಉದ್ಘಾಟನೆ ನಡೆಯಿತು. ಈ ಸಂದರ್ಭದಲ್ಲಿ 100 ಹಳ್ಳಿಗಳಲ್ಲಿ ಇಂತಹದನ್ನು ಒಮ್ಮೆಲೆ ಏಕೆ ಮಾಡಬಾರದೆಂಬ ಆಲೋಚನೆಯೊಂದಿಗೆ ರೂಪುಗೊಂಡ ಬೃಹತ್



ಮಟ್ಟದ ಅಭಿಯಾನದ ಚಿಂತನೆಯೇ ಈ ಸಾಮೂಹಿಕ ಸದಸ್ಯತ್ವ ಆಂದೋಲನದ ಹಿಂದಿನ ಪ್ರೇರಣೆ.

ಒಂದು ದಿನದ ಸದಸ್ಯತ್ವ ಅಭಿಯಾನ – 28,730 ಮಹಿಳಾ ಸದಸ್ಯತ್ವ ನೋಂದಾವಣೆ:

ಜನವಾದಿ ಮಹಿಳಾ ಸಂಘಟನೆಯ ಕೋಲಾರ ಜಿಲ್ಲಾ ಸಮಿತಿಯಿಂದ ಈ 'ಏಕದಿನ ಸದಸ್ಯತ್ವ ಅಭಿಯಾನ'ವು ಮೇ 30, 2014 ನಡೆಯಿತು. ಅಂದು ಒಂದೇ ದಿನ 28,730 ಮಹಿಳಾ ಸದಸ್ಯತ್ವ ನೋಂದಾವಣೆಯಾಗಿದೆ. ಏಕಕಾಲದಲ್ಲಿ ಕೋಲಾರ ಜಿಲ್ಲೆಯ 5 ತಾಲ್ಲೂಕುಗಳ 210 ಹಳ್ಳಿ ಮತ್ತು ನಗರ ಪ್ರದೇಶದಲ್ಲಿ, 9 ತಂಡಗಳ ಮೇಲುಸ್ತುವಾರಿಯಲ್ಲಿ ಸದಸ್ಯತ್ವ ನೋಂದಾವಣೆ ನಡೆಸಲಾಗಿದೆ. ಸುಮಾರು 1,600 ಕಾರ್ಯಕರ್ತರು ಹಾಗೂ ಮುಖಂಡರು, ಹಲವಾರು ಹಿತೈಷಿಗಳು ಈ ಅಭಿಯಾನದಲ್ಲಿ ಭಾಗಿಗಳಾಗಿದ್ದರು. ಜನ ಸಮುದಾಯದಿಂದ ಸಿಕ್ಕ ಅಭೂತಪೂರ್ವ ಸ್ಪಂದನೆಯಿಂದಾಗಿ ಜಿಲ್ಲೆಯ ಮಹಿಳಾ ಚಳುವಳಿಯಲ್ಲಿ ಇದು ಒಂದು ಹೊಸದಾಖಲೆ ಸೃಷ್ಠಿಸಿದೆ ಎಂದರೆ ತಪ್ಪಾಗಲಾರದು.

ಈ ಅಭಿಯಾನದ ಸಂದರ್ಭದಲ್ಲಿ ಗುರುತಿಸಲಾದ ಸಮಸ್ಯೆಗಳ ಆಧಾರದಲ್ಲಿ ಹೊಸ ಚಳುವಳಿ ಕಟ್ಟಲು ನಿರ್ಣಯಿಸಲಾಗಿದೆ. ಜಿಲ್ಲೆಯ 5 ತಾಲ್ಲೂಕುಗಳ ಸುಮಾರು 175 ಹಳ್ಳಿ/ನಗರ ಪ್ರದೇಶಗಳಲ್ಲಿ ಕನಿಷ್ಠ ಒಂದು ಹಳ್ಳಿಗೆ 175 ಸದಸ್ಯತ್ವದಂತೆ, 25,000 ಮಹಿಳಾ ಸದಸ್ಯರನ್ನು ಏಕದಿನದಲ್ಲಿ ನೋಂದಾಯಿಸುವುದು, ಕೋಲಾರದಲ್ಲಿ 14,000, ಬಂಗಾರಪೇಟೆಯಲ್ಲಿ 3,500, ಶ್ರೀನಿವಾಸಪುರದಲ್ಲಿ 3,500, ಮಾಲೂರು 3,500, ಮುಳಬಾಗಿಲಿನಲ್ಲಿ 3,500 ಸದಸ್ಯತ್ವ ಗುರಿ ನಿಗದಿ ಮಾಡಿಕೊಂಡು ಯೋಜಿಸಲಾಗಿತ್ತು. 175 ಹಳ್ಳಿಗಳಲ್ಲಿ ಗ್ರಾಮಸಭೆ/ಘಟಕಗಳ ಸಭೆ/ಸಮಾವೇಶಗಳನ್ನು ನಡೆಸುವುದು ಮತ್ತು ಸಮಿತಿಗಳನ್ನು ರಚಿಸುವುದು. ಸದಸ್ಯರಾದವರ ಪಟ್ಟಿಯನ್ನು ತಯಾರಿಸುವುದು. ಸದಸ್ಯತ್ವ ಅಭಿಯಾನ ಅನುಷ್ಠಾನ ರೂಪುರೇಷೆ ಚರ್ಚಿಸಲು ಜಿಲ್ಲಾ ಮಟ್ಟದ ಸಮಾವೇಶವನ್ನು ಜಿಲ್ಲಾ ಕೇಂದ್ರದಲ್ಲಿ ನಡೆಸುವುದು. ನಿಗದಿತ ನಮೂನೆಯಲ್ಲಿ ಪ್ರತಿ ಗ್ರಾಮದಿಂದ ಗ್ರಾಮದ ಸಮಸ್ಯೆಗಳ ಕುರಿತು ಮಾಹಿತಿ ಸಂಗ್ರಹಿಸುವುದು ಮುಂತಾದುವನ್ನು ಯೋಜನೆ ಒಳಗೊಂಡಿತ್ತು. ಈ ನಾನಾ ದೃಷ್ಟಿಯಿಂದಲೂ ಆಂದೋಲನ ಯಶಸ್ಸು ಸಾಧಿಸಿದೆ.

ಜಿಲ್ಲಾ ಸಮಾವೇಶ :

ಆಂದೋಲನಕ್ಕೆ ಪೂರ್ವಬಾವಿ ಜಿಲ್ಲಾ ಸಮಾವೇಶವೊಂದನ್ನು ಸಂಘಟಿಸಿಲಾಗಿತ್ತು. ಈ ಸಮಾವೇಶದಲ್ಲಿ ಸಭೆಗಳು ಹಾಗೂ ಪೂರ್ವ ತಯಾರಿಗಳು ನಡೆದ ಪ್ರದೇಶದಿಂದ ಅಗತ್ಯ ಮಾಹಿತಿ ಸಂಗ್ರಹಿಸಿದ ನಮೂನೆಯೊಂದಿಗೆ ಕಾರ್ಯಕರ್ತರು ಅತ್ಯಂತ ಉತ್ಸಾಹದಿಂದ ಭಾಗವಹಿದ್ದರು. ಅಲ್ಲಿ ಸಾಮೂಹಿಕ ಸದಸ್ಯತ್ವ ಆಂದೋಲನದ ಕುರಿತು ಎಲ್ಲರಿಗೂ ಮನನ ಮಾಡಿಕೊಡಲಾಯಿತು. ಸಭೆಗಳನ್ನು ನಡೆಸಿದ ಪ್ರತಿಹಳ್ಳಿಯಿಂದಲೂ ಕಾರ್ಯಕರ್ತರು ಭಾಗವಹಿಸಿದ್ದು ವಿಶೇಷವಾಗಿತ್ತು. ಅಭಿಯಾನದ ಮುಂದಿನ ತಯಾರಿಗಳ ಭಾಗವಾಗಿ ಗ್ರಾಮಗಳಲ್ಲಿ ಸಂಘಟನೆಯ ಸರ್ವಸದಸ್ಯರ ಸಭೆಗಳನ್ನು ನಡೆಸುವುದು, ಸಂಘಟನಾ ಸಮಿತಿಗಳನ್ನು/ಘಟಕಗಳನ್ನು ರಚಿಸುವುದು. ಸಭೆಗಳನ್ನು ನಡೆಸುವುದು, ಅಭಿಯಾನದ ಯಶಸ್ವಿಗೆ ಮೇಲುಸ್ತುವಾರಿ ವಹಿಸುವುದು ಮುಂತಾಗಿ ನಿರ್ಧರಿಸಿ ಜಾರಿಗೊಳಿಸಲಾಯಿತು.

ಉತ್ತಮ ಪೂರ್ವ ತಯಾರಿಗಳೊಂದಿಗೆ ನಡೆದ ಅಂದೋಲನದಲ್ಲಿ ಗುರಿ ಮೀರಿ 210 ಹಳ್ಳಿಗಳಲ್ಲಿ ಸುಮಾರು 1,600 ಕ್ಕೂ ಹೆಚ್ಚಿನ ಕಾರ್ಯಕರ್ತರು, ಮುಖಂಡರು ಪಾಲ್ಗೊಂಡಿದ್ದರು. 40–50 ಹಳ್ಳಿಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವ ಮುಖಾಂತರ, ಕೆಲವು ಹಳ್ಳಿಗಳಲ್ಲಿ ತಂಡಗಳ ಮುಖಾಂತರ ಸದಸ್ಯತ್ವ ನೋಂದಾವಣೆ ಬೆಳಿಗ್ಗೆಯಿಂದ ರಾತ್ರಿಯವರೆಗೂ ನಡೆದದ್ದು ವಿಶೇಷವಾಗಿದೆ.

ಅಭಿಯಾನ ವೀಕ್ಷಣೆಗೆ ಹಾಗೂ ಮಾರ್ಗದರ್ಶನಕ್ಕೆ ಸಂಘಟನೆಯ ರಾಜ್ಯ ಸಮಿತಿ ಸದಸ್ಯರು–ಮುಖಂಡರನ್ನು ಆಹ್ವಾನಿಸಲಾಗಿತ್ತು. ಸಂಗಾತಿಗಳಾದ ಕೆ.ಎಸ್. ವಿಮಲ, ದೇವಿ, ಶಾರದ, ಸುನಂದ, ಸುನೀತ ಮುಂತಾದವರು ಆಗಮಿಸಿ ಅಭಿಯಾನದ ಯಶಸ್ವಿಗೆ ಮಾರ್ಗದರ್ಶನ–ಸಹಕಾರ ನೀಡಿದರು.

ಸುಮಾರು 25 ದಿನಗಳ ಕಾಲ ಕೆಲಸ ಮಾಡಿದ ಎಲ್ಲಾ ಮುಖಂಡರಲ್ಲಿ ಸ್ಥಳೀಯ ಮಟ್ಟದ ಕಾರ್ಯಕರ್ತರಲ್ಲಿ ಸಂಜೆಯ ವೇಳೆಗೆ 'ನಾವೆಲ್ಲರೂ ಸೇರಿ ಜಿಲ್ಲೆಯಲ್ಲಿ ದೊಡ್ಡ ಸಾಧನೆಯನ್ನು ಮಾಡಿದ್ದೇವೆ.' ಎಂಬ ಹರ್ಷ ಅವರ ನಗುಮುಖದಲ್ಲಿ ಎದ್ದು ಕಾಣುತ್ತಿತ್ತು.

ಅಭಿಯಾನದ ಅನುಭವ ಹಂಚಿಕೆ–ಜಿಲ್ಲಾ ಸಮಾವೇಶ

ಪ್ರಬಲ ಮಹಿಳಾ ಚಳುವಳಿ– ಜನಾಂದೋಲನ ರೂಪಿಸುವ ನಿಟ್ಟಿನಲ್ಲಿ–ಎದ್ದು ಬರುವ ಚಳುವಳಿಯ ಅಲೆಗಳನ್ನು ಸಂಘಟನೆಯಾಗಿ ಪರಿವರ್ತಿಸುವ ದೂರದೃಷ್ಠಿಯಿಂದ ಅಭಿಯಾನದಲ್ಲಿ ತಳಮಟ್ಟದಲ್ಲಿ ಕೆಲಸ ಮಾಡಿದ ಎಲ್ಲಾ ಕಾರ್ಯಕರ್ತರ ಅಭಿಪ್ರಾಯ ಅನುಭವವನ್ನು ಹಂಚಿಕೊಳ್ಳುವ ಉದ್ದೇಶದಿಂದ ಅಭಿಯಾನದ ಮರುದಿನ 31–05–2014ರಂದು 'ಕಾರ್ಯಕರ್ತರ ಅನುಭವ ಹಂಚಿಕೆ–ಜಿಲ್ಲಾ ಸಮಾವೇಶ'ವನ್ನು ಕೋಲಾರದಲ್ಲಿ ಸಂಘಟಿಸಲಾಯಿತು.

ಸದಸ್ಯತ್ವ ಮಾಡಿರುವ ಪ್ರತಿ ಗ್ರಾಮಗಳಿಂದ 5 ಜನರಂತೆ ಸದಸ್ಯತ್ವದ ದಾಖಲೆ, ಹಣ, ಸದಸ್ಯರ ಪಟ್ಟಿಯೊಂದಿಗೆ ಆಹ್ವಾನಿಸಿಲಾಗಿತ್ತು. ಕಾರ್ಯಕರ್ತರು ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ಕಾತುರ ಉತ್ಸಾಹ ತೋರಿದರು. 210 ಹಳ್ಳಿಗಳ ಸುಮಾರು 1,100ಕ್ಕೂ ಹೆಚ್ಚಿನ ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು.

ನೀರಿನ ಬರದ ಬವಣೆಯಲ್ಲಿ ನಲುಗುತ್ತಿರುವ ಜಿಲ್ಲೆಗೆ ಶಾಶ್ವತ ನೀರಾವರಿ ಯೋಜನೆ ಜಾರಿಯಾಗಬೇಕೆಂಬ ಘೋಷಣೆಯೊಂದಿಗೆ ಗಿಡ–ಕ್ಕೆ ನೀರು ಹಾಕುವ ಮುಖಾಂತರ ಸಮಾವೇಶಕ್ಕೆ ಚಾಲನೆ ನೀಡಲಾಯಿತು. ಅತ್ಯಂತ ಹೆಚ್ಚು ಸದಸ್ಯತ್ವ ನೋಂದಾಯಿಸಿದ ಬಂಗಾರಪೇಟೆ ತಾಲ್ಲೂಕಿನ ದೊಡ್ಡೂರು ಕರಪನಹಳ್ಳಿ ಘಟಕದ ಸರಸ್ವತಮ್ಮ, ಮಮತ ಅವರುಗಳು ಸದಸ್ಯತ್ವ ರಸೀದಿಯ ಉಳಿಕೆ ದಾಖಲೆಯನ್ನು ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಲಕ್ಷ್ಮಿಯವರಿಗೆ ನೀಡುವ ಮುಖಾಂತರ ಸಮಾವೇಶ ಉದ್ಘಾಟನೆಗೊಂಡಿತು. ಹಿರಿಯ ಸಂಗಾತಿ ಕೆ.ಎಸ್.ವಿಮಲ ಉದ್ಘಾಟನೆ ಮಾಡಿದರು. 'ವಿಶಿಷ್ಟ ಅಭಿಯಾನ ಕೋಲಾರ ಜಿಲ್ಲೆಯಲ್ಲಿ ಅಲ್ಲದೆ ರಾಜ್ಯದಲ್ಲಿಯೂ ಒಂದು ಮಾದರಿಯನ್ನು ಸೃಷ್ಟಿಸಿದೆ. ನನ್ನ ಸಂಘಟನಾ ಅನುಭವದಲ್ಲಿ ದೊಡ್ಡ ಖುಷಿಯನ್ನು ನೀಡಿದೆ.' ಎಂದು ಅಭಿಪ್ರಾಯ ಅವರು ವ್ಯಕ್ತಪಡಿಸಿದರು.

ತಳಮಟ್ಟದ ಕಾರ್ಯಕರ್ತರು ತಮ್ಮ ಅನುಭವಗಳನ್ನು ಸಮಾವೇಶದಲ್ಲಿ ತೆರೆದಿಡುವುದರೊಂದಿಗೆ ಮಹಿಳೆಯರ ಮೇಲಿನ ದೌರ್ಜನ್ಯ, ಶಾಶ್ವತ ನೀರಾವರಿ, ಕುಡಿಯುವ ನೀರಿನ ಶುದ್ದೀಕರಣ ಘಟಕಗಳ ಸ್ಥಾಪನೆ, ಆರೋಗ್ಯ ಶಿಬಿರಗಳು, ಗಿಡ ನೆಡುವ ಕಾರ್ಯಕ್ರಮ, ಶೌಚಾಲಯಗಳ ನಿರ್ಮಾಣ, ಸ್ತ್ರೀ ಶಕ್ತಿ ಸಂಘಗಳಿಗೆ ಸುತ್ತು ನಿಧಿ ಹೆಚ್ಚಳ ಮತ್ತು ಸಾಲ, ಶಿಕ್ಷಣ, ಆರೋಗ್ಯ, ನೈರ್ಮಲ್ಯ ಮುಂತಾದ ಪ್ರಶ್ನೆಗಳು–ಸಮಸ್ಯೆಗಳನ್ನು ಎತ್ತಿಕೊಂಡು ಜಿಲ್ಲೆಯಲ್ಲಿ ಹೋರಾಟ–ಕಾರ್ಯಕ್ರಮಗಳನ್ನು ರೂಪಿಸಲು ಅವರು ಸಲಹೆಗಳನ್ನಿತ್ತರು. ಈ ಎಲ್ಲಾ ಸಲಹೆಗಳನ್ನು ಆಧರಿಸಿ ಹಂತ ಹಂತವಾಗಿ ಹೋರಾಟಗಳನ್ನು ಕಾರ್ಯಕ್ರಮಗಳನ್ನು ರೂಪಿಸಲು ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಅತಿಥಿಗಳಾಗಿ ಭಾಗವಹಿಸಿದ ಹಿರಿಯ ಸಂಗಾತಿ ಕೆ. ನೀಲಾ 'ಮಾದರಿ ಸದಸ್ಯತ್ವ ಅಭಿಯಾನ ಚಳುವಳಿ ಜಿಲ್ಲೆಯಿಂದ ರಾಜ್ಯಕ್ಕೆ ವ್ಯಾಪಿಸುತ್ತದೆ. ಅಲ್ಲದೆ ಜಿಲ್ಲೆ–ರಾಜ್ಯದ ಚಳುವಳಿಯಲ್ಲಿ ನೆಗೆತ ಕಾಣುತ್ತದೆ. ಕೋಲಾರ ಜಿಲ್ಲೆಯಲ್ಲಿ ಆಗಿರುವ ಈ ಎಲ್ಲಾ ಕೆಲಸಗಳು ಚಳುವಳಿಯಾಗಿ ರೂಪುಗೊಂಡು ಸಂಘಟನೆಯಾಗಿ ಪರಿವರ್ತನೆಯಾಗಲಿ.' ಎಂದರು. ಮತ್ತೊಬ್ಬ ಹಿರಿಯ ಸಂಗಾತಿ ಡಾ॥ ಮೀನಾಕ್ಷಿ ಬಾಳಿಯವರು ಈ ಸಾಧನೆ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾ ಸಮಾವೇಶಕ್ಕೆ ಶುಭ ಕೋರಿ ವಿದ್ಯಾರ್ಥಿ ಚಳುವಳಿಯ ನಾಯಕರು, ಸಾಮಾಜಿಕ ಕಾರ್ಯಕರ್ತರೂ ಆದ ಎಂ.ವಿ. ನಾರಾಯಣಸ್ವಾಮಿ ಮಾತನಾಡಿ ಮಹಿಳಾ ಸಮಸ್ಯೆಗಳ ಜೊತೆಗೆ ಶಾಶ್ವತ ನೀರಾವರಿಗಾಗಿ ಹೋರಾಟಕ್ಕೆ ಮುಂದಾಗಲು ಕರೆ ನೀಡಿದರು. ಎಸ್‌ಎಫ್‌ಐ, ಡಿವೈಎಫ್‌ಐ, ಸಿಐಟಿಯು ಪರವಾಗಿ ಮುಖಂಡರು ಶುಭ ಕೋರಿ ಮಾತನಾಡಿದರು. ●

ಜನಶಕ್ತಿ
ಕನ್ನಡ ವಾರಪತ್ರಿಕೆ

ಮರಕುಂಬಿ ದಲಿತರ ಮೇಲೆ ಹಲ್ಲೆ: ಗುಡಿಸಲುಗಳಿಗೆ ಬೆಂಕಿ ಅಪರಾಧಿಗಳ ವಿರುದ್ಧ ಕಠಿಣಕ್ರಮ ಜರುಗಿಸಲು ಸಿಪಿಐ(ಎಂ) ಆಗ್ರಹ



ಮರಕುಂಬಿ ಎಂಬ ಒಂದು ಗ್ರಾಮದಲ್ಲಿ ದಲಿತರಿಗೆ ಆಗುತ್ತಿರುವ ತಾರತಮ್ಯ, ಕ್ಷೌರ ನಿರಾಕರಣೆಯ ಪ್ರಕರಣ ಇತ್ಯಾದಿಗಳ ಕುರಿತು 'ಜನಶಕ್ತಿ'ಯಲ್ಲಿ ನಿರಂತರವಾಗಿ ಓದುತ್ತ ಬರುತ್ತಿದ್ದೀರಿ. ತಮ್ಮ ಜಾತಿವಾದಿ ನಡವಳಿಕೆಗಳನ್ನು ತಿದ್ದಿಕೊಳ್ಳಲು ಸಿದ್ದವಿಲ್ಲದ ಜಾತಿವಾದಿ ಶಕ್ತಿಗಳು ಗ್ರಾಮದಲ್ಲಿ ಭೀತಿಯ ಮತ್ತು ಆತಂಕದ ವಾತಾವರಣವನ್ನು ಸೃಷ್ಟಿಸಿವೆ. ಈ ದುರದೃಷ್ಟಕರ ಬೆಳವಣಿಗೆಯ ಸಂದರ್ಭದಲ್ಲಿ ಅನ್ಯಾಯಕ್ಕೆ ತುತ್ತಾದ ದಲಿತರ ಪರವಾಗಿ ದೃಢವಾಗಿ ನಿಂತಿರುವ ಸಿಪಿಐ(ಎಂ) ಪಕ್ಷವು ನ್ಯಾಯಕ್ಕಾಗಿ ಚಳುವಳಿಯನ್ನು ತೀವ್ರಗೊಳಿಸಲು ತೀರ್ಮಾನಿಸಿದೆ. ಇದಕ್ಕೆ ಜಾತಿ ತಾರತಮ್ಯ ಅನ್ಯಾಯವನ್ನು ವಿರೋಧಿಸುವ ಎಲ್ಲ ಮನಸ್ಸುಗಳ ಬೆಂಬಲ ಬೇಕಾಗಿದೆ.

ಕೊಪ್ಪಳ ಜಿಲ್ಲೆ, ಗಂಗಾವತಿ ತಾಲೂಕಿನ ಮರಕುಂಬಿ ಗ್ರಾಮದ ದಲಿತರ ಮೇಲೆ ಗ್ರಾಮದ ಸವರ್ಣೀಯರು ಮತ್ತೊಮ್ಮೆ ದಾಳಿ ಮಾಡಿ 30ಕ್ಕೂ ಹೆಚ್ಚು ದಲಿತರನ್ನು ಮತ್ತು ಅವರ ಮುಖಂಡ ಹೆಚ್. ಗಂಗಾಧರಯ್ಯ ಅವರನ್ನು ಗಾಯಗೊಳಿಸಿ, ದಲಿತರ ನಾಲ್ಕು ಗುಡಿಸಲುಗಳಿಗೆ ಬೆಂಕಿಹಚ್ಚಿ ಸುಟ್ಟುಹಾಕಿದ ಘಟನೆ ನಡೆದಿದೆ. ಗಾಯಗೊಂಡವರನ್ನು ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಗಿದ್ದು 92 ಆರೋಪಿಗಳ ಪೈಕಿ 42 ಮಂದಿಯನ್ನು ಬಂಧಿಸಲಾಗಿದೆ. ಎರಡು ತಿಂಗಳ ಹಿಂದೆ ಮರಕುಂಬಿ ಗ್ರಾಮದಲ್ಲಿ ದಲಿತರಿಗೆ ಕ್ಷೌರದ ಅಂಗಡಿ ಪ್ರವೇಶ ನಿರಾಕರಿಸಿ ಗ್ರಾಮದ ದಲಿತರನ್ನು ಸಾಮಾಜಿಕ ಬಹಿಷ್ಕಾರಕ್ಕೆ ಒಳಪಡಿಸಿದ ಪ್ರಕರಣದ ಅಪರಾಧಿಗಳ ವಿರುದ್ಧ ಪೊಲೀಸ್ ಇಲಾಖೆ ಕಠಿಣವಾದ ಕ್ರಮ ಜರಗಿಸದಿರುವುದರಿಂದ ದಲಿತರ ಮೇಲೆ ದೌರ್ಜನ್ಯ ಮತ್ತೆ ಮತ್ತೆ ಮರುಕಳಿಸುತ್ತಿದೆ.

ಸವರ್ಣೀಯರ ಒತ್ತಡಕ್ಕೆ ಮಣಿದ ಜಿಲ್ಲಾಡಳಿತ ಗ್ರಾಮದಲ್ಲಿದ್ದ ಚಹದ ಅಂಗಡಿಯನ್ನು ತೆರವುಗೊಳಿಸಿ ದಲಿತರಿಗೆ ಗ್ರಾಮದಲ್ಲಿ ಚಹ ಸಿಗದಂತೆ ಮಾಡಿದ್ದಾರೆ. ಕಿರಾಣಿ ಅಂಗಡಿಗಳಲ್ಲಿ ದಲಿತರಿಗೆ ಕಿರಾಣಿ ಸಾಮಾನುಗಳ ಮಾರಾಟ ನಿಲ್ಲಿಸಿದ್ದಾರೆ. ಗ್ರಾಮದ ದಲಿತ ಕೂಲಿಕಾರರಿಗೆ ಗದ್ದೆಗಳಲ್ಲಿ ಕೆಲಸ ನೀಡುವುದನ್ನು ನಿಲ್ಲಿಸಿ ಬೇರೆ ಗ್ರಾಮಗಳಿಂದ ಕೂಲಿಕಾರರನ್ನು ಕೆಲಸಕ್ಕೆ ಕ–ರೆತರುತ್ತಾರೆ. ದಲಿತರಿಗೆ ಸಾರ್ವಜನಿಕ ನಲ್ಲಿಯಿಂದ ಕುಡಿಯುವ ನೀರು ಸಂಗ್ರಹಿಸಲು ಬಿಡುತ್ತಿಲ್ಲ. ದಲಿತರ ಬಟ್ಟೆಗಳನ್ನು ಹೊಲಿದುಕೊಡಬಾರದೆಂದು ಬಟ್ಟೆ ಹೊಲಿಯುವವರಿಗೆ ಬೆದರಿಕೆ ಹಾಕಲಾಗಿದೆ. ಗ್ರಾಮದಿಂದ ಹೊರಡುವ ಆಟೋರಿಕ್ಷಾಗಳಲ್ಲಿ ದಲಿತರಿಗೆ, ಶಾಲೆಗೆ ಹೋಗುವ ದಲಿತ ವಿದ್ಯಾರ್ಥಿಗಳಿಗೂ ಸಹ ಪ್ರವೇಶ ನಿರಾಕರಿಸಲಾಗುತ್ತಿದೆ. ದಲಿತರೊಂದಿಗೆ ದಲಿತ ಮುಖಂಡರೊಂದಿಗೆ ಯಾರೂ ಮಾತನಾಡಬಾರದೆಂದೂ ಸವರ್ಣೀಯ ಮುಖಂಡರು ಫತ್ವಾ ಹೊರಡಿಸಿದ್ದಾರೆ. ಹೀಗೆ ಎರಡು ತಿಂಗಳುಗಳಿಂದ ಸಾಮಾಜಿಕ ಬಹಿಷ್ಕಾರ ಅನುಭವಿಸುತ್ತಿರುವ ದಲಿತ ಕುಟುಂಬಗಳಿಗೆ ಪರಿಹಾರ ನೀಡಿ, ರಕ್ಷಣೆ ಒದಗಿಸುವಲ್ಲಿ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ.

ಈ ನಡುವೆ ಇಬ್ಬರು ದಲಿತ ಯುವಕರ ಮೇಲೆ ಸವರ್ಣೀಯರು ಹಲ್ಲೆ ಮಾಡಿ ಅವಾಚ್ಯ ಶಬ್ಧಗಳಿಂದ ಬೈದು ಜಾತಿನಿಂದನೆ ಮಾಡಿದ್ದಾರೆ. ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಕ್ರಮಜರಗಿಸಬೇಕೆಂದು ದೂರು ಸಲ್ಲಿಸಲಾಗಿದ್ದರೂ ಪೊಲೀಸರು ಪ್ರಕರಣಗಳನ್ನು ಸಮರ್ಪಕವಾಗಿ ದಾಖಲು ಮಾಡದಿದ್ದುದರಿಂದ ಅಪರಾಧಿಗಳಿಗೆ ನ್ಯಾಯಾಲಯದಲ್ಲಿ ವಿಳಂಬವಿಲ್ಲದೆ ಜಾಮೀನು ದೊರೆತಿದೆ. ಇದರಿಂದ ಕುಮ್ಮಕ್ಕು ಪಡೆದಿರುವ ಸವರ್ಣೀಯರು ದಲಿತರಿಗೆ ನಿರಂತರ ಕಿರುಕುಳ ನೀಡುತ್ತಾ ಬಂದಿದ್ದಾರೆ. ಜಿಲ್ಲಾಧಿಕಾರಿ ನಡೆಸಿದ ಸಂಧಾನ ಸಭೆ, ಮರಕುಂಬಿಗೆ ಜಿಲ್ಲಾ ನ್ಯಾಯಾಧೀಶರ ಭೇಟಿ ಮುಂತಾದ ಕ್ರಮಗಳಿಂದ ಯಾವುದೇ ಪ್ರಯೋಜನವಾಗಿಲ್ಲ.

ಕಳೆದ ಎರಡು ತಿಂಗಳುಗಳಿಂದ ಮರಕುಂಬಿ ಗ್ರಾಮದ ದಲಿತರು ಜಾತಿ ದ್ವೇಷದ ದಳ್ಳುರಿಯಲ್ಲಿ ನಲುಗಿದ್ದರೂ ಕ್ಷೇತ್ರದ ಶಾಸಕರೂ ಸಚಿವರೂ ಆಗಿರುವ ಶಿವರಾಜ ತಂಗಡಗಿ ಅವರು ಮರಕುಂಬಿ ಗ್ರಾಮಕ್ಕೆ ಒಂದು ಬಾರಿಯೂ ಭೇಟಿ ನೀಡದಿರುವುದು ತೀರಾ ಖಂಡನಾರ್ಹವಾಗಿದೆ. ಕಳೆದ ಚುನಾವಣೆಯಲ್ಲಿ ಮರಕುಂಬಿಯ ಮಾದಿಗ ಸಮುದಾಯಕ್ಕೆ ಸೇರಿದ ದಲಿತರು ಭೋವಿ ಸಮುದಾಯಕ್ಕೆ ಸೇರಿದ ತನಗೆ ಮತ ನೀಡಿಲ್ಲ ಎಂಬ ಕಾರಣಕ್ಕಾಗಿ ಮರಕುಂಬಿಯ ಮಾದಿಗ ದಲಿತರ ವಿರುದ್ಧ ಸವರ್ಣೀಯರ ಬೆಂಬಲಕ್ಕೆ ನಿಂತಿದ್ದಾ–ರೆ. ಮರಕುಂಬಿ ಗ್ರಾಮದಲ್ಲಿ ಅಸ್ಪೃಶ್ಯ ದಲಿತರ ವಿರುದ್ಧ ಸ್ಪರ್ಶ ದಲಿತರನ್ನು ಸವರ್ಣೀಯರ ಪರವಾಗಿ ಎತ್ತಿಕಟ್ಟುವುದನ್ನು ಬಿಟ್ಟು ಗ್ರಾಮದಲ್ಲಿ ಶಾಂತಿ ನೆಲೆಸುವಂತೆ ಮಾಡಲು ಪ್ರಯತ್ನಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂತ್ರಿ ತಂಗಡಗಿ ಅವರಿಗೆ ಆದೇಶ ನೀಡಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.



ಸೆ–11 ರಾಜ್ಯವ್ಯಾಪಿ ಎಸ್‌ಪಿ ಕಛೇರಿ ಎದುರು ಪ್ರತಿಭಟನೆಗೆ ಕರೆ

ಗುಡಿಸಲು ಕಳೆದುಕೊಂಡ ದಲಿತರಿಗೆ ಹಾಗೂ ಹಲ್ಲೆಗೊಳಗಾದ ದಲಿತರಿಗೆ ಮಾತ್ರವಲ್ಲ ಎಲ್ಲ ದಲಿತ ಕುಟುಂಬಗಳಿಗೆ ಪರಿಹಾರ ನೀಡಬೇಕು. ಸುಟ್ಟುಹೋದ ಮನೆಗಳನ್ನು ಪುನರ್ ನಿರ್ಮಾಣ ಮಾಡಿಕೊಡಬೇಕು. ದಲಿತರಿಗೆ ಗ್ರಾಮದಲ್ಲಿ ಕ್ಷೌರದ ಅಂಗಡಿ ಮತ್ತು ಚಹದ ಅಂಗಡಿಗಳಿಗೆ ಪ್ರವೇಶ ನೀಡಬೇಕು. ಆಸ್ಪತ್ರೆಯಲ್ಲಿ ದಾಖಲಾಗಿರುವ ದಲಿತ ಗಾಯಾಳುಗಳಿಗೆ ಸರಿಯಾದ ಚಿಕಿತ್ಸೆ ಒದಗಿಸಬೇಕು, ಬಂಧನವನ್ನು ತಪ್ಪಿಸಿಕೊಂಡು ತಲೆಮರೆಸಿರುವ ಎಲ್ಲ ಆರೋಪಿಗಳನ್ನು ಬಂಧಿಸಬೇಕು ಎಂದು ಒತ್ತಾಯಿಸಿ, ಇದೇ ಸೆಪ್ಟೆಂಬರ್ 11 ರಂದು ರಾಜ್ಯದ ಎಲ್ಲ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಎದುರು ಸಿಪಿಐ(ಎಂ) ಪಕ್ಷದ ಆಶ್ರಯದಲ್ಲಿ ಪ್ರತಿಭಟನೆ ನಡೆಸಬೇಕೆಂದು ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಕರೆ ನೀಡಿದೆ. ಈ ಪ್ರತಿಭಟನೆಯಲ್ಲಿ, ಕಾರ್ಮಿಕರು, ರೈತರು, ಕೂಲಿಕಾರರು, ಮಹಿಳೆಯರು, ವಿದ್ಯಾರ್ಥಿ ಯುವಜನರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ನಿತ್ಯಾನಂದಸ್ವಾಮಿ ಮರಕುಂಬಿ ಗ್ರಾಮಕ್ಕೆ ಭೇಟಿಕೊಟ್ಟು ಪರಿಶೀಲನೆ ನಡೆಸಿದ್ದಾರೆ. ಇದುವರೆಗೆ ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್) ಮೊದಲಾದ ಯಾವ ರಾಜಕೀಯ ಪಕ್ಷಗಳು ಮರಕುಂಬಿ ದಲಿತರ ಮೇಲೆ ನಡೆದಿರುವ ಸವರ್ಣೀಯರ ದೌರ್ಜನ್ಯವನ್ನು ಖಂಡಿಸದಿರುವ ಬಗ್ಗೆ ಅವರು ಪತ್ರಿಕಾ ಗೋಷ್ಠಿಯಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಬಂಧನದಿಂದ ತಪ್ಪಿಸಿಕೊಂಡಿರುವ ಆರೋಪಿಗಳು ಅಕ್ಕಪಕ್ಕದ ಗ್ರಾಮಗಳಲ್ಲಿ ಅವಿತುಕೊಂಡಿದ್ದು ಮರಕುಂಬಿ ದಲಿತ ಮಹಿಳೆಯರು ಬಹಿರ್ದೆಸೆಗೆ ಹೋಗುವಾಗ ಅವರಿಗೆ ಬೆದರಿಕೆ ಹಾಕುತ್ತಿದ್ದಾರೆ. ಒಟ್ಟಾರೆ ದಲಿತರು ಆತಂಕದಲ್ಲಿ ಉಸಿರುಗಟ್ಟಿಸುವಂತಹ ವಾತಾವರಣದಲ್ಲಿ ಬದುಕುವಂತಾಗಿದೆ. ಆದ್ದರಿಂದ ರಾಜ್ಯಾದ್ಯಂತ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಎದುರು ಪ್ರತಿಭಟನೆ ಮಾಡುವ ಕಾರ್ಯಕ್ರಮವನ್ನು ಸಿಪಿಐ(ಎಂ) ರಾಜ್ಯ ಮುಖಂಡರು ಘೋಷಿಸಿದ್ದಾರೆ. ಕೊಪ್ಪಳ ಜಿಲ್ಲೆಯ ವಿವಿಧ ದಲಿತ ಹಾಗೂ ಪ್ರಗತಿಪರ ಸಂಘಟನೆಗಳ ಸಹಯೋಗದೊಂದಿಗೆ ವ್ಯಾಪಕವಾದ ಆಂದೋಲನವನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ

ಬೇಡಿಕೆಗಳು

* ದಲಿತರ ಮೇಲೆ ಹಲ್ಲೆ ಮಾಡಿದ ಎಲ್ಲ ಆರೋಪಿಗಳನ್ನು ಕೂಡಲೇ ಬಂಧಿಸಿ ಕ್ರಮ ಜರುಗಿಸಬೇಕು.
* ಮರಕುಂಬಿ ದಲಿತರ ಮೇಲೆ ದಾಖಲು ಮಾಡಲಾದ ಎಲ್ಲಾ ಸುಳ್ಳು ಪ್ರಕರಣಗಳನ್ನು ಹಿಂಪಡೆಯಬೇಕು.
* ಮನೆ/ಗುಡಿಸಲು ಕಳೆದುಕೊಂಡ ದಲಿತರಿಗೆ ಗರಿಷ್ಠ ಪರಿಹಾರ ನೀಡಿ ಮನೆಗಳನ್ನು ಕಟ್ಟಿಕೊಡಬೇಕು.
* ಹಲ್ಲೆಗೊಳಗಾದ ದಲಿತರಿಗೆ ಮಾತ್ರವಲ್ಲ, ಗ್ರಾಮದ ಎಲ್ಲ ದಲಿತ ಕುಟುಂಬಗಳಿಗೆ ಗರಿಷ್ಠ ಪರಿಹಾರ ನೀಡಬೇಕು.
* ಗ್ರಾಮದಲ್ಲಿ ಮೊದಲಿನಂತೆ ಕ್ಷೌರದ ಅಂಗಡಿ ಮತ್ತು ಹೋಟೇಲುಗಳನ್ನು ತೆರೆದು ದಲಿತರಿಗೂ ಅಲ್ಲಿ ಪ್ರವೇಶ ನೀಡಬೇಕು.
* ಆಸ್ಪತ್ರೆಯಲ್ಲಿರುವ ದಲಿತರಿಗೆ ಗುಣಮಟ್ಟದ ಚಿಕಿತ್ಸೆ ನೀಡಬೇಕು.
* ಗ್ರಾಮದ ದಲಿತರಿಗೆ ಮನೆ ನಿವೇಶನಗಳನ್ನು ಮಂಜೂರು ಮಾಡಲು ಖಾಸಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕು.

ತುಮಕೂರು: ಪಶ್ಚಿಮ ಬಂಗಾಳದ ಎಡ ಚಳುವಳಿ ಮೇಲಿನ ದಾಳಿ ಖಂಡಿಸಿ ಸಿಐಟಿಯು ಪ್ರತಿಭಟನೆ

ಪಶ್ಚಿಮ ಬಂಗಾಳದ ಜನರ ಸಮಸ್ಯೆಗಳನ್ನು ಪರಿಹರಿಸುವ ಹೆಸರಿನಲ್ಲಿ ಪರಿವರ್ತನೆಯ ಮಂತ್ರ ಜಪಿಸಿ ಅಧಿಕಾರಕ್ಕೆ ಬಂದಿರುವ ತೃಣಮೂಲ ಕಾಂಗ್ರೆಸ್ ಜನರ ಸಮಸ್ಯೆಗಳನ್ನು ಪರಿಹರಿಸುವ ಬದಲಿಗೆ ಜನರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟ ನಡೆಸುತ್ತಿರುವ ಎಡ ಸಂಘಟನೆಗಳು ಮತ್ತು ಕಾರ್ಮಿಕ ಸಂಘಟನೆಗಳ ಮೇಲೆ ನಿರಂತರವಾದ ದಾಳಿಗಳನ್ನು ನಡೆಸುವ ಮೂಲಕ ಗೂಂಡಾಗಿರಿಯನ್ನು ಹಾಗೂ ಗೂಂಡಾ ಸರ್ಕಾರವನ್ನು ನಡೆಸುತ್ತಿದೆ ಎಂದು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ. ಉಮೇಶ್ ಖಂಡಿಸಿದರು.

ತುಮಕೂರು ನಗರದ ಸ್ವಾತಂತ್ರ್ಯ ಚೌಕದಲ್ಲಿ ಸಿಐಟಿಯು ಸಂಘಟನೆಯ ನೇತೃತ್ವದಲ್ಲಿ –ಪಶ್ಚಿಮ ಬಂಗಾಳದಲ್ಲಿ ಎಡ ಚಳುವಳಿಗಾರರ ಮೇಲೆ ನಡೆಯುತ್ತಿರುವ ದಾಳಿ, ಕೊಲೆ, ದಬ್ಬಾಳಿಕೆಗಳನ್ನು ವಿರೋಧಿಸಿ, ಹೋರಾಟಗಾರರಿಗೆ ಬೆಂಬಲವನ್ನು ಸೂಚಿಸುವ ಸಲುವಾಗಿ ನಡೆದ 'ಬಂಗಾಳ ಸೌಹಾರ್ದ ದಿನ' ಪ್ರಚಾರ ಮತ್ತು ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಜನತೆಯ ಹಿತದೃಷ್ಟಿಯಿಂದ ಕಾನೂನನ್ನು ಕಾಪಾಡಬೇಕಾದ ಸರ್ಕಾರವೇ ತನ್ನ ವಿರೋಧ ಪಕ್ಷದ ನಾಯಕರುಗಳ ಮೇಲೆ ಮತ್ತು ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿರುವ ಸಿಐಟಿಯು ಸಂಘಟನೆಯ ಕಾರ್ಯಕರ್ತರುಗಳ ಮೇಲೆ ಅಧಿಕಾರಕ್ಕೆ ಬಂದಾಗಿನಿಂದಲೂ ದಾಳಿಗಳನ್ನು ನಡೆಸಿಕೊಂಡು ಬಂದಿದ್ದು ಲೋಕಸಭಾ ಚುನಾವಣೆಯಲ್ಲೂ ಸಹಸ್ರಾರು ಮತಗಟ್ಟೆಗಳಲ್ಲಿ ಜನ ಮತ ಚಲಾವಣೆ ಮಾಡದಂತೆ ದಾಳಿಗಳನ್ನು ನಡೆಸಿರುವುದು ಪ್ರಜಾಪ್ರಭುತ್ವ ವಿರೋಧಿಯಾಗಿದೆ.



ಸಾಲದೆಂಬಂತೆ ಹೋರಾಟಗಾರರ ಮನೆಗಳನ್ನು ಧ್ವಂಸ ಮಾಡುವುದು, ಕೊಲೆ ಬೆದರಿಕೆಗಳನ್ನು ಹಾಕುತ್ತಿರುವುದು ತೃಣಮೂಲ ಕಾಂಗ್ರೆಸ್‌ನ ಗೂಂಡಾ ಸರ್ಕಾರದ ವರ್ತನೆಯಾಗಿದೆ ಎಂದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್.ಕೆ. ಸುಬ್ರಮಣ್ಯ ಮಾತನಾಡಿ ಶಾರದಾ ಚಿಟ್‌ಫಂಡ್‌ನ ಹಗರಣದಲ್ಲಿ ತೃಣಮೂಲ ಪಕ್ಷದ ಮುಖಂಡರು ಮತ್ತು ಸಂಸದರು, ಸರ್ಕಾರಿ ಯಂತ್ರವನ್ನು ದುರುಪಯೋಗ ಮಾಡಿಕೊಂಡು ಸಾವಿರಾರು ಕೋಟಿ ರೂ.ಗಳ ದುರ್ವ್ಯವಹಾರ ನಡೆಸಿ ಹಣವನ್ನು ಲೂಟಿ ಮಾಡಿರುವುದು ತನಿಖೆಯಿಂದ ಬಹಿರಂಗವಾಗಿದೆ. ಪಶ್ಚಿಮಬಂಗಾಳ ತೃಣಮೂಲ ಕಾಂಗ್ರೆಸ್‌ನಿಂದ ಆಯ್ಕೆಯಾಗಿರುವ ಲೋಕಸಭಾ ಸದಸ್ಯರೊಬ್ಬರು ಎಡಪಕ್ಷಗಳ ಮತ್ತು ಸಿಐಟಿಯುನ ಹೋರಾಟಗಾರರ ಮನೆಗಳಿಗೆ ನುಗ್ಗಿ ಮಹಿಳೆಯರನ್ನು ಅತ್ಯಾಚಾರ ಮಾಡಿ ಅವರಿಗೆ ಬುದ್ದಿ ಕಲಿಸಿ ಎಂದು ಹೇಳಿಕೆ ನೀಡಿರುವುದು ನಾಚಿಕೆಗೇಡು. ಈ ಸಂಸತ್ ಸದಸ್ಯನನ್ನು ಬಂಧಿಸಬೇಕು ಮತ್ತು ಆತನ ಸಂಸತ್ ಸದಸ್ಯತ್ವವನ್ನು ರದ್ದುಪಡಿಸಬೇಕು ಮತ್ತು ತಮ್ಮದೇ ಪಕ್ಷದ ಸಂಸತ್ ಸದಸ್ಯನ ಹೇಳಿಕೆಯನ್ನು ಖಂಡಿಸದೇ, ಆತನ ವಿರುದ್ಧ ಕ್ರಮವಹಿಸದೇ ಅದನ್ನು ಬೆಂಬಲಿಸುತ್ತಿರುವ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯ ವರ್ತನೆಯನ್ನು ಖಂಡಿಸಿ ಎಲ್ಲರೂ ಪ್ರತಿಭಟಿಸಬೇಕು ಎಂದು ಅವರು ಹೇಳಿದರು. ರಾಷ್ಟ್ರಪತಿಗಳು ಮಧ್ಯ ಪ್ರವೇಶಿಸಿ ಪಶ್ಚಿಮಬಂಗಾಳದಲ್ಲಿ ಎಡರಂಗ ಮತ್ತು ಸಿಐಟಿಯು ಕಾರ್ಯಕರ್ತರ ಮೇಲೆ ನಡೆಯುತ್ತಿರುವ ದಾಳಿಗಳನ್ನು ತಡೆಯಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಿಐಟಿಯುನ ಮುತ್ತುರಾಜ್, ಬಸವರಾಜು, ಸಿದ್ದಾರ್ಥ, ನಂದೀಶಪ್ಪ, ರಾಮಣ್ಣ ಕುಲುಸುಂಬಿ ಡಿವೈಎಫ್‌ಐನ ನಾರಾಯಣಸ್ವಾಮಿ, ರಾಘವೇಂದ್ರ. ಎಸ್. ಮುಂತಾದವರು ನೇತೃತ್ವ ವಹಿಸಿದ್ದರು.

ವರದಿ : ರಾಘವೇಂದ್ರ. ಎಸ್.

ಗಜೇಂದ್ರಗಡ : ಅಲೆಮಾರಿ ಜನಾಂಗಗಳ ಮಕ್ಕಳಿಗೆ ಅನುಕೂಲವಾಗುವ ಆಶ್ರಮ ಶಾಲೆ ಉಳಿಸಲು.. ಏನೇನು ಪಡಿಪಾಟಲು

ಶಾಲೆಗಳ ಸಂಖ್ಯೆ ದಿನೇ ದಿನೇ ಹೆಚ್ಚಬೇಕು. ಹೆಚ್ಚು ಹೆಚ್ಚು ಮಕ್ಕಳು ಶಾಲೆಗೆ ಬರಬೇಕು. ಅಲೆಮಾರಿ ಜನರು, ದಲಿತರು, ಅವಕಾಶ ವಂಚಿತ ವಿಭಾಗದ ಮಕ್ಕಳೂ ಎಲ್ಲರೂ ಶಾಲೆಗೆ ಬರಬೇಕು. ಈ ವಿಭಾಗದ ಮಕ್ಕಳು ಶಾಲೆಗೆ ಬರುವುದು ಸುಲಭದ ಮಾತಲ್ಲ. ಈ ವಿಭಾಗದ ಮಕ್ಕಳಿಗೆ ವಸತಿ ಶಾಲೆಯಂತಹ ಶಾಲೆಗಳನ್ನು ತೆರೆದು ಅಲ್ಲಿ ಉತ್ತಮ ಸೌಕರ್ಯಗಳನ್ನು ಕೊಟ್ಟಲ್ಲಿ ಈ ವಿಭಾಗದ ಮಕ್ಕಳನ್ನು ಶಾಲೆಗೆ ಸೆಳೆಯಲು ತುಂಬಾ ಅನುಕೂಲವಾಗುತ್ತದೆ. ಆಗ ಅವರ ಶೈಕ್ಷಣಿಕ ಪ್ರಗತಿಗೆ ಅವಕಾಶದ ಬಾಗಿಲು ತೆರೆಯುತ್ತದೆ. ಹೊಸದಾಗಿ ಶಾಲೆ ತೆರೆಯಲಾಗದಿದ್ದರೆ ಕನಿಷ್ಟ ಇರುವ ಶಾಲೆಗಳನ್ನಾದರೂ ಉಳಿಸಿ ಚೆನ್ನಾಗಿ ನಡೆಸಬೇಕು.

ಉಹುಂ, ಆಳುವ ಸರ್ಕಾರಗಳಿಗೆ, ಸರ್ಕಾರದ ಅಧಿಕಾರಿಗಳಿಗೆ ಇಂತಹ ಮಾತುಗಳು ರುಚಿಸುವುದಿಲ್ಲ. ಇರುವ ಶಾಲೆಗಳನ್ನು ಮುಚ್ಚಲು ನೆಪ ಹುಡುಕುವುದರಲ್ಲೇ ಇವರಿಗೆ ಸಂತೋಷವಿದೆ. ಈ ವಿಷಯದಲ್ಲಿ ಈ ಮೊದಲು ಬಿಜೆಪಿ ಸರ್ಕಾರ. ಈಗ ರಾಜ್ಯದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರವೂ ಅದೇ ತನ್ನ ನೀತಿ ಎಂದು ತನ್ನ ಕೃತಿಯ ರೂಪದಲ್ಲಿ ಹೇಳುತ್ತಿದೆ.

ಗದಗ್ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿ ಸಾಕಷ್ಟು ವಿದ್ಯಾರ್ಥಿಗಳಿದ್ದ ಗಜೇಂದ್ರಗಡದ ವಸತಿ ಶಾಲೆ ಮುಚ್ಚುವ ನೀತಿಯೇ ಈ ಮಾತಿಗೆ ಸಾಕ್ಷಿ.

ಬಿಜೆಪಿ ಸರ್ಕಾರದ ಕೊಡುಗೆ

2012–13 ರಲ್ಲಿ ಬಿಜೆಪಿ ಸರ್ಕಾರದ ಅಡಿಯಲ್ಲಿ ಒಂದನೇ ತರಗತಿಗೆ ಪ್ರವೇಶ ನೀಡದಿರುವಂತೆ ಆದೇಶ ಹೊರಡಿಸಲಾಗಿದೆ ಎಂದು, ಸಮಾಜಕಲ್ಯಾಣ ಇಲಾಖೆ ಸರ್ಕಾರದ ಆದೇಶವನ್ನು ಮೀರುವಂತಿಲ್ಲ ಎಂದು ಹೇಳಿ ಒಂದನೇ ತರಗತಿಗೆ ಪ್ರವೇಶವನ್ನು ನಿರ್ಬಂಧಿಸಲಾಗಿತ್ತು. ಇದರಿಂದ 120 ವಿದ್ಯಾರ್ಥಿಗಳನ್ನು ಹೊಂದಿದ್ದ ಶಾಲೆಗೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಯಿತು. ಇದೇ ಕಾರಣಕ್ಕಾಗಿ ಈಗಿನ ಸರ್ಕಾರ ಆಶ್ರಮ ಶಾಲೆಗಳನ್ನು ಮುಚ್ಚಲು ಹೊರಟಿರುವುದು ವಿಪರ್ಯಾಸ.

ಸಮಾಜ ಕಲ್ಯಾಣ ಇಲಾಖೆ ಮುಚ್ಚಬೇಕೆಂದು ಹೊರಟಿದ್ದ ಗಜೇಂದ್ರಗಡ ನಗರದ ಸರ್ಕಾರಿ ಆಶ್ರಮ ಶಾಲೆ ಹಾಗೂ ಆಂಗ್ಲ ಮಾಧ್ಯಮ ಶಾಲೆ ಉಳಿವಿಗಾಗಿ ಎಸ್‌ಎಫ್‌ಐ–ಡಿವೈಎಫ್‌ಐ ಸಂಘಟನೆಗಳು ನಿರಂತರ ಚಳುವಳಿ ನಡೆಸಿವೆ.

ಕಾಲ್ನಡಿಗೆ– ಅಹೋರಾತ್ರಿ ಧರಣ

ಜುಲೈ 21, 2014 ರಂದು ಮುಂಜಾನೆ 8–00 ಗಂಟೆಗೆ ಗಜೇಂದ್ರಗಡದಿಂದ ಕಾಲ್ನಡಿಗೆ ಜಾಥಾ ಹೊರಟು ಬೆಟಗೇರಿ ಬಸ್‌ನಿಲ್ದಾಣ ತಲುಪಿ ಹೆಲ್ತ್‌ಕ್ಯಾಂಪ್ ಮುಖಾಂತರ ಗಾಂಧಿ ಸರ್ಕಲ್‌ಗೆ ಆಗಮಿಸಿ ಅಹೋರಾತ್ರಿ ಧರಣಿಯನ್ನು ಆರಂಭಿಸಲಾಯಿತು. ಆಶ್ರಮ ಶಾಲೆ ಉಳಿಯಬೇಕು ಮುಚ್ಚಬಾರದು ಎಂದು ಆಗ್ರಹಿಸಲಾಯಿತು. ಆಶ್ರಮ ಶಾಲೆಯನ್ನು ಮುಚ್ಚುತ್ತಿರುವ ಸರ್ಕಾರಕ್ಕೆ ಹಾಗೂ ಸಮಾಜ ಕಲ್ಯಾಣ ಇಲಾಖೆಗೆ ಧಿಕ್ಕಾರಗಳು ಮೊಳಗಿದವು.

ರ‍್ಯಾಲಿ ಗಾಂಧಿ ಸರ್ಕಲ್‌ಗೆ ಆಗಮಿಸಿದ ನಂತರ ಡಿವೈಎಫ್‌ಐನ ಜಿಲ್ಲಾಸಂಚಾಲಕ ಪೀರು ರಾಠೋಡ ಹಾಗೂ ಕಳಕೇಶ ಉಕ್ಕಿಸಲಾ ಮಾತನಾಡಿ ಗದಗ ಜಿಲ್ಲೆಯಲ್ಲಿ ಎರಡು ಆಶ್ರಮ ಶಾಲೆಗಳಿವೆ. ಗಜೇಂದ್ರಗಡ ನಗರದ ಆಶ್ರಮ ಶಾಲೆಯಲ್ಲಿ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಆದರೆ 2012 ರಲ್ಲಿ ರಾಜ್ಯ ಬಿಜೆಪಿ ಸರ್ಕಾರ ಸರ್ಕಾರಿ ಆಶ್ರಮಗಳನ್ನು ಶಾಲೆಗಳನ್ನು ಮುಚ್ಚಲು ಹೊರಟಿದ್ದನ್ನು ವಿರೋಧಿಸಿದ ಎಸ್‌ಎಫ್‌ಐ ಹಾಗೂ ಡಿವೈಎಫ್‌ಐ ಸಂಘಟನೆಗಳ ಹೋರಾಟದಿಂದ ಆಶ್ರಮ ಶಾಲೆಯನ್ನು ಉಳಿದಿದ್ದವು. ಆದರೆ ಈ ವರ್ಷ ಸಂಪೂರ್ಣವಾಗಿ ಆಶ್ರಮ ಶಾಲೆಯನ್ನು ಬಂದ್ ಮಾಡಲಾಗಿದೆ. ಗುಳೆ ಹೋಗುವ ಅಲೆಮಾರಿ ಜನಾಂಗದ ಮಕ್ಕಳು ಶಿಕ್ಷಣ ಹೊಂದಬೇಕು ಎಂಬ ಉದ್ದೇಶದೊಂದಿಗೆ 1965ರಲ್ಲಿ ದೇವರಾಜ ಅರಸು ನೇತೃತ್ವದ ಸರ್ಕಾರ ಈ ಆಶ್ರಮ ಶಾಲೆಗಳನ್ನು ಆರಂಭಿಸಿತ್ತು. ಆದರೆ ಈಗ ಸರ್ಕಾರ ಈ ಆಶ್ರಮ ಶಾಲೆಗಳನ್ನು ಮುಚ್ಚಿಸಲು ಹೊರಟಿರುವುದು ಖಂಡನೀವಾಗಿದೆ. ಅಲೆಮಾರಿ ಜನಾಂಗಗಳನ್ನು ಶಿಕ್ಷಣದಿಂದ ವಂಚಿತರನ್ನಾಗಿಸುವ ಹುನ್ನಾರ ನಡೆದಿದೆ ಎಂದರು.

ಎಸ್‌ಎಫ್‌ಐ ಗದಗ್ ಜಿಲ್ಲಾ ಸಮಿತಿ ಅಧ್ಯಕ್ಷ ಶಿವು ಚವ್ಹಾಣ, ಕಾರ್ಯದರ್ಶಿ ಶಿವಾನಂದ ಬೋಸಲೆ, ಗಜೇಂದ್ರಗಡ ನಗರ ಸಮಿತಿ ಅಧ್ಯಕ್ಷ ಬಾಲಕೃಷ್ಣ ಜಾಡಬಂಡಿ, ಕಾರ್ಯದರ್ಶಿ ಶಿವಾಜಿ ಗಡ್ಡದ ಮಾತನಾಡಿ ಸರ್ಕಾರದ ಶಿಕ್ಷಣ ವಿರೋಧಿ, ಅಲೆಮಾರಿ ಜನವಿರೋಧಿ– ದಲಿತ ವಿರೋಧಿ ನೀತಿಯನ್ನು ಖಂಡಿಸಿದರು. ಗದಗ ನಗರದ ಉಪತಹಶೀಲಾರ್ ಅವರು ಆಗಮಿಸಿ ಮನವಿಯನ್ನು ಸ್ವೀಕರಿಸಿ ಸರ್ಕಾರಕ್ಕೆ ಕಳುಹಿಸುವುದಾಗಿ ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಮುಖಂಡರಾದ ಪ್ರಕಾಶ ಹೆಳವರ, ದಾವಲಸಾಬ ತಾಳಿಕೋಟಿ, ಶರಣಯ್ಯ, ಮಾನವ್ವ ರಾಠೋಡ, ಶಿವಕುಮಾರ, ಮಂಜು, ಯಲ್ಲಪ್ಪ, ಶಶಿ, ದ್ಯಾಮನಗೌಡ, ಶ್ರೀಧರ, ಕಳಕೇಶ ಮುಂತಾದವರು ಭಾಗವಹಿಸಿದ್ದರು.

ಶಾಲೆ ತೆರೆಯುವುದೇ?

ಪ್ರತಿಭಟನಾಕಾರರ ಮನವಿ ಸ್ವೀಕರಿಸಿದ್ದ ಸಮಾಜ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿಗಳು 60 ಮಕ್ಕಳು ಶಾಲೆಗೆ ಸೇರಲು ಸಿದ್ದವಿದ್ದರೆ ಶಾಲೆ ಪುನರಾರಂಭ ಮಾಡಲಾಗುವುದು ಎಂದು ಚಳುವಳಿನಿರತ ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ಮುಖಂಡರಿಗೆ ಭರವಸೆ ನೀಡಿದ್ದರು.

ಈ ಎರಡೂ ಸಂಘಟನೆಗಳು ಶಾಲೆ ಪುನರಾರಂಭವಾಗುವ ಬಗೆಗೆ ರೋಣ ತಾಲ್ಲೂಕಿನ ತಾಂಡ, ಹಳ್ಳಿಗಳಲ್ಲಿ ಪ್ರಚಾರ ನಡೆಸಿದ್ದರಿಂದ ಈಗ ಗಜೇಂದ್ರಗಡದ ಶಾಲೆಗೆ ಸೇರಲು 75 ಅರ್ಜಿಗಳು ಬಂದಿವೆ. ಇವುಗಳಲ್ಲಿ ಹೆಚ್ಚಿನವು ಈ ಭಾಗದಲ್ಲಿ ಗಣನೀಯ ಸಂಖ್ಯೆಯಲ್ಲಿರುವ ಲಂಬಾಣಿ ಮತ್ತು ಅಲೆಮಾರಿ ಜನಾಂಗಗಳ ಮಕ್ಕಳು. ಸಾಮಾಜಿಕ ಪ್ರಗತಿಯ ದೃಷ್ಟಿಯಿಂದ ಇದು ಬಹಳ ಮಹತ್ವದ ವಿಷಯ. ಸರ್ಕಾರ ನಡೆಸುವವರಿಗೆ ಇದು ಏಕೆ ಅರ್ಥವಾಗುವುದಿಲ್ಲವೋ !!! ಮುಂದಿನ ದಿನಗಳಲ್ಲಿ ಇನ್ನಷ್ಟು ಅರ್ಜಿಗಳು ಬರಬಹುದು. ಈಗ ಭರವಸೆ ಕೊಟ್ಟಂತೆ ಶಾಲೆ ತೆರೆಯುವ ಜವಾಬ್ದಾರಿ ಸಮಾಜ ಕಲ್ಯಾಣ ಇಲಾಖೆ ಮೇಲೆ ಇದೆ. ಸಂಘಟನೆಗಳು ಹೋರಾಟ ಮುಂದುವರೆಸಿವೆ. ಕ್ಷೇತ್ರದ ಶಾಸಕರನ್ನು ಸಹ ಸಂಘಟನೆಯ ನಿಯೋಗ ಕಂಡಿದ್ದು ಈಗ ಅವರೂ ಸಹ ಶಾಲೆ ಉಳಿಸುವ ಮಾತನ್ನಾಡಿದ್ದಾರೆ. (ಇತ್ತೀಚಿನ ವರದಿಯಂತೆ ಶಾಲೆಯನ್ನು ಮುಚ್ಚುವ ಅಂತಿಮ ನಿರ್ಧಾರವನ್ನೇನು ಕೈಗೊಂಡಿರಲಿಲ್ಲ ಎಂದಿರುವ ಅಧಿಕಾರಿಗಳು ಮತ್ತೇ ಶಾಲೆ ಪುನಾರಾರಂಭಕ್ಕೆ ಒಪ್ಪಿದ್ದಾರೆಂದು ತಿಳಿದು ಬಂದಿದೆ.)

'ಕೋಮುವಾದಿ ಶಕ್ತಿಗಳ ವಿರುದ್ದದ ಐಕ್ಯತೆಯ ಸಂಕೇತವಾಗಿ ಎದ್ದುನಿಂತ ಏಕತಾ ಕಾಲೋನಿ'



ಮುಜಾಫರ್ ನಗರ ಗಲಭೆ ಸಂತ್ರಸ್ತರಿಗೆ ಮನೆಗಳ ನಿರ್ಮಾಣ



ಎಚ್. ಆರ್. ನವೀನ್ ಕುಮಾರ್

ಕಳೆದ ವರ್ಷ ಇದೇ ಆಗಸ್ಟ್-ಸೆಪ್ಟೆಂಬರ್ ತಿಂಗಳುಗಳಲ್ಲಿ ಉತ್ತರ ಪ್ರದೇಶ ರಾಜ್ಯದ ಮುಜಾಫರ್‌ನಗರದಲ್ಲಿ ನಡೆದ ಭೀಕರ ಕೋಮುಗಲಭೆಗಳು ಇಡೀ ದೇಶದಾದ್ಯಂತ ಮಾನವೀಯ ಕಾಳಜಿಯುಳ್ಳ ಜನರನ್ನು ತೀವ್ರ ಆತಂಕಕ್ಕೆ ನೂಕಿದ್ದವು. ಈ ಗಲಭೆಗಳು ಆಕಸ್ಮಿಕವಾಗಿರಲಿಲ್ಲ. ಸಮುದಾಯಗಳ ನಡುವೆ ತಿಕ್ಕಾಟಗಳನ್ನು ಹುಟ್ಟು ಹಾಕಿ, ಉರಿಯಿಕ್ಕಿ ದ್ವೇಷದ ಜ್ವಾಲೆಯನ್ನು ಹರಡಿದವರಿಗೆ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಸ್ಪಷ್ಟವಾದ ರಾಜಕೀಯ ಗುರಿಗಳಿದ್ದವು. ಮುಖ್ಯವಾಗಿ

ಅಂದಿನ ಸಂದರ್ಭದಲ್ಲಿ ದೈತ್ಯ ಎನ್ನುವಂತೆ ಹಾಗೂ ಏರಲು ಕಷ್ಟವಾದ ಸವಾಲಿನಂತೆ ತೆ-ೂರು ತ್ತಿದ್ದ ಲೋಕಸಭಾ ಚುನಾವಣೆಗಳ ಪ್ರಶ್ನೆ ಇತ್ತು.

ಪುಟ್ಟ ರಸ್ತೆ ಅಪಘಾತ, ಯಾರೋ ಯಾರನ್ನೋ ಚುಡಾಯಿಸಿದ ಒಂದು ಪ್ರಸಂಗ ಏನೇ ಇರಲಿ ಇವೆಲ್ಲಾ ಕಾನೂನು ತನ್ನ ಕ್ರಮ ವಹಿಸಬೇಕಾದ ಘಟನಾವಳಿಗಳಾಗಿದ್ದವು. ಆದರೆ ಅಲ್ಲಿ ಈ ಘಟನೆಗಳ ನೆಪದಲ್ಲಿ ಸಮುದಾಯಗಳನ್ನು ಪರಸ್ಪರ ವ್ಯವಸ್ಥಿತವಾಗಿ ಎತ್ತಿಕಟ್ಟಿ ಗಲಭೆಗಳನ್ನು ಹಬ್ಬಿಸಲಾಯಿತು. ಮನಸ್ಸುಗಳನ್ನು ಒಡೆಯಲಾಯಿತು. ಘೋರ ಹಿಂಸೆ ಕ್ರೂರ ನೃತ್ಯ



ಮಾಡಿತು. ಜನರ ಐಕ್ಯತೆ-ಬದುಕನ್ನು ರಕ್ಷಿಸುವ ಇಚ್ಚಾಶಕ್ತಿ ಇಲ್ಲದ ರಾಜ್ಯ ಹಾಗೂ ಕೇಂದ್ರ ಆಳುವ ಸರ್ಕಾರಗಳು ದಯನೀಯವಾಗಿ ವಿಫಲವಾದವು. ಹತ್ತಾರು ಅಮಾಯಕ ಜೀವಗಳು ಬಲಿಯಾದವು. ಮಹಿಳೆಯರ ಮೇಲೆ ಅತ್ಯಾಚಾರಗಳು ನಡೆದವು. ಮನೆಮಾರುಗಳನ್ನು ಕಳೆದುಕೊಂಡ ಸಹಸ್ರಾರು ಜನರ ಬದುಕು ಬೀದಿಗೆ ಬಿದ್ದಂತಾಯಿತು. ಎಂದಿನಂತೆ ಕೋಮುಗಲಭೆಗಳ ದಳ್ಳುರಿಯಲ್ಲಿ ಬೆಂದವರಲ್ಲಿ ಅಲ್ಪಸಂಖ್ಯಾತರೇ ಹೆಚ್ಚು.

ನಿರಾಶ್ರಿತ ಶಿಬಿರದ ಮೇಲೂ ದಾಳಿ, ಹೀನಾಯ ಅತ್ಯಾಚಾರ ಜರುಗಿ ಹೋಯಿತು. ಜರ್ಜರಿತ ಮನಸ್ಸುಗಳಿಗೆ ಸಾಂತ್ವನ-ಬದುಕಿಗೊಂದು ನೆಲೆ ಬೇಕಾಗಿತ್ತು. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಇಂತಹ ಸನ್ನಿವೇಶದಲ್ಲಿ ನೊಂದವರಿಗೆ ಸಾಂತ್ವನದ ಕ್ರಮಕ್ಕೆ ಮುಂದಾಯಿತು. ಒಂದು ಜವಾಬ್ದಾರಿಯುತ ರಾಜಕೀಯ ಪಕ್ಷ ಇಂತಹ ಸಂದರ್ಭದಲ್ಲಿ ಏನು ಮಾಡಬೇಕೋ ಅದನ್ನೇ ಅದು ಮಾಡಿತು. ಐಕ್ಯತೆಯ ಸಂಕೇತವಾದ ಒಂದು ಕಾಲೋನಿಗಳನ್ನೇ ಅದು ನಿರ್ಮಿಸಿತು.

'ಕೋಮುವಾದಿ ಶಕ್ತಿಗಳ ವಿರುದ್ದದ ಐಕ್ಯತೆಯ ಸಂಕೇತವಾಗಿ ಎದ್ದುನಿಂತ ಏಕತಾ ಕಾಲೋನಿ'

'ಏಕತಾ ಕಾಲೋನಿ ಕೋಮುವಾದಿ ಶಕ್ತಿಗಳ ವಿರುದ್ದದ ಐಕ್ಯತೆಯ ಸಂಕೇತವಾಗಿ ಎದ್ದುನಿಂತಿದೆ.' ಹೀಗೆ ಹೇಳಿದವರು ಸಿಪಿಐ(ಎಂ)ನ ಪೊಲೀಟ್ ಬ್ಯೂ-ರೋ ಸದಸ್ಯರಾದ ಎಂ.ಎ. ಬೇಬಿ. ಅವರು ಆಗಸ್ಟ್ 24, 2014 ರಂದು ಸಾಂಕೇತಿಕವಾಗಿ ಮುಜಫರ್ ನಗರದಿಂದ 40 ಕಿ.ಲೋ. ಮೀಟರ್ ದೂರದಲ್ಲಿರುವ ಜುಲಾ ನಗರದಲ್ಲಿ ಸಿಪಿಐ(ಎಂ)ನಿಂದ ನಿರ್ಮಿಸಿರುವ ಮುಜಫರ್ ನಗರ ಗಲಭೆ ಪೀಡಿತ ಸಂತ್ರಸ್ತರ ಪುನರ್‌ವಸತಿ ಕಾಲೋನಿಯನ್ನು ಉಧ್ಘಾಟಿಸಿ ಮಾತನಾಡುತ್ತಿದ್ದರು. ಕಳೆದ ವರ್ಷ ಜುಲೈನಲ್ಲಿ ಸಂಘಪರಿವಾರದವರು ನಡೆಸಿದ ಕೋಮುಗಲಭೆಯಿಂದ ಶಾಮಲಿ ಜಿಲ್ಲೆಯಲ್ಲಿ 65 ಜನ ಸಾವನ್ನಪ್ಪಿದ್ದು 50 ಸಾವಿರಕ್ಕೂ ಹೆಚ್ಚು ಬಡ ಮುಸ್ಲೀಮರು ಮನೆಗಳನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದರು.

ಈ ಕಾಲೋನಿ ಉಳಿದ ಗಲಭೆ ಪೀಡಿತ ಸಂತ್ರಸ್ತರ ಕಾಲೋನಿಗಳಿಗಿಂತ ಬಹಳ ಭಿನ್ನವಾಗಿದೆ. ಏಕೆಂದರೆ ಕೋಮುಗಲಭೆ ಪೀಡಿತ ಸಂತ್ರಸ್ತರಿಗೆ ಒಂದು ರಾಜಕೀಯ ಪಕ್ಷ ಮನೆಗಳನ್ನು ಕಟ್ಟಿಕೊಟ್ಟಿರುವುದು ಇದೇ ಮೊದಲು. ಸಿಪಿಐ(ಎಂ) ದೇಶದಾದ್ಯಂತ ಮುಜಫರ್ ಗಲಭೆ ಸಂತ್ರಸ್ತರ ಪರಿಹಾರ ನಿಧಿಯನ್ನು ಸಂಗ್ರಹಿಸಲು ಕರೆ ನೀಡಿತ್ತು. ಈ ಕರೆಯಂತೆ ವಿಶೇಷವಾಗಿ ಕೇರಳ ಮತ್ತು ಪಶ್ಚಿಮ ಬಂಗಾಳಗಳಲ್ಲಿ ಸಾಮೂಹಿಕ ಸಂಗ್ರಹವನ್ನು ನಡೆಸಿದ ಒಟ್ಟು 70 ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿ ಈ ಮನೆಗಳನ್ನು ಕಟ್ಟಿಕೊಡಲಾಗಿದೆ.

ಏಕತಾ ಕಾಲೋನಿಯಲ್ಲಿ ಪ್ರಥಮ ಹಂತದಲ್ಲಿ ಜುಲಾ ಎಂಬ ಹಳ್ಳಿಯಲ್ಲಿ 39 ಮನೆಗಳು ಮತ್ತು ಎರಡನೇ ಹಂತದಲ್ಲಿ 15 ಪುನರ್‌ವಸತಿ ಮನೆಗಳನ್ನು ಕಟ್ಟಿಕೊಡಲಾಯಿತು. ಜೋಲ್ಹಾ ಎಂಬ ಹಳ್ಳಿಯಲ್ಲಿ ಸಿಪಿಐ(ಎಂ)ನಿಂದ ನಿರಾಶ್ರಿತರಿಗೆ ಬದಲಿ ವ್ಯವಸ್ಥೆಯಾಗಿ ಅಲ್ಲಿಯ ನಿರಾಶ್ರಿತ ಕುಟುಂಬಗಳ ಪಟ್ಟಿಮಾಡಿ ಕಡಿಮೆ ಬೆಲೆಯಲ್ಲಿ ನಿವೇಶನಗಳನ್ನು ಖರೀದಿಸಿ ಆಶ್ರಯ ನೀಡಲಾಯಿತು. ನಂತರ ಪ್ರತೀ ಕುಟುಂಬಗಳಿಗೆ ಪಕ್ಕಾ ಮನೆಗಳನ್ನು ನಿರ್ಮಿಸಿಕೊಳ್ಳಲು ಬೇಕಾಗಿರುವ ಸಾಮಗ್ರಿಗಳಿಗಾಗಿ ತಲಾ ಒಂದು ಲಕ್ಷ ರೂ. ಸಹಾಯ ನೀಡಲಾಯಿತು. ಈ ಬಡ ನಿರಾಶ್ರಿತ ಜನರೇ ಸ್ವತಃ ತಮ್ಮ ಮನೆಗಳನ್ನು ತಾವೇ ನಿರ್ಮಿಸಿಕೊಂಡರು ಮತ್ತು ಪಶುಸಂಗೋಪನಾ ಕೆಲಸಗಳಿಗೂ ಅನುಕೂಲವಾಗುವಂತೆ ಮನೆಗಳನ್ನು ವಿನ್ಯಾಸಗೊಂಡವು.

ಸಾಂಕೇತಿಕವಾಗಿ ಈ ಕಾಲೋನಿಯನ್ನು ಉಧ್ಘಾಟನೆ ಮಾಡುವ ಮುನ್ನವೇ ನಿರಾಶ್ರಿತರು ಕಟ್ಟಡದ ನಿರ್ಮಾಣ ಪೂರ್ಣಗೊಂಡ ಕೂಡಲೇ ಈ ಮನೆಗಳಲ್ಲಿ ವಾಸಮಾಡುವ ಮೂಲಕ ಅಧಿಕೃತ ಉಧ್ಘಾಟನೆಯನ್ನು ನೆರವೇರಿಸಿದ್ದರು. ಈ ಮನೆಗಳಿಗೆ ಸೂಕ್ತವಾದ ವಿದ್ಯುತ್, ಕುಡಿಯುವ ನೀರು ಮತ್ತು ರಸ್ತೆ ವ್ಯವಸ್ಥೆಗಾಗಿ ಸರ್ಕಾರವನ್ನು ಆಗ್ರಹಿಸಲಾಗಿದೆ. ಗಲಭೆ ಸಂತ್ರಸ್ಥರಿಗೆ ಸಿಪಿಐ(ಎಂ)ನಿಂದ ಅವರವರ ವೃತ್ತಿಗಳನ್ನು ಮುಂದುವರೆಸಲು ಅನುಕೂಲವಾಗುವಂತೆ ಸಾಮಗ್ರಿಗಳನ್ನು ಒದಗಿಸಲಾಯಿತು. ಉದಾಹರಣೆಗೆ ಟೈಲರಿಂಗ್, ಕ್ಷೌರ, ಮರಗೆಲಸದಂತಹ ಕೆಲಸಗಳಿಗೆ ಬೇಕಾದ ಸಣ್ಣ ಪುಟ್ಟ ಪರಿಕರಗಳನ್ನು ಒದಗಿಲಾಯಿತು. ಗಲಭೆಯಲ್ಲಿ ಅತ್ಯಾಚಾರಕ್ಕೊಳಪಟ್ಟವರು ಮತ್ತು ವಿಧವೆಯರಾಗಿರುವವರಿಗೂ ಸಹಾಯವನ್ನು ನೀಡಲಾಯಿತು.

ಗಲಭೆ ನಡೆದ ಕೂಡಲೆ ಸಂತ್ರಸ್ತರಿಗೆ ತಕ್ಷಣ ಬೇಕಾದ ಸಾಮಗ್ರಿಗಳಾದ ಹಾಸಿಗೆ, ಹೊದಿಕೆ, ಬಟ್ಟೆ ಇತ್ಯಾದಿಗಳನ್ನು ಗಲಭೆಯಿಂದ ಸಂತ್ರಸ್ತರಾದ ಹೆಚ್ಚು ಜನರಿಗೆ ಒದಗಿಸಲಾಗಿತ್ತು. ಮತ್ತು ನಿರಾಶ್ರಿತರ ತಾಣಗಳಲ್ಲಿ ವಾಸವಿದ್ದವರ ಗಂಭೀರ ಸ್ಥಿತಿಗಳ ಬಗ್ಗೆ ಸರಕಾರದ ಗಮನವನ್ನು ಸೆಳೆದು ಸರಿಪಡಿಸುವ ಪ್ರಯತ್ನವನ್ನು ನಡೆಸಲಾಯಿತು. ರಾಜ್ಯ ಸರ್ಕಾರ ನಿರಾಶ್ರಿತರ ಪರಿಹಾರ ಶಿಬಿರಗಳನ್ನು ಮುಚ್ಚಲು ಹೊರಟಾಗ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾದ ಸುಭಾಶಿಣಿ ಅಲಿಯವರ ನೇತೃತ್ವದಲ್ಲಿದ್ದ ಸಿಪಿಐ(ಎಂ)ನ ಪರಿಹಾರ ಶಿಬಿರದಲ್ಲಿ ಪಕ್ಷದ ಮಿತಿಗಳ ನಡುವೆ ಎಲ್ಲ ರೀತಿಯ ಅನುಕೂಲಗಳನ್ನು ಮಾಡಲಾಗಿದೆ.

ಜೋಲಾ ವಿದ್ಯುತ್ ಕೇಂದ್ರದಲ್ಲಿ 130 ನಿರಾಶ್ರಿತ ಕುಟುಂಬಗಳಿವೆ. ಅವರು ಅನುಭವಿಸುತ್ತಿರುವ ಕಷ್ಟಗಳ ಕುರಿತು ವಿಚಾರಣೆ ನಡೆಸಲು ಸಿಪಿಐ(ಎಂ)ನ ಲೋಕಸಭಾ ಸದಸ್ಯರಾದ ಎಂ.ಬಿ.ರಾಜೇಶ್ ಮತ್ತು ಸಭಾಶಿಣಿ ಅಲಿಯವರು ಭೇಟಿ ನೀಡಿ ಇವರ ಸಮಸ್ಯೆಗಳನ್ನು ಆಡಳಿತದ ಗಮನಕ್ಕೆ ತರುವ ಪ್ರಯತ್ನವನ್ನು ಮಾಡಲಾಯಿತು.

ಏಕತಾ ಕಾಲೋನಿಯ ಉದ್ಘಾಟನೆಯ ನಂತರ ಜುಲಾ ಪ್ರದೇಶದ ಜೈನ್ ಇಂಟ-ರ್ ಮೀಡಿಯಟ್ ಕಾಲೇಜು ಆವರಣದಲ್ಲಿ ಬಹಿರಂಗ ಸಭೆಯನ್ನು ನಡೆಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಹಿರಿಯ ಕಮ್ಯೂನಿಸ್ಟ್ ಮುಖಂಡರೂ ರೈತ ಮುಖಂಡರೂ ಆದ ಹಫೀಸ್ ಇಕ್ಬಾಲ್ ವಹಿಸಿದ್ದರು. ಬಹಿರಂಗ ಸಭೆಯಲ್ಲಿ ಸಿಪಿಐ(ಎಂ) ಪೊಲಿಟ್ ಬ್ಯೂ-ರೋ ಸದಸ್ಯರಾದ ಎಂ.ಎ.ಬೇಬಿ, ಲೋಕಸಭಾ ಸದಸ್ಯರಾದ ಎಂ.ಬಿ.ರಾಜೇಶ್, ಕೇಂದ್ರ ಸಮಿತಿ ಸದಸ್ಯರಾದ ಸುಭಾಶಿಣಿ ಅಲಿ, ಸಿಪಿಐ(ಎಂ)ನ ಉತ್ತರ ಪ್ರದೇಶ ಸಮಿತಿ ರಾಜ್ಯ ಕಾರ್ಯದರ್ಶಿ ಎಸ್.ಪಿ. ಕಶ್ಯಪ್ ಮತ್ತು ಮುಜಫರ್‌ನಗರದ ಜಿಲ್ಲಾ ಕಾರ್ಯದರ್ಶಿ ಸಯಮವೀರ್‌ರತಿಯವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಮಾತನಾಡಿದ ಎಲ್ಲರೂ ಕೋಮುವಾದದ ಸವಾಲುಗಳನ್ನು ದೃಢವಾಗಿ ಎದುರಿಸಲು ಎಲ್ಲಾ ಹಂತದಲ್ಲೂ ಐಕ್ಯತೆ ಮತ್ತು ಕೋಮು ಸೌಹಾರ್ದತೆಯನ್ನು ಕಾಪಾಡಬೇಕೆಂದರು. ●

ಈ ಹಣಕಾಸು ವರ್ಷದ ಮೊದಲ ಮೂರು ತಿಂಗಳಲ್ಲಿ ಜಿಡಿಪಿ ಏರಿಕೆ ದರ ಕಳೆದೆರಡು ವರ್ಷಗಳಲ್ಲಿ ಕಾಣದಷ್ಟು ಹೆಚ್ಚಿದೆ ಎಂಬಅಂದಾಜಿನಆಧಾರದಲ್ಲಿ, ವಿದೇಶೀ ನೆಲದಲ್ಲಿ ಮೋದಿಯವರು, ನೂರೇ ದಿನಗಳಲ್ಲಿ ಭಾರತದ 'ಪಾರ್ಶ್ವವಾಯು'ವನ್ನು ಬಿಡಿಸಿರುವೆನೆಂದು ಡಂಗುರ ಸಾರಿದರು. ಅದಕ್ಕೆ ಕಾರ್ಪೊರೇಟ್ ಮಂದಿ ಪರಾಕು ಹಾಡಿದರು. ಆದರೆ ಮೋದಿಯವರು ಪ್ರಧಾನ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡದ್ದು ಮೇ ೨೬ರಂದು, ಅಂದರೆ ಈ ಮೂರು ತಿಂಗಳ ಅವಧಿಯಲ್ಲಿ ಅವರಿಗೆ 'ಪವಾಡ' ನಡೆಸಲು ಸಿಕ್ಕಿದ್ದು ಜೂನ್ ತಿಂಗಳು ಮಾತ್ರ. ಭಾರತದ ಕಾರ್ಪೊರೇಟ್ ಮಂದಿಗೆ ಒಬ್ಬ 'ಉದ್ಧಾರಕ'ನ ಬದಲಿಗೆ ಒಬ್ಬ 'ಜಾದೂಗಾರ' ಸಿಕ್ಕಿದ್ದಾನೆ! ವಾಸ್ತವವಾಗಿ ಅವರಿಗೆ ಸಿಕ್ಕಿದ್ದು ಜಾದೂಗಾರನೂ ಅಲ್ಲ, ಒಬ್ಬ ಸಮಕಾಲೀನ ಗೊಬೆಲ್ಸ್ ! ಏಕೆಂದರೆ ಈ ಹೆಚ್ಚಳವಾದರೂ ಕಂಡು ಬಂದದ್ದು ಎಪ್ರಿಲ್–ಮೇ ತಿಂಗಳಲ್ಲೇ, ಜೂನ್ ತಿಂಗಳಲ್ಲಿ ಅದು ಒಟ್ಟಾರೆಯಾಗಿ ಇಳಿಮುಖವಾಗಿತ್ತು!



ಪ್ರಧಾನಿಗಳ ಜಪಾನ್ ಭೇಟಿ
ಮತ್ತದೇ ಗೋಬೆಲ್ಸ್ ಪ್ರಚಾರ ವೈಖರಿ

ಸೀತಾರಾಮ್ ಯೆಚೂರಿ

ಆರೆಸ್ಸೆಸ್/ಬಿಜೆಪಿ ಮತ್ತೊಮ್ಮೆ ಹಿಟ್ಲರನ ಫ್ಯಾಸಿಸ್ಟ್ ಪ್ರಚಾರ ಮಂತ್ರಿ ಜೊಸೆಫ್ ಗೊಬೆಲ್ಸನ 'ಸೂಕ್ತಿ'ಗೆ ಆತುಗೊಂಡಂತೆ ಕಾಣುತ್ತದೆ. ಇದು ಅವರಿಗೆ ಸಮಯದ ಒರೆಗಲ್ಲಲ್ಲಿ ಪ್ರಯೋಜನಕಾರಿ ಎಂದು ಸಾಬೀತಾದ ಸೂತ್ರ ತಾನೇ. "ಒಂದು ಸಾಕಷ್ಟು ದೊಡ್ಡ ಸುಳ್ಳನ್ನು ಸಾಕಷ್ಟು ಬಾರಿ ಅದನ್ನು ಜನ ಸತ್ಯ ಎಂದು ಸ್ವೀಕರಿಸುವ ವರೆಗೆ ಹೇಳುತ್ತಲೇ ಇರಬೇಕು."– ಇದು ನಾಝೀ ಫ್ಯಾಸಿಸಂ ಉದಯಗೊಂಡು ಅದರೆಲ್ಲಾ ಭೀಕರತೆಗಳೊಂದಿಗೆ ಕ್ರೋಡೀಕರಣಗೊಳ್ಳುತ್ತಿದ್ದ ಕಾಲದಲ್ಲಿ ಗೊಬೆಲ್ಸ್ ತನ್ನ ಫ್ಯಾಸಿಸ್ಟ್ ಅಪಪ್ರಚಾರ ನಡೆಸಲು ಆಧರಿಸಿದ ಸೂತ್ರ. ಈ ಪ್ರಚಾರ ವೈಖರಿ ಈಗ ಮೋದಿ ಸರಕಾರದ ಮತ್ತು ಅದರೊಂದಿಗೆ ಆರೆಸ್ಸೆಸ್ ಮತ್ತು ಅದರ ವಿವಿಧ ಕಬಂಧ ಬಾಹುಗಳು ಎತ್ತುತ್ತಿರುವ ಕಲಹಕೋರ ಕೋಮುವಾದಿ ಪ್ರಶ್ನೆಗಳ ಬೆನ್ನೆಲುಬಾಗಿರುವಂತೆ ಕಾಣುತ್ತದೆ.

ನೆನಪಿದೆಯೇ, ಪ್ರಧಾನ ಮಂತ್ರಿ ಮೋದಿಯವರು ಲೋಕಸಭೆಯಲ್ಲಿ, 31ಶೇ. ಮಾತ್ರ ಮತ ಗಳಿಸಿಯಾದರೂ, ಬಹುಮತವನ್ನು ಪಡೆದ ನಂತರ ಕೆಂಪುಕೋಟೆಯಿಂದ ಮಾಡಿದ ಮೊದಲ ಭಾಷಣದಲ್ಲಿ ತಮ್ಮ ಚುನಾವಣಾ ಪ್ರಚಾರದಲ್ಲಿ ಹೇಳಿದ್ದ ಯಾವುದೇ ಪ್ರಧಾನ ಪ್ರಶ್ನೆಯ ಪ್ರಸ್ತಾಪವನ್ನು ಪ್ರಜ್ಞಾಪೂರ್ವಕವಾಗಿಯೇ ಮಾಡಲಿಲ್ಲ. ಬೆಲೆಯೇರಿಕೆಯನ್ನು ಎದುರಿಸುವ, ಜನತೆಯ ಬದುಕಿನ ಪರಿಸ್ಥಿತಿಗಳನ್ನು ಉತ್ತಮಗೊಳಿಸುವ ಭರವಸೆಗಳ ಪ್ರಸ್ತಾಪವಿರಲಿಲ್ಲ; ಭ್ರಷ್ಟಾಚಾರದ ಬಗ್ಗೆಯಾಗಲೀ, ಭ್ರಷ್ಟಾಚಾರವನ್ನು ಹತ್ತಿಕ್ಕುವುದಿರಲಿ, ಎದುರಿಸಲಾದರೂ ತಮ್ಮ ಸರಕಾರ ಕೈಗೊಳ್ಳಬೇಕೆಂದಿರುವ ಕ್ರಮಗಳ ಬಗ್ಗೆಯಾಗಲೀ ಪ್ರಸ್ತಾಪವಿರಲಿಲ್ಲ; 'ಉತ್ತಮ ಆಳ್ವಿಕೆ'ಯ ಪ್ರಸ್ತಾಪವೂ ಇರಲಿಲ್ಲ. 'ಒಳ್ಳೆಯ ದಿನಗಳು ಬರಲಿವೆ' ಎಂಬ ಅವರ ಚುನಾವಣಾ ಪ್ರಚಾರದ ಬೆನ್ನೆಲುಬಾದ ಘೋಷಣೆಯ ಬಗ್ಗೆಯೂ ಏನೂ ಪ್ರಸ್ತಾಪವಿರಲಿಲ್ಲ. ಈ ಹಿಂದೆ ಹೇಳಿದಂತೆ, ದೊಂಬಿ ಪ್ರಚೋದಕ ಎಂದೇ ಹೇಳಬಹುದಾದ ಟೊಳ್ಳು ಮಾತುಗಳಿಂದಲೇ ಅವರ ಕೆಂಪುಕೋಟೆ ಭಾಷಣ ತುಂಬಿ ಹೋಗಿತ್ತು.

ಈಗ, ಕೊನೆಯದಾಗಿ ಸರಕಾರದ ಮುಖ್ಯಸ್ಥರಾಗಿ (ಈ ಹಿಂದೆ ಬಹಳ ಉತ್ಸಾಹದಿಂದ ಪ್ರಕಟಿಸಿ ಮುಂದೂಡಿದ ಮೇಲೆ ಕೈಗೊಂಡಿರುವ) ತನ್ನ ಜಪಾನ್ ಭೇಟಿಯಲ್ಲಿ ಮೋದಿ ಪ್ರಧಾನಿಯಾಗಿ ತನ್ನ ಮೊದಲ ನೂರು ದಿನಗಳಲ್ಲೇ ಪವಾಡಗಳನ್ನು ನಡೆಸಿರುವುದಾಗಿ ಗುಡುಗಿದ್ದಾರೆ. ತಾನು ರಾಷ್ಟ್ರೀಯ ರಾಜಕಾರಣಕ್ಕೆ ಹೊಸಬನಾಗಿದ್ದರೂ, ದಿಲ್ಲಿಗೆ ಬರಲು ಅಳುಕಿದ್ದರೂ ಕೇವಲ ನೂರೇ ದಿನಗಳ ಅಂತರದಲ್ಲಿ ಹಿಂದಿನ ಸರಕಾರದ ಅಡಿಯಲ್ಲಿ ಭಾರತಕ್ಕೆ ಬಡಿದಿದ್ದ 'ಪಾರ್ಶ್ವವಾಯು'ವನ್ನು ಬಿಡಿಸಿದ್ದಾಗಿ ಹೇಳಿದ್ದಾರೆ. ತನ್ನ ಈ ದಾವೆಯನ್ನು ಸಮರ್ಥಿಸಿಕೊಳ್ಳಲು ತನ್ನ ಹಣಕಾಸು ಮಂತ್ರಿಗಳು ಎರಡು ದಿನಗಳ ಮೊದಲು ಆಡಂಬರದಿಂದ ಪ್ರಕಟಿಸಿದ ಅಂಕಿ–ಅಂಶಗಳನ್ನು ಅವರು ಉದ್ಧರಿಸಿದ್ದಾರೆ.

ಈಗಲೂ ಮೋದಿಯವರ ಪರಾಕು ಹೇಳುವ ತಂಡವಾಗಿ ಕೆಲಸ ಮಾಡುತ್ತಿರುವ ಕಾರ್ಪೊರೇಟ್ ಭಾರತ ಮತ್ತು ಕಾರ್ಪೊರೇಟ್ ಮಾಧ್ಯಮಗಳು, ಈ ಹಿಂದೆ ಭಾರತ ಸರಕಾರದ ಮುಖ್ಯಸ್ಥರ ಯಾವುದೇ ಭೇಟಿ ಇಷ್ಟೊಂದು ಯಶಸ್ವಿಯಾಗಿರಲಿಲ್ಲ ಎಂದು ಜನಗಳು ನಂಬುವಂತೆ ಮಾಡುವ ಭಾವೋನ್ಮಾದವನ್ನೇ ಹುಟ್ಟುಹಾಕಿವೆ. ನನ್ನ ಮೊದಲು ಇತಿಹಾಸವೇ ಇರಲಿಲ್ಲ, ನನ್ನ ನಂತರ ಪ್ರಳಯ ಬರಲಿ ಎಂದು ಫ್ರಾನ್ಸಿನ ದೊರೆ 15ನೇ ಚಾರ್ಲ್ಸ್ ಹೇಳುತ್ತಿದ್ದಂತೆ!

'ಉದ್ಧಾರಕ'ನೋ, 'ಜಾದೂಗಾರ'ನೋ?

ವಿದೇಶೀ ನೆಲದಲ್ಲಿ ಮೋದಿಯವರು, ಭಾರತದ 'ಪಾರ್ಶ್ವವಾಯು'ವನ್ನು ಬಿಡಿಸಿರುವೆನೆಂದು ಹೇಳಿಕೊಂಡಿರುವುದಕ್ಕೆ ಆಧಾರವಾದದ್ದು 2014–15 ಹಣಕಾಸು ವರ್ಷದ ಮೊದಲು ಮೂರು ತಿಂಗಳಲ್ಲಿ, ಅಂದರೆ ಎಪ್ರಿಲ್–ಜೂನ್ ಅವಧಿಯಲ್ಲಿ ದೇಶದ ಹೆಚ್ಚಳ 5.7 ಶೇ. ಎಂಬ ಲೆಕ್ಕಾಚಾರ. ಇದು ಕಳೆದ ಎರಡು ವರ್ಷಗಳಲ್ಲಿ ಸರಾಸರಿ 5ಶೇ.ದ ಕೆಳಗೇ ಇತ್ತು. ಇವು 'ತ್ವರಿತ ಅಂದಾಜು'ಗಳಷ್ಟೇ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಮುಂದೆ ಅಂತಿಮ ಅಂಕಿ–ಅಂಶಗಳು ಬಂದಾಗ ನಿಜವಾದ ಬೆಳವಣಿಗೆ ದರ ಇದು ಬೇರೆಯೇ ಆಗಿರುವ ಸಾಧ್ಯತೆ ಇದೆ. ಅದೇನೇ ಇರಲಿ, ಮೋದಿಯವರು ಪ್ರಧಾನ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡದ್ದು ಮೇ 26ರಂದು, ಅಂದರೆ ಈ ಮೂರು ತಿಂಗಳ ಅವಧಿಯಲ್ಲಿ ಅವರಿಗೆ 'ಪವಾಡ' ನಡೆಸಲು ಸಿಕ್ಕಿದ್ದು ಜೂನ್ ತಿಂಗಳು ಮಾತ್ರ. ಭಾರತದ ಕಾರ್ಪೊರೇಟ್ ಮಂದಿಗೆ ಒಬ್ಬ 'ಉದ್ಧಾರಕ'ನ ಬದಲಿಗೆ ಒಬ್ಬ 'ಜಾದೂಗಾರ' ಸಿಕ್ಕಿದ್ದಾನೆ!

ವಾಸ್ತವವಾಗಿ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ಈ ಅಂಕಿ–ಅಂಶಗಳನ್ನು ಬಗೆದು ನೋಡಿ ಹೇಳಿರುವ ಪ್ರಕಾರ ಜೂನ್ 2014ರಲ್ಲಿ ಸುಮಾರಾಗಿ ಆರ್ಥಿಕದ ಎಲ್ಲ ವಲಯಗಳಲ್ಲೂ ಹೆಚ್ಚಳ ದರ ಒಟ್ಟಾರೆಯಾಗಿ ಇಳಿಮುಖಗೊಂಡಿದೆ. ಬಹುಶ: ತಾವು ಕಂಡುಕೊಂಡದ್ದು ಒಬ್ಬ ಜಾದೂಗಾರನೂ ಅಲ್ಲ, ವಾಸ್ತವವಾಗಿ ಆತನೊಬ್ಬ ಸಮಕಾಲೀನ ಗೊಬೆಲ್ಸ್ ಎಂದು ಬೇಗನೇ ಈ ಕಾರ್ಪೊರೇಟ್ ಮಾಧ್ಯಮಗಳ ಅರಿವಿಗೂ ಬಂದಾಗ ಅವರು ಖಿನ್ನರಾಗ'ಬೇಕಾಗಬಹುದು.

ಶುದ್ಧ ಅವಿವೇಕ

ಈ ಪ್ರಸಕ್ತ ಮೂರು ತಿಂಗಳಲ್ಲಿ ಎರಡು ತಿಂಗಳು ಯುಪಿಎ–2 ಸರಕಾರದ ಆಳ್ವಿಕೆಯಲ್ಲಿ ಬರುವುದರಿಂದ, ಹಿಂದಿನ ಸರಕಾರ ತಯಾರಿಸಿದ, ಆರ್ಥಿಕ ಸರ್ವೆ 2013–14, ಪ್ರಸಕ್ತ ವರ್ಷದಲ್ಲಿ, ಅಂದರೆ 2014–15ರಲ್ಲಿ ಆರ್ಥಿಕ ಸಾಧ್ಯತೆಗಳು ಏನಿರಲು ಸಾಧ್ಯ ಎಂಬ ಸೂಚನೆಗಳನ್ನು ನಮಗೆ ಕೊಡಬಲ್ಲದು. ಈ ಸರ್ವೆ ಆರಂಭವಾಗುವುದೇ "2014–15ರಲ್ಲಿ ಭಾರತದ ಆರ್ಥಿಕತೆ, ಕಳೆದೆರಡು ವರ್ಷಗಳಲ್ಲಿ ಕಂಡಂತೆ, ಜಿಡಿಪಿ ಹೆಚ್ಚಳ ದರ 5ಶೇ.ಕ್ಕಿಂತ ಕೆಳಗಿರುವ ಪರಿಸ್ಥಿತಿಯನ್ನು ಮೀರಿ ನಡೆಯಲು ಸಿದ್ಧವಾಗಿದೆ" ಎಂಬ ಹೇಳಿಕೆಯೊಂದಿಗೆ. ತಮಾಷೆಯೆಂದರೆ, ಈ ಸರ್ವೆಯನ್ನು ಸಂಸತ್ತಿನ ಮುಂದೆ ಇಟ್ಟವರು ಈಗಿನ ಹಣಕಾಸು ಮಂತ್ರಿಗಳೇ. ಮುಂದುವರೆದು ಆ ಸರ್ವೆ ಹೀಗೂ ಹೇಳುತ್ತದೆ: "ಸ್ಥೂಲ ಸ್ಥಿರೀಕರಣ ರಂಗದಲ್ಲಿನ ಬೆಳವಣಿಗೆಗಳು, ಅದರಲ್ಲೂ ಚಾಲ್ತಿ ಖಾತೆ ಕೊರತೆ(ಸಿಎಡಿ)ಎರಡು ವರ್ಷಗಳ ಆತಂಕ ಹುಟ್ಟಿಸುವ ಮಟ್ಟಗಳಿಂದ ಈಗ ನಿರ್ವಹಿಸಬಹುದಾದ ಮಟ್ಟಗಳಿಗೆ ಇಳಿದು ಬಾಹ್ಯ ಆರ್ಥಿಕ ಸನ್ನಿವೇಶ ಗಮನಾರ್ಹ ರೀತಿಯಲ್ಲಿ ಉತ್ತಮಗೊಂಡಿರುವುದು 2013–14ರ ಒಂದು ನಿರಾಳಗೊಳಿಸುವ ಸಂಗತಿ. ಕೇಂದ್ರದ ಹಣಕಾಸು ಕೊರತೆ ಜಿಡಿಪಿಯ ಒಂದು ಅನುಪಾತವಾಗಿ ಕೂಡ ಇಳಿದಿದೆ....". ಈ ಸರ್ವೆಯ ಆರಂಭಿಕ ವಿಭಾಗ "ನಮ್ಮ ಆರ್ಥಿಕ 2014–15ರಲ್ಲಿ ಉತ್ತಮ ಹೆಚ್ಚಳದ ಸಾಧ್ಯತೆಗಳನ್ನು ನಿರೀಕ್ಷಿಸಲು ಸಾಧ್ಯವಿದೆ" ಎಂಬ ಮಾತುಗಳೊಂದಿಗೆ ಮುಗಿಯುತ್ತದೆ.

ಯುಪಿಎ–2 ಸರಕಾರದ ನವ–ಉದಾರವಾದಿ ಧೋರಣೆಗಳು ಸೃಷ್ಟಿಸಿದ ಆರ್ಥಿಕ ಸಮಸ್ಯೆಗಳು ಜನಸಾಮಾನ್ಯರ ಮೇಲೆ ಅಭೂತಪೂರ್ವ ಸಂಕಟಗಳನ್ನು ಹೊರಿಸಿ ಅದೇ ಬಿಜೆಪಿಗೆ ಚುನಾವಣಾ ಗೆಲುವು ಸಾಧಿಸಲು ಪ್ರಯೋಜನಕಾರಿಯಾಯಿತು ಎಂಬುದರಲ್ಲಿ ಏನೇನೂ ಸಂದೇಹವಿಲ್ಲ. ಆದ–ರೆ, ಅಲ್ಲಲ್ಲಿ ಕಾಣುವ ಅಲ್ಪ–ಸ್ವಲ್ಪ ಚೇತರಿಕೆ 'ಮೋದಿ ಜಾದೂ' ಎಂದು ಗುಡುಗುವುದು ಶುದ್ಧ ಅವಿವೇಕತನ.

'ಒಳ್ಳೆಯ ದಿನಗಳ' ದಾರಿ ಇದಲ್ಲ

ಈ ಸರಕಾರ ನೀಡಿರುವ ಆರಂಭಿಕ ಸಂಕೇತಗಳು, ಮತ್ತು ಅದರ ಪರಿಣಾಮವಾಗಿ ತರುತ್ತಿರುವ ಖಾಸಗೀಕರಣದ ಮತ್ತು ವಿದೇಶಿ ಬಂಡವಾಳಕ್ಕೆ ಭಾರತೀಯ ಮಾರುಕಟ್ಟೆಗಳಿಂದ ಮತ್ತು ಸಂಪನ್ಮೂಲಗಳಿಂದ ತನ್ನ ಲಾಭಗಳನ್ನು ಗರಿಷ್ಟ ಪ್ರಮಾಣಕ್ಕೆ ಏರಿಸಿಕೊಳ್ಳಲು ಅವಕಾಶ ಕಲ್ಪಿಸುವ ಶಾಸನಗಳು, ಈ ಮೋದಿ ಸರಕಾರ ಅದೇ ನವ–ಉದಾರವಾದಿ ಆರ್ಥಿಕ ಸುಧಾರಣೆಗಳ ದಿಕ್ಕಿನಲ್ಲೇ ಇನ್ನಷ್ಟು ರಭಸದಿಂದ ಸಾಗುತ್ತದೆ ಎಂಬುದರ ಸೂಚನೆಗಳನ್ನು ಕೊಡುತ್ತಿವೆ. ಇದೀಗ ಜಪಾನಿನಲ್ಲಿ ಪ್ರಧಾನ ಮಂತ್ರಿಗಳು ಹೆಚ್ಚಿನ ಹೂಡಿಕೆಗಳನ್ನು ಆಕರ್ಷಿಸಲು ನೀಡಿರುವ ಭರವಸೆಗಳ ಸಾರ. ಸುಮಾರು 20ಲಕ್ಷ ಕೋಟಿ ರೂ.ಗಳ ಜಪಾನೀ ಹೂಡಿಕೆ ಬರಲಿದೆ ಎಂದು ದೇಶಕ್ಕೆ ಹೇಳಲಾಗುತ್ತಿದೆ. ಈ ಹಿಂದೆಯೂ ಹಲವು ಬಾರಿ ಇಂತಹುದೇ ಭರವಸೆಗಳು ಮಾತ್ರವಲ್ಲ, ಇನ್ನೂ ದೊಡ್ಡ ಸಂಖ್ಯೆಯ ಒಪ್ಪಂದ ಪತ್ರಗಳಿಗೆ ಸಹಿಗಳನ್ನೂ ಹಾಕಲಾಗಿದೆ. ಆದರೆ ಗಮನಾರ್ಹ ಹೂಡಿಕೆಗಳೇನೂ ಬಂದಿಲ್ಲ. ಅಷ್ಟೇ ಅಲ್ಲ, ಇಂತಹ ಯಾವುದೇ ಹೂಡಿಕೆ ಕೊನೆಗೂ ಬಂದರೂ, ಅವು ನಮ್ಮ ದೇಶದ ಉತ್ಪಾದಕ ಸಾಮರ್ಥ್ಯವನ್ನೇನಾದರೂ ಹೆಚ್ಚಿಸಬಲ್ಲವೇ, ಅಂ–ದರೆ ಹೊಸ ಕಾರ್ಖಾನೆಗಳನ್ನು ಸ್ಥಾಪಿಸುತ್ತವೆಯೇ, ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸುತ್ತವೆಯೇ ಅಥವ ಭಾರತದಲ್ಲಿ ಈಗ ಲಭ್ಯವಿರದ ತಂತ್ರಜ್ಞಾನವನ್ನು ತರುತ್ತವೆಯೇ ಎಂದು ಕಾದು ನೋಡಬೇಕಷ್ಟೇ. ನಮ್ಮ ಸಂಪನ್ಮೂಲಗಳನ್ನು, ಕಚ್ಚಾ ವಸ್ತುಗಳನ್ನು ಮತ್ತು ಅಗ್ಗದ ಶ್ರಮಶಕ್ತಿಯನ್ನು ಉಪಯೋಗಿಸಿಕೊಂಡು ತಮ್ಮ ಲಾಭವನ್ನಷ್ಟೇ ಏರಿಸಿಕೊಳ್ಳುವ, ಅದಕ್ಕೆ ಪ್ರತಿಯಾಗಿ ಗಮನಾರ್ಹವಾದುದೇನನ್ನೂ ಕೊಡದ ಹೂಡಿಕೆಗಳಿಂದ ಭಾರತಕ್ಕೆ ಒಳ್ಳೆಯದಾಗುವುದಕ್ಕಿಂತ ಕೆಡುಕೇ ಹೆಚ್ಚು. ಈ ಎರಡನೇ ಸಾಧ್ಯತೆಯೇ ಹೆಚ್ಚು. ಏಕೆಂದರೆ ಜಪಾನ್‌ನಲ್ಲಿ ಈಗಷ್ಟೇ ಆರ್ಥಿಕ ನಿಧಾನಗತಿ ಮತ್ತು ಹಿಂಜರಿತದಿಂದ ಚೇತರಿಕೆಯ ಕೆಲವು ಸೂಚನೆಗಳು ಕಾಣ ಬರಲಾರಂಭಿಸಿವೆ. ಇದನ್ನು ಕ್ರೋಢೀಕರಿಸಲು ಅದು ಭಾರತದಿಂದ ತನ್ನ ಲಾಭಗಳನ್ನು ಗರಿಷ್ಟ ಮಟ್ಟಕ್ಕೇರಿಸುವ ದಾರಿಯನ್ನೇ ಹಿಡಿಯಬಹುದು.

ಹೀಗೆ ಜನಗಳಿಗೆ 'ಒಳ್ಳೆಯ ದಿನ'ಗಳನ್ನು ಮೋದಿ ಸರಕಾರ ಕೊಡಲಾರದು. ಜನಗಳು ತಾವೇ ಇವನ್ನು ಈಡೇರಿಸಿಕೊಳ್ಳಬೇಕಾಗುತ್ತದೆ; ಈಗ ಮೂಡಿ ಬರುತ್ತಿರುವ ನವ–ಉದಾರವಾದಿ ಆರ್ಥಿಕ ಸುಧಾರಣೆಗಳು ಮತ್ತು ಹೆಚ್ಚುತ್ತಿರುವ ಕೋಮುವಾದದ ವಿಷಮಿಶ್ರಣದ ವಿರುದ್ಧ ಅವಿರತ ಹೋರಾಟಗಳ ಮೂಲಕ ಇವನ್ನು ಈಡೇರಿಸಿಕೊಳ್ಳಬೇಕಾಗುತ್ತದೆ; ತಮ್ಮ ಐಕ್ಯ ಮತ್ತು ಬಲಿಷ್ಟವಾದ ಚಳುವಳಿಗಳ ಮೂಲಕ ಈ ಸರಕಾರ ಈ ಎರಡೂ ರಂಗಗಳಲ್ಲಿ ತಮ್ಮ ಧೋರಣೆಯ ದಿಕ್ಕನ್ನು ಬದಲಿಸುವಂತೆ ಅದರ ಮೇಲೆ ಒತ್ತಡ ತರಬೇಕಾಗುತ್ತದೆ. ಇಲ್ಲವಾದರೆ ನಮ್ಮ ಬಹುಪಾಲು ಜನಗಳ ಜೀವನದ ಗುಣಮಟ್ಟ ಮತ್ತಷ್ಟು ಹದಗೆಡಬಲ್ಲದು.

ಶೇರು ಸೂಚ್ಯಂಕ ಅಳೆಯಲು ಜಪಾನಿನಿಂದ
ಸೂಪರ್ ಕಂಪ್ಯೂಟರ್ ಬಂದಿದೆ!
'ಡಕ್ಕನ್ ಕ್ರಾನಿಕಲ್'ನಲ್ಲಿ ಶುಭಾನಿಲ್ ವ್ಯಂಗ್ಯ



'ನೈಸ್ ಕಂಪನಿಯ ಭೂಕಬಳಿಕೆ ಪ್ರವೃತ್ತಿಗೆ ಪ್ರತಿರೋಧ ಒಡ್ಡಲು ಕರೆ' – ರೈತರ 'ಬೆಂಗಳೂರು ಸಮಾವೇಶ'ದ ನಿರ್ಧಾರ

ಅಕ್ಟೋಬರ್ 7, 2014 ರಂದು ಮೈಸೂರಿನಿಂದ ಬೆಂಗಳೂರು ಕಡೆಗೆ ಸಾಮೂಹಿಕ ಪಾದಯಾತ್ರೆ ಆರಂಭ



'ನೈಸ್' ಎಂಬ ಕಂಪನಿಯು ಬೆಂಗಳೂರು ಹೊರವಲಯದಲ್ಲಿ ರಸ್ತೆ ಮಾಡುತ್ತಿದ್ದಾಗ, ಈ ಕಂಪನಿ ಬೆಂಗಳೂರಿನಿಂದ ಮೈಸೂರಿಗೆ ಶೀಘ್ರ ಸಂಚರಿಸುವ ಉತ್ತಮ ರಸ್ತೆ ಮಾಡುವ ಯೋಜನೆಯ ಬಗ್ಗೆ ಮಾತನಾಡುವಾಗ ದೊಡ್ಡ ಸಂಖ್ಯೆಯ ಜನರು ಇದೇನೋ ಒಂದು ಬಾರಿ ಅಭಿವೃದ್ಧಿಯ ಕೆಲಸ ಎಂದುಕೊಂಡಿದ್ದರು. 'ನೈಸ್' ಕಂಪನಿಯ ಹುನ್ನಾರಗಳ ಬಗೆಗೆ ಕ್ರಮೇಣ ಹಲವು ವಲಯಗಳಿಂದ ಆಕ್ಷೇಪಗಳು, ವಿರೋಧಗಳು ಹೆಚ್ಚುತ್ತಿರುವಾಗಲೂ ಕೆಲವರು ಅದು ಅಭಿವೃದ್ಧಿ ಕೆಲಸಕ್ಕೆ ಅಡ್ಡಿ ಎಂದೇ ಭಾವಿಸಿದ್ದರು. ಆದ–ರೆ 'ನೈಸ್' ಎಂಬ ಹೆಸರು ಕೇಳಿದರೆ ಇಂದು ಜನ ಸಾಮಾನ್ಯರ ಮನಸ್ಸಿನಲ್ಲಿ ಮೂಡುವ ಚಿತ್ರವೇನು? ಆರು ಕಾಸಿಗೆ ಮೂರು ಕಾಸಿಗೆ ರೈತರ ಭೂಮಿ ಕಿತ್ತುಕೊಳ್ಳುವ – 'ರಸ್ತೆ'ಯ ಹೆಸರಿನಲ್ಲಿ ದಬಾವಣೆ, ದಬ್ಬಾಳಿಕೆ ಮೂಲಕ ರಿಯಲ್ ಎಸ್ಟೇಟ್ ದಂಧೆ ನಡೆಸುತ್ತಿರುವ ಒಂದು ಲೂಟಿಕೋರ ಕಂಪನಿ. ಇದೊಂದು ಭೂಮಿ ನುಂಗುವ ದಗಾಕೋರ ಕಂಪನಿ ಎಂಬುದರ ಬಗೆಗೆ ಈಗ ಬಹುತೇಕ ಯಾರಿಗೂ ಅನುಮಾನ ಉಳಿದಿಲ್ಲ.

ಇಂತಹ ಈ ನೈಸ್ ಕಂಪನಿಯ ದಬ್ಬಾಳಿಕೆಯಿಂದ ನಲುಗಿದ, ಕಂಪನಿಯಿಂದ ಅನ್ಯಾಯಕ್ಕೊಳಗಾದ ರೈತರು ಹಾಗೂ ನಿವೇಶನದಾರರ ಸಮಾವೇಶವೊಂದು ಇದೇ ಸೆಪ್ಟೆಂಬರ್ 1, 2014 ರಂದು ಬೆಂಗಳೂರು ನಗರದ ಕಬ್ಬನ್ ಪಾರ್ಕಿನ ಎನ್‌ಜಿಓ ಸಭಾಂಗಣದಲ್ಲಿ ನಡೆಯಿತು. ಬೆಂಗಳೂರು, ರಾಮನಗರ, ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ನೈಸ್ ಕಂಪನಿಯ ಒತ್ತಡ ಒಳಗಾಗಿರುವವರು, ಈಗಾಗಲೇ ವಂಚನೆಗೊಳಗಾಗಿ ಭೂಮಿ ಕಳೆದುಕೊಂಡವರು, ಅತಿ ನಿಕೃಷ್ಟ ಪರಿಹಾರ ಪಡೆದು ಬೀದಿ ಪಾಲಾದವರು, ಯಾವ ಪರಿಹಾರವೂ ಸಿಗದೇ ಹೋದವರು, ರಿಯಲ್ ಎಸ್ಟೇಟ್ ಮಾಫಿಯಾಗೆ ಭೂಮಿಯನ್ನು ಮಾರಬೇಕೆಂಬ ನೈಸ್ ಕಂಪನಿಯ ಏಜೆಂಟ–ರು, ಗೂಂಡಾಗಳ ಒತ್ತಾಯಕ್ಕೆ ಮಣಿಯದೇ ಸೆಣೆಸುತ್ತಿರುವವವರು ಮುಂತಾದವರು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

'ಕರ್ನಾಟಕ ಪ್ರಾಂತ ರೈತ ಸಂಘ' ಮತ್ತು 'ನೈಸ್ ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ'ಗಳು ಜಂಟಿಯಾಗಿ ಈ ಸಮಾವೇಶವನ್ನು ಸಂಘಟಿಸಿದ್ದವು. ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಎನ್. ವೆಂಕಟಾಚಲಯ್ಯ ವಹಿಸಿದ್ದರು.

"'ನೈಸ್ ಹಗರಣ' ಒಂದು ಲಕ್ಷ ಕೋಟಿ ರೂ.ಗಳ ದೊಡ್ಡ ಹಗರಣ.'



– ಮಾರುತಿ ಮಾನ್ವಡೆ

ಸಮಾವೇಶದ ಆರಂಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಆಧ್ಯಕ್ಷರಾದ ಮಾರುತಿ ಮಾನ್ವಡೆಯವರು ಮಾತನಾಡಿ ಮುಗ್ದ ಜನರು "ಖೇಣಿಯು ನೈಸ್ ರಸ್ತೆ ಮಾಡಿದ್ದಾನೆ.. ಬಂಡವಾಳ ಹಾಕಿದ್ದಾನೆ ಎಂದೆಲ್ಲಾ ಅಂದು–ಕೊಂಡಿದ್ದರು. ವಾಸ್ತವ ಅಂದರೆ ನೈಸ್ ಕಂಪನಿ ಯಾವ ಬಂಡವಾಳವನ್ನು ಹೂಡಿಲ್ಲ. ಸರಕಾರಿ ಭೂಮಿಯನ್ನೇ ಬ್ಯಾಂಕುಗಳಲ್ಲಿ ಅಡವಿಟ್ಟು ಸರ್ಕಾರದ ಗ್ಯಾರಂಟಿ ಆಧಾರದಲ್ಲಿ ಸಾಲ ಪಡೆದುಕೊಂಡು ರಸ್ತೆ ಮಾಡಿದ್ದಾನೆ. ನೈಸ್ ಕಂಪನಿಯ ಹಗರಣ ಸುಮಾರು ಒಂದು ಲಕ್ಷ ಕೋಟಿ ರೂಪಾಯಿಗಳಷ್ಟು ದೊಡ್ಡ ಹಗರಣ. ಹಾಲಿ ಕಾಂಗ್ರೆಸ್ ಸರ್ಕಾರದ ಸಚಿವ ಡಿ.ಕೆ. ಶಿವಕುಮಾರ್ ಸೇರಿದಂತೆ ಈ ಹಗರಣವು ಸರ್ಕಾರದಲ್ಲಿ ಇರುವವರು ಸೇರಿಕೊಂಡು ಇದು ನಡೆದಿದೆ. ಜನತಾ ದಳ, ಕಾಂಗ್ರೆಸ್, ಬಿಜೆಪಿ ಮೂರು ಸರ್ಕಾರಗಳು ಈ ಹಗರಣದಲ್ಲಿ ಭಾಗಿ ಆಗಿವೆ." ಎಂದರು.

ವಿದ್ಯುತ್, ಕಲ್ಲಿದ್ದಲು, ಕಬ್ಬಿಣ ಮುಂತಾದ ಖನಿಜ ಸಂಪನ್ಮೂಲಗಳ ಗಣಿಗಾರಿಕೆಯಂತಹ ಮೂಲಭೂತ ಸೌಕರ್ಯಗಳ ಕ್ಷೇತ್ರದಲ್ಲಿ ತರಲಾದ ಖಾಸಗೀಕರಣದ ನೀತಿಗಳು ದೊಡ್ಡ ದೊಡ್ಡ ಹಗರಣಗಳಿಗೆ ಕಾರಣವಾಗಿದೆ. ಅದೇ ರೀತಿಯಲ್ಲಿ ರಸ್ತೆ ನಿರ್ಮಾಣದ ಹೊಣೆಯ ಖಾಸಗೀಕರಣವು ನೈಸ್ ಹಗರಣದಂತಹ ಬಾರಿ ಹಗರಣಕ್ಕೆ ಕಾರಣವಾಗಿದೆ ಎಂದು ಮಾನ್ವಡೆಯವರು ವಿವರಿಸಿದರು.

'ರೆಡ್ಡಿ ರಿಪಬ್ಲಿಕ್' ಹೋಗಿ – 'ಡಿಕೆಶಿ ರಿಪಬ್ಲಿಕ್' ಬಂದಿದೆ

ಎಸ್.ಎಂ. ಕೃಷ್ಣ ಸರಕಾರದ ಅವಧಿಯಲ್ಲಿ ಭೂಮಿಯ ಬೆಲೆ ನಿಗದಿಗೆ ಸಂಬಂಧಿಸಿ ತೀರ್ಮಾನ ಕೈಗೊಳ್ಳಲಾಯಿತು. ಅದೇ ರೀತಿಯಾಗಿ ಬೆಂಗಳೂರು–ಮೈಸೂರು ನಡುವಿನ ನಿಗದಿತ ಮಾರ್ಗದಲ್ಲಿ ಬದಲಾವಣೆಗೆ ಅವಕಾಶ ಮಾಡಿಕೊಡಲಾಯಿತು. ರಸ್ತೆ ಹಾದು ಹೋಗುವ ಮಾರ್ಗದ ನಾಲ್ಕು ಜಿಲ್ಲೆಗಳಲ್ಲಿ ಒಟ್ಟು 75 ಸಾವಿರ ಎಕರೆ ಭೂಮಿಯನ್ನು 'ಪಡೆದುಕೊಳ್ಳ'ಬೇಕೆಂದಿರುವ ಯೋಜನೆಯಿದು. ಭೂಮಿ ಕಳೆದುಕೊಂಡ ರೈತರಿಗೆ ಎಕರೆ ಒಂದು 60*40 ಅಡಿ ಅಳತೆಯ ನಿವೇಶನ ನೀಡಬೇಕೆಂದಿತ್ತು. ಅದು ಯಾವುದೂ ರೈತರಿಗೆ ಸಿಕ್ಕಿಲ್ಲ. ಈ ಬಗೆಗೆ ಪ್ರಶ್ನಿಸಿದವರ ಮೇಲೆ ಹತ್ತಾರು ಪೋಲಿಸ್ ಮೊಕದ್ದಮೆಗಳು ದಾಖಲಾಗಿವೆ. ಆಳುವವರು ಅಧಿಕಾರಿಗಳು ನೈಸ್ ಕಂಪನಿಯ ಜೊತೆ ಶಾಮೀಲಾಗಿದ್ದಾರೆ. ರಾಜ್ಯದ ಹಾಲಿ ಮುಖ್ಯಮಂತ್ರಿಗಳು ಸ್ವಚ್ಛ ಎಂದು ಹೇಳಿಕೊಳ್ಳುತ್ತಾರೆ. ನೈಸ್ ಹಗರಣದ ಭ್ರಷ್ಟರ ವಿರುದ್ದ ಸೂಕ್ತ ಕ್ರಮಕೈಗೊಳ್ಳದ ಮುಖ್ಯಮಂತ್ರಿಗಳು ಸ್ವಚ್ಛ ಮುಖ್ಯಮಂತ್ರಿಗಳು ಹೇಗಾಗುತ್ತಾರೆ ಎಂದು ಪ್ರಶ್ನಿಸಿದ ಮಾರುತಿ ಮಾನ್ವಡೆಯವರು ರಾಜ್ಯದಲ್ಲಿ 'ರೆಡ್ಡಿ ರಿಪಬ್ಲಿಕ್' ಹೋಗಿ 'ಡಿಕೆಶಿ ರಿಪಬ್ಲಿಕ್' ಬಂದಿದೆ ಎಂದು ಹೇಳಿದರು.

'ರಸ್ತೆಗೆ ಅಗತ್ಯವಾದಷ್ಟು ಭೂಮಿಯನ್ನು ಮಾತ್ರ ನೀಡಬೇಕು– ಹೊಸ ಭೂಸ್ವಾಧೀನ ಕಾಯ್ದೆಯಂತೆ ಪರಿಹಾರ ಕೊಡಬೇಕು.'

– ಜಿ.ವಿ.ಶ್ರೀರಾಮರೆಡ್ಡಿ

1995 ರಲ್ಲಿ ಎಚ್.ಡಿ. ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಒಪ್ಪಂದ ಏರ್ಪಟ್ಟಿತು. ಮೂಲ ಒಪ್ಪಂದವು ಅಮೇರಿಕದ 'ಭಾರತ್ ಫೋರ್ಜ್ ಕಂಪನಿ'ಯೊಂದಿಗೆ ಆಗಿದೆ. ಖೇಣಿ ಆ ಕಂಪನಿಯ ಮುಖ್ಯಸ್ಥ ಆಗಿರಲಿಲ್ಲ. ಆತ ಕೇವಲ



ಜಿ.ವಿ.ಶ್ರೀರಾಮರೆಡ್ಡಿ

ಆ ಕಂಪನಿಯ ಒಬ್ಬ ಸದಸ್ಯನಾಗಿದ್ದ. ಫ್ರೇಮ್‌ವರ್ಕ್ ಅಗ್ರಿಮೆಂಟ್(ಚೌಕಟ್ಟು ಒಪ್ಪಂದ)ನಲ್ಲಿ ಖೇಣಿ ಸಹಿ ಇಲ್ಲ. ತಿಳುವಳಿಕೆ ಒಪ್ಪಂದ(ಎಂ.ಒ.ಯು.)ಕ್ಕೆ ದೇವೇಗೌಡರು ಸಹಿ ಹಾಕಿದ್ದಾರೆ. ಬೆಂಗಳೂರು ಹೊರವಲಯದಲ್ಲಿ ಹೊಸೂರು ರಸ್ತೆ ಮತ್ತು ತುಮಕೂರು ರಸ್ತೆಯನ್ನು ಸಂಪರ್ಕಿಸುವ (ಫೆರಿಫೆರಿಯಲ್) ರಸ್ತೆ ನಿರ್ಮಾಣಕ್ಕೆ 2,193 ಎಕರೆ ಭೂಮಿ ನೀಡುವುದು ಎಂಬುದು ಒಪ್ಪಂದದಲ್ಲಿದೆ. ಭೂಮಿಯನ್ನು ಎಲ್ಲಿ ಕೊಡಬೇಕು, ಏನು ಎಂಬ ವಿವರಗಳ ಕುರಿತು ಸಹ ನಿರ್ದಿಷ್ಟ ವಿವರಗಳು ಲಿಖಿತ ಒಪ್ಪಂದದಲ್ಲಿ ದಾಖಲಾಗಿದೆ.

ಡಿಕೆಶಿ ಎಂಬ 'ಸೂಪರ್ ಕ್ಯಾಬಿನೆಟ್'

ನಂತರದ ಹಂತದಲ್ಲಿ ಎಸ್.ಎಂ. ಕೃಷ್ಣ ಸರಕಾರದ ಅವಧಿಯಲ್ಲಿ ಬೆಂಗಳೂರು ಫೆರಿಫೆರಿಯಲ್ ರಸ್ತೆ ಯೋಜನೆಗೆಂದು 554 ಎಕರೆ ಭೂಮಿಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಡಿ.ಕೆ. ಶಿವಕುಮಾರ್, ಎಲ್.ಆರ್. ಶಿವರಾಮೇಗೌಡ ಮುಂತಾದವರ ಭೂಮಿಯನ್ನು ಉಳಿಸುವ ಸಲುವಾಗಿ ರಸ್ತೆ ಹಾದು ಹೋಗುವ ಮಾರ್ಗ ಬದಲಿಸಲಾಗಿದೆ. ಒಪ್ಪಂದದಂತೆ ಕೊಡಬೇಕಾದ ಭೂಮಿಯ ಬದಲಿಗೆ ಬೇರೆ

ಪುಟ 10 ಕ್ಕೆ

ಮೈಸೂರಿನಿಂದ ಬೆಂಗಳೂರು ವರೆಗೆ ಪಾದಯಾತ್ರೆ ಮತ್ತು ಇತರ ಹೋರಾಟದ ದಾರಿ

ನೈಸ್ ಕಂಪನಿಯ ಲೂಟಿಕೋರ ಭೂಕಬಳಿಕೆ ನೀತಿ ವಿರುದ್ಧ ಹಾಗೂ ಸಂತ್ರಸ್ತ ರೈತರು ಮತ್ತು ಜನರ ಪರವಾಗಿ ಹೋರಾಟವನ್ನು ಬಲಗೊಳಿಸಲು ಸಮಾವೇಶ ನಿರ್ಧರಿಸಿತು. ಈ ನಿಟ್ಟಿನಲ್ಲಿ ರಾಮನಗರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಸಮಾವೇಶಗಳನ್ನು ನಡೆಸಲು ತೀರ್ಮಾನಿಸಲಾಯಿತು. ಹಾಗೂ ಮುಂದಿನ ದಿನಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಸಹ ಸಮಾವೇಶ ನಡೆಸಿ ಹೋರಾಟಕ್ಕೆ ಪೂರ್ವ ಸಿದ್ದತೆ ನಡೆಸಲು ನಿರ್ಧರಿಸಲಾಯಿತು.

ನೈಸ್ ಕಂಪನಿಯ ಅನ್ಯಾಯಗಳ ವಿರುದ್ದ ಅಕ್ಟೋಬರ್ 7, 2014 ರಂದು ಮೈಸೂರಿನಿಂದ ಹೊರಟು ಅಕ್ಟೋಬರ್ 13 ರಂದು ಬೆಂಗಳೂರು ತಲುಪುವ ಸಾಮೂಹಿಕ ಪಾದಯಾತ್ರೆಯನ್ನು ಸಂಘಟಿಸಲು ಸಮಾವೇಶವು ತೀರ್ಮಾನಿಸಿತು.

ಹೋರಾಟ ಸಮಿತಿ

ನೈಸ್ ಕಂಪನಿಯ ಭೂಸ್ವಾಧೀನ ವಿರೋಧಿ ಹೋರಾಟವನ್ನು ಮುನ್ನಡೆಸಲು ಸಮಾವೇಶವು 30 ಜನ ಸದಸ್ಯರಿರುವ ಒಂದು ಹೋರಾಟ ಸಮಿತಿಯನ್ನು ಚುನಾಯಿಸಿತು. ಈ ಸಮಿತಿಯ ಪ್ರಧಾನ ಸಂಚಾಲಕರಾಗಿ ಪ್ರಾಂತ ರೈತ ಸಂಘದ ಮುಖಂಡರಾದ ಎನ್. ವೆಂಕಟಾಚಲಯ್ಯ ಆಯ್ಕೆಯಾದರು. ಸಂಚಾಲಕರುಗಳಾಗಿ ಶ್ರೀನಿವಾಸ್, ರಾಮಕೃಷ್ಣ ರೆಡ್ಡಿ (ಬೆಂಗಳೂರು), ಯಶವಂತ್(ಮಂಡ್ಯ), ಕೆ. ಬಸವ ರಾಜು(ಮೈಸೂರು) ಆಯ್ಕೆಯಾಗಿದ್ದಾರೆ.

'ನೈಸ್ ಕಂಪನಿಯ........

ಪುಟ 9 ರಿಂದ

ಭೂಮಿ ನೀಡಲಾಗಿದೆ. ಈ ಕುರಿತು ರಾಜ್ಯ ಸಚಿವ ಸಂಪುಟ(ಕ್ಯಾಬಿನೆಟ್)ದಲ್ಲಿ ತೀರ್ಮಾನ ಆಗಿಲ್ಲ. ಸಚಿವ ಸಂಪುಟದ ಉಪಸಮಿತಿ ಕೂಡ ಈ ತೀರ್ಮಾನವನ್ನು ಮಾಡಿಲ್ಲ. ಈ ತೀರ್ಮಾನ ಹೇಗೆ ಜಾರಿಯಾಯಿತು? ಡಿ.ಕೆ. ಶಿವಕುಮಾರ್ ಏನು ಕ್ಯಾಬಿನೆಟ್ಟನ್ನೂ ಮೀರಿದ 'ಸೂಪರ್ ಕ್ಯಾಬಿನೆಟ್ಟಾ' ಎಂದು ಜಿ.ವಿ. ಶ್ರೀರಾಮರೆಡ್ಡಿಯವರು ಪ್ರಶ್ನಿಸಿದರು.


'ಬೆಂಗಳೂರು–ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್' ಯೋಜನೆ

'ಬೆಂಗಳೂರು–ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್' ಯೋಜನೆಯ ತಿಳುವಳಿಕೆ ಒಪ್ಪಂದ(ಎಂಒಯು)ದಲ್ಲಿ ಯೋಜನೆಗೆ 17,920 ಎಕರೆ ಭೂಮಿ ಕೊಡಬೇಕೆಂದು ದಾಖಲಾಗಿದೆ. ಇದರಲ್ಲಿ 2 ಸಾವಿರ ಎಕರೆ ಸರ್ಕಾರಿ ಭೂಮಿ ಇದೆ. ಒಂದು ಎಕರೆಗೆ ಒಂದು ವರ್ಷಕ್ಕೆ ಕೇವಲ ಒಂದು ರೂಪಾಯಿ ದರದಲ್ಲಿ ಖೇಣಿಗೆ 99 ವರ್ಷಕ್ಕೆ ಗುತ್ತಿಗೆ ನೀಡಲಾಗಿದೆ. ಇಂತಹ ಭೂಮಿಯನ್ನು ಐಸಿಐಸಿಐ ಬ್ಯಾಂಕ್‌ನಲ್ಲಿ ಅಡವಿಟ್ಟು ಸಾಲ ಪಡೆಯಲು ಎಸ್.ಎಂ.ಕೃಷ್ಣ ಸರಕಾರವು ನೈಸ್ ಕಂಪನಿಗೆ ಪ್ರತಿ ಗ್ಯಾರಂಟಿ ನೀಡಿದೆ ಎಂದ ಶ್ರೀರಾಮರೆಡ್ಡಿಯವರು, ಎಸ್.ಎಂ. ಕೃಷ್ಣ ಸರ್ಕಾರವು ಈ ರೀತಿಯಾಗಿ ಭೂಮಿಯನ್ನು ಯಾವ ಕಾನೂನಿನ ಅಡಿಯಲ್ಲಿ ಕೊಟ್ಟಿದೆ ಎಂಬ ಪ್ರಶ್ನೆಯನ್ನು ನಾನು ವಿಧಾನ ಸಭೆಯಲ್ಲಿ ಎತ್ತಿದಾಗ ಶಾಸನ ಸಭೆಯಲ್ಲಿದ್ದ ಎಸ್.ಎಂ. ಕೃಷ್ಣ ಅವರು ಮಾತನಾಡದೇ ಶಾಸನ ಸಭೆಯಿಂದ ಎದ್ದು ಹೊರಗೆ ಹೋದರು ಎಂದು ಹೇಳಿದರು. ಎಸ್.ಟಿ. ಸೋಮಶೇಖರ್ ಅವರು ಈ ಹೆಚ್ಚುವರಿ ಭೂಮಿ ನೀಡಿಕೆ ವಿಷಯವಾಗಿ ನ್ಯಾಯಾಲಯದ ಮೆಟ್ಟಿಲು ಹತ್ತಿದಾಗ ಸರ್ಕಾರವು ಬೇರೆ ಭೂಮಿ ಕೊಟ್ಟಿರುವ ಬಗೆಗೆ ಸತ್ಯವನ್ನು ಮುಚ್ಚಿಟ್ಟು ಕೋರ್ಟಿಗೆ ಸುಳ್ಳು ಹೇಳಿತು. ಯೋಜನೆಯ ಫ್ರೇಮ್‌ವರ್ಕ್ ಒಪ್ಪಂದದಲ್ಲಿ ಗ್ರಾಮವಾರು, ಸರ್ವೆ ನಂಬರ್ ಸಹಿತ ಯಾವ ಭೂಮಿಯನ್ನು ಎಷ್ಟು ಭೂಮಿಯನ್ನು ಕೊಡಬೇಕೆಂಬ ಸ್ಪಷ್ಟ ದಾಖಲೆ ಇದ್ದರೂ ಅದನ್ನು ಉಲ್ಲಂಘಿಸಿ ಬೇರೆ ಭೂಮಿ ನೀಡಿರುವುದು ಮತ್ತು ಹೆಚ್ಚುವರಿ ಭೂಮಿ ನೀಡಿರುವುದು ಹಗರಣದ ಮೂಲವಾಗಿದೆ. ಈ ಬಗೆಗೆ ಸರಿಯಾದ ತನಿಖೆ ನಡೆದರೆ ಸರಕಾರದ 16 ಇಲಾಖೆಗಳ ಅಧಿಕಾರಿಗಳು ಜೈಲಿಗೆ ಹೋಗಬೇಕಾಗುತ್ತದೆ ಎಂದು ಮಾಜಿ ಶಾಸಕರೂ ಆದ ಜಿ.ವಿ. ಶ್ರೀರಾಮರೆಡ್ಡಿಯವರು ಹೇಳಿದರು.

ತನಿಖೆಗೆ ಸದನ ಸಮಿತಿಯಾಗಿದೆ ಅದರ ವ್ಯಾಪ್ತಿ ನಿಗದಿ ಆಗಿಲ್ಲ !!

ಹಗರಣದ ಕುರಿತು ತನಿಖೆಗೆ ಸದನ ಸಮಿತಿ ರಚಿಸಲಾಗಿದೆ. ಆದರೆ ಸದಸನ ಸಮಿತಿಯ ತನಿಖೆಯ ವ್ಯಾಪ್ತಿಯನ್ನು ನಿರ್ಧರಿಸಲಾಗಿಲ್ಲ. ಈ ಯೋಜನೆಗೆ ನೈಸ್ ಕಂಪನಿಯು 27 ಸಾವಿರ ಎಕರೆ ಭೂಮಿಯನ್ನು ಕೇಳುತ್ತಿದೆ. ಮೂಲ ಒಪ್ಪಂದದಲ್ಲಿ ದಾಖಲಾಗಿರುವುದಕ್ಕಿಂತ ಸುಮಾರು 9 ಸಾವಿರ ಎಕರೆ ಭೂಮಿಯನ್ನು ಹೆಚ್ಚುವರಿಯಾಗಿ ಕಂಪನಿ ಕೇಳುತ್ತಿದೆ ಎಂದ ಶ್ರೀರಾಮರೆಡ್ಡಿಯವರು ನೈಸ್ ಕಂಪನಿಯು ರಿಯಲ್ ಎಸ್ಟೇಟ್ ದಂಧೆ ಬಿಟ್ಟು ಬರಿಯ ರಸ್ತೆ ನಿರ್ಮಾಣವನ್ನಷ್ಟೇ ಮಾಡುವುದಾದರೆ ಕೇವಲ ಬೆಂಗಳೂರು–ಮೈಸೂರು ಹೆದ್ದಾರಿಗೆ ಕೇವಲ 11 ಸಾವಿರ ಎಕರೆ ಭೂಮಿಯಷ್ಟೆ ಸಾಕು ಎಂದರು. ರಾಜ್ಯದಲ್ಲಿ ದೇವೇಗೌಡರ ನಂತರ ಬಂದ ಎಲ್ಲ ಸರ್ಕಾರಗಳೂ ಈ ಯೋಜನೆಯಲ್ಲಿ ಹಗರಣ ನಡೆಸಿವೆ. ಎಸ್.ಎಂ. ಕೃಷ್ಣ ಸರಕಾರದ ಅವಧಿಯಲ್ಲಿ ಡಿ.ಕೆ. ಶಿವಕುಮಾರ್ ಅವರು 'ಡಿ ಫ್ಯಾಕ್ಟೋ' ಮುಖ್ಯಮಂತ್ರಿ (ಅಂದರೆ ವಾಸ್ತವ ಮುಖ್ಯಮಂತ್ರಿ)ಯಾಗಿ ಕೆಲಸ ಮಾಡುತ್ತಿದ್ದರು ಎಂದ ಶ್ರೀರಾಮರೆಡ್ಡಿಯವರು ನಾವು ರಸ್ತೆ ನಿರ್ಮಾಣಕ್ಕೆ ವಿರೋಧವಾಗಿಲ್ಲ. ಆದರೆ ರಸ್ತೆಗೆ ಎಷ್ಟೋ ಭೂಮಿ ಅಗತ್ಯವಾಗಿದೆಯೋ ಅಷ್ಟನ್ನು ಮಾತ್ರ ನೀಡಬೇಕು ಎಂದರು. ಭಾರತ್ ಫೋರ್ಜ್ ಕಂಪನಿಯ ಸದಸ್ಯನಾಗಿದ್ದ ಖೇಣಿ ಆ ಕಂಪನಿಯನ್ನು ವಶಕ್ಕೆ ಪಡೆದುಕೊಂಡಿರುವುದೇ ಒಂದು ಪತ್ಯೇಕ ಹಗರಣ ಎಂದೂ ಅವರು ಹೇಳಿದರು.

ನೈಸ್ ರಸ್ತೆ ಹಾದು ಹೋಗುವ ಪ್ರದೇಶದ ಪೋಲಿಸ್ ಠಾಣೆಗಳು ಇಂದು 'ಖೇಣಿ ಪೋಲಿಸ್ ಠಾಣೆ'ಗಳಾಗಿ ಪರಿವರ್ತನೆ ಆಗಿವೆ. ಖೇಣಿ ಈ ಎಲ್ಲ ಠಾಣೆಗಳಿಗೆ ನೀರು ಇತ್ಯಾದಿ ಪೂರೈಸುತ್ತಿದ್ದಾನೆ ಎಂದು ಶ್ರೀರಾಮರೆಡ್ಡಿಯವರು ಪರಿಸ್ಥಿತಿಯನ್ನು ವಿವರಿಸಿದರು. ಸರ್ಕಾರವು ರಸ್ತೆ ಯೋಜನೆಗೆ ಅಗತ್ಯವಾದಷ್ಟು ಭೂಮಿಯನ್ನು ಮಾತ್ರ ನೀಡಬೇಕು. ಮತ್ತು ಆ ಭೂಮಿಗೆ ಹೊಸ ಭೂಸ್ವಾಧೀನ ಕಾಯ್ದೆಯ ಪ್ರಕಾರ ಮಾರುಕಟ್ಟೆ ಬೆಲೆಯ ಮೂರು ಪಟ್ಟು ಕೊಡಬೇಕು. ಭೂಮಿ ಕೊಡುವ ರೈತರಿಗೆ ನಿವೇಶನ ಕೊಡಬೇಕು ಎಂದು ಒತ್ತಾಯಿಸಿದರು.



'ಭೂಸ್ವಾಧೀನ ಕಾಯ್ದೆ ಸಡಲಿಸಲು ಮೋದಿ ಸರಕಾರದ ಯತ್ನ' – ವಿಜು ಕೃಷ್ಣನ್ ಎಚ್ಚರಿಕೆ

ಹಿಂದೆ ಭೂಸ್ವಾಧೀನ ಕಾಯ್ದೆ ಬರುವ ಹಂತದಲ್ಲಿ ಭೂಸ್ವಾಧೀನಕ್ಕೆ ಪರಿಹಾರವಾಗಿ ಮಾರುಕಟ್ಟೆ ಬೆಲೆಯ 6 ಪಟ್ಟು ಬೆಲೆ ಕೊಡಬೇಕೆಂಬ ಸೂಚನೆ ಇತ್ತು. ನಂತರ ಅದು 4 ಎಂದಿದ್ದದ್ದು ಕೊನೆಗೆ 3 ಪಟ್ಟಿಗೆ ಬಂದು ನಿಂತಿತು. ಈಗ ನರೇಂದ್ರ ಮೋದಿ ಸರಕಾರವು ಇರುವ ಈ ಭೂಸ್ವಾಧೀನ ಕಾಯ್ದೆಯನ್ನೂ ಸಹ ಸಡಲಿಸಲು ಹೊರಟಿದೆ. 3 ಪಟ್ಟು ಪರಿಹಾರದ ಬದಲಿಗೆ ಪರಿಹಾರವನ್ನು 2 ಪಟ್ಟಿಗೆ ಇಳಿಸಲು ಯತ್ನಿಸುತ್ತಿದೆ. ಈ ನೀತಿಯನ್ನು ರೈತರು, ಜನರು ಒಪ್ಪಬಾರದು, ತೀವ್ರ ಪ್ರತಿರೋಧ ಒಡ್ಡಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾದ ಜಂಟಿ ಕಾರ್ಯದರ್ಶಿ ವಿಜುಕೃಷ್ಣ ಅವರು ಕರೆ ನೀಡಿದರು. ದೇಶದಲ್ಲಿ ಇಂದು ರಸ್ತೆಗಳನ್ನು ಸರ್ಕಾರಿ–ಖಾಸಗಿ ಪಾಲುಗಾರಿಕೆ(ಪಿಪಿಪಿ)ಯಲ್ಲಿ ನಿರ್ಮಾಣ ಮಾಡಲಾಗುವುದು ಎಂದು ಹೇಳಲಾಗುತ್ತಿದೆ. ಉತ್ತರ ಪ್ರದೇಶದಲ್ಲಿ 'ಯಮುನಾ ಎಕ್ಸ್‌ಪ್ರೆಸ್ ವೇ' ಯೋಜನೆಯಲ್ಲಿ ರಸ್ತೆಯ ಅಕ್ಕ ಪಕ್ಕ 3 ಕಿ.ಮೀ. ವರೆಗೆ ಭೂಮಿ ಸ್ವಾಧೀನ ಮಾಡಿಕೊಳ್ಳಲಾಗಿದೆ. ಗಾಲ್ಫ್ ಕೋರ್ಟ್, ಕಾರು ಇತ್ಯಾದಿಗಳ 'ರೇಸಿಂಗ್ ಸ್ಟೇಡಿಯಂ' ಮುಂತಾದವುಗಳಿಗಾಗಿ ರೈತರ ಭೂಮಿ ನಿರ್ದಯವಾಗಿ ಕಿತ್ತುಕೊಳ್ಳಲಾಗಿದೆ ಎಂದರು. ಮೋದಿಯವರ ಗುಜರಾತ್‌ನಲ್ಲಿ ಪೋಲಿಸ್ ಸ್ಟೇಷನ್‌ಗಳು ಅದಾನಿ(ಬಂಡವಾಳಗಾರ) ಪೋಲಿಸ್ ಸ್ಟೇಷನ್ನುಗಳಾಗಿವೆ. ಸಮುದ್ರ ತೀರದ ಬಂದರು, 'ಅದಾನಿ ಬಂದರು' ಆಗಿದೆ ಎಂದು ವಿವರಿಸಿದರು.

ರೈತರ ನೋವುಗಳು

ತುಮಕೂರು ರಸ್ತೆ ಭಾಗದ 'ಮಾದಾವರ' ಗ್ರಾಮದ ರೈತ ಅರಸಪ್ಪ ಅವರು ಮಾತನಾಡಿ ತಮ್ಮ 2 ಎಕರೆ ಜಮೀನಿಗೆ ಅತ್ಯಂತ ನಿಕೃಷ್ಟ ಬೆಲೆಯನ್ನು ನೀಡಲಾಯಿತು. ನೈಸ್ ರಸ್ತೆಯ ಸುತ್ತಮುತ್ತ ಜನರಿಗೆ ಎಷ್ಟೋ ಗ್ರಾಮಗಳಲ್ಲಿ ಸ್ಮಶಾನಕ್ಕೆ ಭೂಮಿ ಇಲ್ಲ. ಆದರೆ ನೈಸ್ ಕಂಪನಿ ರೈತರ ಭೂಮಿ ಕಿತ್ತು–ಕೊಂಡು ಅಲ್ಲಿ ಲಾರಿ ಸ್ಟಾಂಡ್ ಮಾಡಿಕೊಂಡಿದೆ. ಇಂತಹ 50 ಎಕರೆ ಭೂಮಿಯಲ್ಲಿ ಒಂದೆಡೆ ಲೇಔಟ್ ಮಾಡಲಾಗಿದೆ. ಮತ್ತೊಂದು ಕಡೆ ಕಲ್ಯಾಣ ಮಂಟಪ ಕಟ್ಟಿ ಬಾಡಿಗೆಗೆ ಕೊಡಲಾಗುತ್ತಿದೆ. ಇದು ರಸ್ತೆ ಯೋಜನೆ ಅಲ್ಲ. ರಿಯಲ್ ಎಸ್ಟೇಟ್ ವ್ಯವಹಾರ ಎಂದರು.

ಸೋಮಾಪುರ ಗ್ರಾಮದ ರೈತ ಬಸಪ್ಪ ಅವರು ಈ ಸಮಾವೇಶದಲ್ಲಿ ಮಾತನಾಡಿ ನೈಸ್ ಯೋಜನೆಯಿಂದ ನಾನು ನನ್ನ ಮಗನನ್ನು ಕಳೆದುಕೊಂಡಿದ್ದೇನೆ. ಈ ಬಗೆಗೆ ಮಾತನಾಡಿದರೆ ಬಸಪ್ಪನಿಗೆ ತಲೆ ಸರಿಯಿಲ್ಲ ಎಂದು ಪ್ರಚಾರ ಮಾಡಲಾಗುತ್ತಿದೆ. ನೈಸ್ ಕಂಪನಿ ಒಂದು ಲೂಟಿ–ಕೋರ ಕಂಪನಿ. ಅದರ ಲೂಟಿ ಪ್ರಶ್ನಿಸಿದವರ ಮೇಲೆ ಗೂಂಡಾಗಿರಿ ನಡೆಸಲಾಗುತ್ತದೆ. ಇದನ್ನು ಹೇಗಾದರೂ ತಡೆಯಬೇಕು ಎಂದರು. (ಬಸಪ್ಪ ಅವರ ಕುಟುಂಬದ ಸಿದ್ದಲಿಂಗ ಪ್ರಭು ಅವರು ಅಕ್ಟೋಬರ್ 17, 2011 ರಂದು ಕೊಲೆಗೀಡಾದರು. ಈ ಸಂಬಂಧ ನೈಸ್ ಕಂಪನಿ ಏಜೆಂಟ್ ಎನ್ನಲಾದ ರುದ್ರೇಶ್ ಮತ್ತು ಇತರ ಐವರ ಮೇಲೆ ಕೊಲೆ ಸಂಬಂಧ ಪ್ರಕರಣ ದಾಖಲಾಗಿದ್ದು ತನಿಖೆ ನಡೆಯುತ್ತಿದೆ.) ಬಸಪ್ಪ ಕುಟುಂಬದವರು ತಮ್ಮ ಕುಟುಂಬದ 17 ಎಕರೆ ಭೂಮಿಯನ್ನು ರಸ್ತೆ ನಿರ್ಮಾಣದ ಉದ್ದೇಶಕ್ಕೆಂದು ನೈಸ್ ಕಂಪನಿಗೆ ಭೂಮಿ ಕೊಟ್ಟಿದ್ದಾರೆ. ಆದರೆ ರಸ್ತೆಯಿಂದ ಒಂದು ಕಿ.ಮೀ. ದೂರವಿರುವ ಮತ್ತು ರಸ್ತೆಗೆ ಯಾವ ರೀತಿಯಲ್ಲೂ ಸಂಬಂಧ ಪಡದ ಉದ್ದೇಶಕ್ಕೆ ಕುಟುಂಬದ 18 ಎಕರೆ ಜಮೀನನ್ನು ಕೊಡಲೇ ಬೇಕೆಂದು ನೈಸ್ ಕಂಪನಿ ಕಿರುಕುಳ ಕೊಡಲು ಶುರುಮಾಡಿ ಉಪಟಳ ನೀಡತೊಡಗಿದಾಗ ಬಸಪ್ಪ ಮತ್ತು ಅವರ ಸಹೋದರರ ಕುಟುಂಬ ಸದಸ್ಯರು ನೈಸ್ ಕಂಪನಿಯ ಗೂಂಡಾಗಿರಿ ವಿರುದ್ದ ಸೆಟೆದು ನಿಂತಿದ್ದಾರೆ. ನೈಸ್ ಕಂಪನಿಯ ಗೂಂಡಾಗಿರಿಗೆ ತಲೆ ಬಾಗದೇ ಹಲವಾರು ವರ್ಷಗಳಿಂದ ಭೂಮಿ ಒಪ್ಪಿಸದೇ ಹೋರಾಟ ನಡೆಸುತ್ತಿದ್ದಾರೆ.

ಇದೇ ಭಾಗದ ಗೋಣಿಪುರ ಗ್ರಾಮದ ರೈತ ಪುಟ್ಟರಾಜು ಅವರು ಮಾತನಾಡಿ ಬೆಂಗಳೂರು ನಗರದಿಂದ 18 ಕಿ.ಮೀ. ವ್ಯಾಪ್ತಿಯೊಳಗೆ ಬರುವ ಗೋಣಿಪುರ ಗ್ರಾಮದಲ್ಲಿ ಎಕರೆ ಭೂಮಿಗೆ 1.5 ಕೋಟಿ ಬೆಲೆ ಇರುವ ಕಡೆ ಹಿಂದೆ ಎಂದೋ ನಿಗದಿ ಮಾಡಿದ ಬೆಲೆಯಾದ ಎಕರೆಗೆ 88,401 ರೂ. ಪರಿಹಾರ ನೀಡಿ ಕೈತೊಳೆದುಕೊಳ್ಳುವ ಲೆಕ್ಕದಲ್ಲೇ ಖೇಣಿ ಇದ್ದಾನೆ. ರೈತರು ಅದ–ಕ್ಕೆ ಸಿದ್ದವಿಲ್ಲ. ಇದಕ್ಕೆ ಅವಕಾಶ ನೀಡಬಾರದು ಎಂದರು. ತಮ್ಮ ಭೂಮಿಗೆ ನ್ಯಾಯವಾದ ಬೆಲೆ ನೀಡಲು ತಯಾರಿಲ್ಲದ ನೈಸ್ ಕಂಪನಿಯ ರೌಡಿಗಳು ರಾತ್ರೋ ರಾತ್ರಿ 50 ಮಾವಿನ ಮರ ಕಡಿದು ಹಾಕಿದ್ದಾರೆ ಎಂದು ರೈತ ರಹೀಂ ಅವರು ತಮ್ಮ ತೊಂದರೆಯನ್ನು ಸಮಾವೇಶದಲ್ಲಿ ತೋಡಿ–ಕೊಂಡರು. ರೈತ ಮುಖಂಡರಾದ ಕೊಡಿಗೆಹಳ್ಳಿಯ ಮೋಹನ್ ರಾಜ್ ಅವರು ಮಾತನಾಡಿ ಹಿಂದೆ ರೈತರ ಪಂಪ್ ಸೆಟ್‌ಗಳಿಗೆ ಮೀಟರ್ ಅಳವಡಿಸುವ ನೀತಿ ವಿರುದ್ದ ಯಶಸ್ವಿ ಹೋರಾಟ ನಡೆಸಲಾಗಿದೆ. ಅದೇ ರೀತಿ ಕೆಂಪೇಗೌಡ ಬಡಾವಣೆ ಭೂಸ್ವಾಧೀನದ ವಿಷಯದಲ್ಲಿ ದೇಶದಲ್ಲೇ ದಾಖಲೆಯಾದ ಪರಿಹಾರವನ್ನು ಪಡೆದುಕೊಳ್ಳುವುದು ಸಾಧ್ಯವಾಗಿದೆ. ಹೋರಾಟದಲ್ಲಿ ಬಲವಿದೆ. ಒಗ್ಗಟ್ಟಿನಲ್ಲಿ ಮುನ್ನಡೆಯೋಣ ಎಂದರು.

ಪ್ರಾಂತ ರೈತ ಸಂಘದ ಮಂಡ್ಯ ಜಿಲ್ಲಾ ಮುಖಂಡರಾದ ಯಶವಂತ್ ಮಾತನಾಡಿ ಮದ್ದೂರು, ಮಂಡ್ಯ ಮತ್ತು ಶ್ರೀರಂಗ ಪಟ್ಟಣ ತಾಲ್ಲೂಕಿಗಳಲ್ಲಿ ಒಟ್ಟು 5,195 ಎಕರೆ ಭೂಮಿಯಲ್ಲಿ ನೈಸ್ ಕಂಪನಿ ಸರ್ವೆ ಕಲ್ಲು ನೆಟ್ಟಿತ್ತು. ರೈತರ ಭೂಮಿಗೆ ಬೆಲೆ ಇತ್ಯಾದಿ ವಿಷಯಗಳು ಇತ್ಯರ್ಥವಾಗಿಲ್ಲ. ರೈತರು ಆ ಕಲ್ಲುಗಳನ್ನು ಕಿತ್ತು ಹಾಕಿ ತೀವ್ರವಾದ ಪ್ರತಿಭಟನೆ ತೋರಿದ್ದಾರೆ ಎಂದು ಸಮಾವೇಶಕ್ಕೆ ಮಾಹಿತಿ ನೀಡಿದರು. ಮಂಡ್ಯ ಜಿಲ್ಲೆಯಲ್ಲಿ ರೈಲ್ವೆ ಯೋಜನೆಗೆ ರೈತರ ಭೂಮಿ ವಶಕ್ಕೆ ಪಡೆದಾಗ ಎಕರೆಗೆ 80 ಲಕ್ಷ ಪರಿಹಾರ ನೀಡಲಾಗಿದೆ. ಆದ–ರೆ ನೈಸ್ ಕಂಪನಿಯ ಖೇಣಿ ಎಷ್ಟೇ ಚೌಕಾಸಿ ಮಾಡಿದರೂ ರೈತರ ಭೂಮಿಗೆ ನ್ಯಾಯಯುತ ಬೆಲೆ ಕೊಡಲು ಸಿದ್ದನಿಲ್ಲ. ಬಹಳ ತಿಕ್ಕಾಟದ ನಂತರ ಆತ ಈಗ ಎಕರೆಗೆ 20 ಲಕ್ಷದ ಮಟ್ಟಕ್ಕೆ ಬಂದಿದ್ದಾನೆ. ಈ ಹಿಂದೆಯೇ ರೈಲ್ವೆ ಇಲಾಖೆಯಿಂದ ಎಕರೆಗೆ 80 ಲಕ್ಷ ರೂ. ಪರಿಹಾರ ಪಡೆದ ರೈತರು ಈಗ 20 ಲಕ್ಷ ಪರಿಹಾರ ಪಡೆಯುವುದೆಂದರೆ ಅದರ ಅರ್ಥವೇನು ಎಂದು ಪ್ರಶ್ನಿಸಿದ ಯಶವಂತ್ ನೈಸ್ ಕಂಪನಿಯ ಅನ್ಯಾಯಗಳ ವಿರುದ್ಧ ರೈತರು ಹೋರಾಟ ಮುಂದುವರಿಸಲಿದ್ದಾರೆ ಎಂದರು. ಪಿ. ರಾಮಚಂದ್ರ ರಾವ್ ನಗರದ ನಿವಾಸಿಗಳ ಪರವಾಗಿ ಮಹೇಂದ್ರ ಅವರು ಮಾತನಾಡಿ ತನಗೆ ಸಂಬಂಧ ಪಡದ ಸು. ಒಂದು ಸಾವಿರ ಎಕರೆ ಸರ್ಕಾರಿ ಭೂಮಿ ಭೂಮಿಯನ್ನು ಕಬಳಿಸುವ ನೈಸ್ ಕಂಪನಿ ವಿರುದ್ದ ಬಡವರ ಗುಡಿಸಲುಗಳಿಗೆ ಅವಕಾಶ ನೀಡಿ ತಾವು ನಡೆಸುತ್ತಿರುವ ಹೋರಾಟದ ಕುರಿತು ವಿವರಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಯು. ಬಸವ ರಾಜು ಅವರು ಈ ಸಮಾವೇಶದಲ್ಲಿ ಮಾತನಾಡಿದರು. ದೇಶದಲ್ಲಿ ಅಭಿವೃದ್ದಿ ಹೆಸರಿನಲ್ಲಿ ದೊಡ್ಡ ಬಂಡವಾಳಗಾರರ ಲೂಟಿಗೆ ಅವಕಾಶ ನೀಡಲಾಗುತ್ತಿದೆ. ಬಳ್ಳಾರಿಯಲ್ಲಿ ಮಿತ್ತಲ್ ಕಂಪನಿಗೆ 1,500 ಎಕರೆ ಅಗತ್ಯವಾದ ಕಡೆ 5,000 ಎಕರೆ ಭೂಮಿ ನೀಡಲಾಗಿದೆ. ಸಾಮಾನ್ಯ ಖಾತೆದಾರರ 3 ಲಕ್ಷ ಕೋಟಿ ರೂ.ಗಳಷ್ಟು ದೊಡ್ಡ ಮೊತ್ತವನ್ನು ಬಂಡವಾಳಗಾರರಿಗೆ ನೀಡಲಾಗಿದೆ. ಇಂತಹ ಶ್ರೀಮಂತರಿಗೆ ಸರ್ಕಾರಗಳು 5 ವರ್ಷಕ್ಕೆ ಬಡ್ಡಿಗೆ ವಿನಾಯತಿ ನೀಡಿವೆ. ಇಂತಹ ಬಂಡವಾಳಿಗರ ಪರವಾದ ನೀತಿಗಳನ್ನು ವಿರೋಧಿಸಬೇಕು ಎಂದು ಬಸವರಾಜು ಅವರು ವಿವರಿಸಿದರು. ವೇದಿಕೆಯಲ್ಲಿ ರೈತ ಮುಖಂಡರಾದ ಬೆಂಗಳೂರಿನ ಶ್ರೀನಿವಾಸ್, ಕೃಷ್ಣಪ್ಪ, ಪ್ರಾಂತ ರೈತ ಸಂಘದ ರಾಮನಗರ ಪ್ರಧಾನ ಕಾರ್ಯದರ್ಶಿ ನಾಗೇಶ್, ರೈತ ಮುಖಂಡ ಬಸಪ್ಪ ಮುಂತಾದವರು ಇದ್ದರು. ●

ಜನಶಕ್ತಿ
ಕನ್ನಡ ವಾರಪತ್ರಿಕೆ

ಏನಿದು ರಾಮಚಂದ್ರಾಪುರ ಮಠದ ಗೋಸ್ವಾಮಿಯ 'ರಾಮಕಥಾ' ಹಗರಣ?

ಲೈಂಗಿಕ ದೌರ್ಜನ್ಯದ ಹಿಂದಿನ ಅಸಲಿ ಕತೆ.. ..

ರಾಜ್ಯದ ಒಂದು ಪ್ರಭಾವಿ ಮಠವಾದ ರಾಮಚಂದ್ರಪುರ ಮಠ ಮತ್ತು ಮಠದ ಸ್ವಾಮಿಗಳ ಮೇಲೆ ಈಗ ಎಲ್ಲರ ಕಣ್ಣು ನೆಟ್ಟಿದೆ. ಅವರ ಮೇಲೆ ಲೈಂಗಿಕ ದೌರ್ಜನ್ಯದ ಗಂಭೀರ ಆರೋಪ ಬಂದಿದೆ. ಆದರೆ ದೂರು ಹೇಳಹೊರಟವರ ಮೇಲೆ ದೂರು ದಾಖಲಾಗಿ ಅವರ ಬಂಧನವಾದಂತೆ ಕಾಣುತ್ತಿದೆ. ಒಂದು ದುರಂತಮಯ ಸಾವು ಸಂಭವಿಸಿರುವುದು ಈ ಒಟ್ಟು ಪ್ರಕರಣದ ಗಂಭೀರತೆಯನ್ನು ಸಾರುತ್ತಿದೆ.

ಸಾಥಿ, ಉತ್ತರ ಕನ್ನಡ

ಶ್ರೀ ಶ್ರೀ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀಮದ್ ರಾಘವೇಶ್ವರ ಭಾರತೀ ಸ್ವಾಮೀ ನಾಮಧೇಯದಿಂದ ರಾಮಚಂದ್ರಾಪುರ ಮಠದ ಪೀಠಾಧಿಪರಾಗಿ ಏರಿದ ರಾಘವೇಶ್ವರ ಸ್ವಾಮಿಯ ಮೂಲ ಹೆಸರು ಹರೀಶ ಶರ್ಮ, ಚದುರವಳ್ಳಿ, ಸಾಗರ ತಾಲೂಕು. 1999 ಏಪ್ರಿಲ್ 28ರಂದು ಹಿಂದಿನ ಸ್ವಾಮಿಯು ತೀರಿಕೊಂಡಾಗ ಪೀಠಕ್ಕೆ ಬಂದರು. ಅದಕ್ಕೂ ಮೊದಲು 1994ರಲ್ಲೇ ಸನ್ಯಾಸ ದೀಕ್ಷೆ ಪಡೆದವರೆಂದು ದಾಖಲೆ ಹೇಳುತ್ತದೆ.



ಇವರು ಸ್ವಾಮಿತ್ವದ ಪಾವಿತ್ರ್ಯಕ್ಕಿಂತ ಅಖಿಲ ಸರ್ವೈಶ್ವರ್ಯವನ್ನೂ, ವಿವಿಧ ಸಮುದಾಯಗಳ ನೂರಾರು ದೇವಸ್ಥಾನಗಳನ್ನೂ, ಇನ್ನಿತರೇ ಧಾರ್ಮಿಕ ಕೇಂದ್ರಗಳನ್ನೂ ತನ್ನ ಮಠದ ಅಧೀನದಲ್ಲಿ ತಂದು ತನ್ನ ಸೀಮೆಯನ್ನು ವಿಸ್ತರಿಸುವ ಪ್ರಚಾರ ತಂತ್ರದಲ್ಲಿ ಅಗ್ರಗಣ್ಯರು. ಗೋಕರ್ಣ ಮಹಾಬಲೇಶ್ವರ ದೇವಸ್ಥಾನವನ್ನು ವಶಕ್ಕೆ ಪಡೆದ ನಮೂನೆಯಲ್ಲಿಯೇ ಇದು ಅಡಕವಾಗಿದೆ. ವಿವಿಧ ಸಂದರ್ಭಗಳಲ್ಲಿ ಅವರು ಸರ್ಕಾರದ ವಿವಿಧ ಇಲಾಖೆಗಳ ಮೇಲೆ ಧಾರ್ಮಿಕ ಪ್ರಭಾವ ಬೀರಿ ಏನೆಲ್ಲ ಆಗಿದೆ ಎಂದು ಕಳೆದ ಹಲವು ವರ್ಷಗಳ ಮಠದ ಇತಿಹಾಸ ಸರಿಯಾಗಿ ತಿಳಿದುಕೊಂಡರೆ ಅರ್ಥವಾದೀತು. ಅದರಲ್ಲೂ ಕರ್ನಾಟಕದಲ್ಲಿ ಸಂಘಪರಿವಾರದ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಮಠದ ಧಾರ್ಮಿಕ ಚರ್ಯೆ, ಹಮ್ಮಿಕೊಂಡ ವಿವಿಧ ಕಾರ್ಯಕ್ರಮಗಳು ಹಾಗೂ ಆರ್ಥಿಕ ವಹಿವಾಟು ತನಿಖೆ ಮಾಡಿದರೂ ಕೂಡ ಸತ್ಯಾಂಶ ತಿಳಿಯುತ್ತದೆ. ಈಗಂತೂ ಕೇಂದ್ರ ಸರ್ಕಾರವೇ ತಮ್ಮದು ಎಂಬ ಸಹಜ ಹಮ್ಮು ಅವರದ್ದು.

ಸರ್ಕಾರ ನಡೆಸುವವರೂ ಇವರ ಆಶೀರ್ವಾದ ಹಾಗೂ ಆದೇಶಕ್ಕೆ ತಲೆ ಬಾಗುತ್ತಾರೆ. ಅದರ ಕುರುಹಾಗಿ ಸರಕಾರದ ಖಜಾನೆಯಿಂದಲೇ ಬಜೆಟ್ ಮೂಲಕವೇ ಕೋಟ್ಯಾಂತರ ರೂಪಾಯಿ ನೀಡಿ ತಮ್ಮ ದಾನ–ದಕ್ಷಿಣೆಯನ್ನು –ಬಡವರ ಹಣದ ತೆರಿಗೆ ಆದಾಯದಿಂದಲೇ – ಉದಾರವಾಗಿ ನೀಡುತ್ತಾರೆ. ಇದನ್ನು ಯಡಿಯೂರಪ್ಪಾದಿಗಳು ರಾಜಕೀಯ ಪೀಠಾಸೀನರಾಗಿದ್ದಾಗ ನೋಡಿದ್ದೇವೆ. ಅವರೆಲ್ಲ ಗೋಕರ್ಣಕ್ಕೆ ಬಂದು ತಮ್ಮ ಪರಿವಾರವನ್ನು ವಿಸ್ತರಿಸಿಕೊಂಡಾಗ ಆಶೀರ್ವದಿಸಿದ್ದನ್ನೂ ಕಂಡಿದ್ದೇವೆ.

ಇದೀಗ ಇಂಥ ಚಟುವಟಿಕೆಗಳಿಗೆ 'ಕಲಶವಿಟ್ಟಂತೆ' ಲೈಂಗಿಕ ದೌಜನ್ಯ ಹಾಗೂ ಕೋಟ್ಯಂತರ ರೂಪಾಯಿ ವ್ಯಯಿಸಿ ಕೆಲವು ವರ್ಷಗಳಿಂದ ದೇಶಾದ್ಯಂತ ನಡೆಸುತ್ತಿರುವ ರಾಮಕಥಾ ಹಗರಣ ಬೆಳಕಿಗೆ ಬಂದಿದೆ. ಈಗಾಗಲೇ ತಮ್ಮದೇ ಸಮುದಾಯದ ಜನರ ನಡುವೆ ಖಾಸಗಿ ಪಿಸುಮಾತುಗಳಲ್ಲಿ ಚರ್ಚಿತವಾಗುತ್ತಿರುವ ಸ್ವಾಮಿಜಿಯ ಹಲವು ಲೈಂಗಿಕ ಹಗರಣಗಳ ಸಾಲಿಗೆ ಮತ್ತೊಂದು ಕತೆ ಸೇರಿದಂತಾಗಿದೆ. ಈ ಪ್ರಕರಣವು ಮಾಧ್ಯಮಗಳನ್ನು ತಲುಪುವ ಸಾಧ್ಯತೆ ಕಂಡು ಬಂದ ಹಿನ್ನೆಲೆಯಲ್ಲಿ ಅದನ್ನು ಬಯಲು ಮಾಡದಂತೆ ಪ್ರಚಾರವಾಗದಂತೆ ತಡೆಯುವ ಪ್ರಬಲ ಪಡೆಯೇ ಇವರ ಬೆನ್ನಿಗಿದೆ ಎಂಬುದೂ ತಿಳಿದುಬರುತ್ತಿದೆ. ತನ್ನ ಮಠದ ಧಾರ್ಮಿಕ ಒತ್ತಡದ ಮೂಲಕ ಸಂವಿಧಾನ ಬದ್ಧ ರಾಜ್ಯಾಡಳಿತದ ಮೇಲೂ ಕೂಡ ಪ್ರಭಾವ ಬೀರುವ ಶಕ್ತಿ ಇವರಿಗಿದೆ ಎಂದಾದರೆ ಇವರ ವಿರುದ್ಧ ದೂರು ನೀಡುವವರ ಗತಿ ಏನಾಗಬೇಡಾ? ಅದೆಷ್ಟು ದುರ್ಬಲವಾಗಬಹುದು? ನೀವೇ ಊಹಿಸಿ. ಈಗ ಆಗಿದ್ದೂ ಕೂಡ ಅದೇ!

ಅಷ್ಟಕ್ಕೂ ಈ ಲೈಂಗಿಕ ಕಿರುಕುಳದ ಪ್ರಕರಣವೇನು ?

ಈ ಪ್ರಕರಣಕ್ಕೆ ಹಲವು ಮುಖಗಳಿವೆ. ಭಿನ್ನ ದೃಷ್ಟಿಕೋನದ ಅಗತ್ಯವೂ ಇದೆ. ಯಾಕೆಂದರೆ ಇದರಲ್ಲಿ ಕೇವಲ ಒಂದು ಪ್ರಕರಣವಿಲ್ಲ. ಆರ್ಥಿಕ ಮತ್ತು ಲೈಂಗಿಕ ಹಗರಣಗಳು ಮೇಳೈಸಿವೆ. ಇವೆರಡನ್ನೂ ಬೇರೆ ಮಾಡಿ ನೋಡಲಾಗದು.

ಮಠದ ವತಿಯಿಂದ ಕಳೆದ ಕೆಲವು ವರ್ಷಗಳಿಂದ 'ರಾಮಕಥಾ' ಎಂಬ ಕಾರ್ಯಕ್ರಮ ನಡೆಯುತ್ತಿದೆ. ಅದಕ್ಕಾಗಿ ಗಣ್ಯಾತಿಗಣ್ಯರು, ಕಂಪನಿಗಳು, ಭಕ್ತರು ಹಣದ ಹೊಳೆ ಹರಿಸುತ್ತಿದ್ದಾರೆ. ದೇಶದ ಹಲವಾರು ಕಡೆಗಳಲ್ಲಿ ಈ ಕಾರ್ಯಕ್ರಮ ಆಗುವಂತೆ ಮೇಲುಸ್ತುವಾರಿ ನೋಡಿಕೊಳ್ಳುತ್ತಾರೆ. ಇದರಲ್ಲಿ ಅವರ ಪರಮಾಪ್ತ ಶಿಷ್ಯರು, ಸಹಚರರಿರುವ ಕಲಾವಿದರ ದೊಡ್ಡಪಡೆಯೇ ಇದೆ. ಇವರಲ್ಲಿ ಕಳೆದ 10 ವರ್ಷಗಳಿಂದಲೂ ಮಠದ ಆಡಳಿತಾತ್ಮಕ ಅಧಿಕಾರಿಯಾಗಿ ಇತ್ತೀಚೆಗೆ ತನ್ನ ಸ್ವಂತ ವ್ಯವಹಾರದ ಉನ್ನತಿಗೆ ಮಠದ ಜವಾಬ್ದಾರಿಯಿಂದ ಬಿಡುಗಡೆಗೊಂಡ ದಿವಾಕರ ಶಾಸ್ತ್ರಿಯೂ ಓರ್ವರು. ಇವರ ಉಸ್ತುವಾರಿಯ ಅವಧಿಯಲ್ಲಿಯೇ ಅವರ ಹೆಂಡತಿ ಕಲಾವಿದೆ ಪ್ರೇಮಲತಾ ರಾಮಕಥಾ ಹಿನ್ನೆಲೆ ಕಲಾವಿದರಲ್ಲಿ ಮುಖ್ಯಸ್ಥಾನದ ಹೊಣೆ ನಿಭಾಯಿಸುತ್ತಿದ್ದರು.

ಸ್ವಾಮಿ ಚಾತುರ್ಮಾಸ ನಿಮಿತ್ತ ಹೊನ್ನಾವರ ತಾಲೂಕಿನ ಕೆಕ್ಕಾರಿನಲ್ಲಿ ಜುಲೈ 12ರಿಂದ ಬೀಡುಬಿಟ್ಟಿದ್ದಾರೆ. ಈ ಸಂದರ್ಭದಲ್ಲಿ ನಡೆಯುವ ರಾಮಕಥಾ ಕಾರ್ಯಕ್ರಮಕ್ಕೆ ಪ್ರೇಮಲತಾ ತನಗೆ ಬರಲಾಗದೆಂದಿದ್ದಕ್ಕೆ ದೀಪಿಕಾ ಹಾಗೂ ಸುಳ್ಯದ ಶಂಕರಿಮೂರ್ತಿ ಬಾಳಿಲರನ್ನು ನೇಮಕ ಮಾಡಿದ್ದರಂತೆ. ಇದರಿಂದ ಬೇಸರಗೊಂಡ ಪ್ರೇಮಲತಾ ರಾಮಕಥಾ ಗೀತರಚನೆಕಾರ ಗಜಾನನ ಶರ್ಮರಿಗೆ ಫೋನಾಯಿಸಿ ಬೆದರಿಸಿದ್ದರಂತೆ. ಹಾಗಾಗಿ ಅವರು ಬೆಂಗಳೂರಿನ ಚೆನ್ನಮ್ಮನ ಕೆರೆ ಪೋಲಿಸ್ ಠಾಣೆಯಲ್ಲಿ 17–7–2014ರಂದು ದೂರು ದಾಖಲಿಸಿದರು. ತದನಂತರ ಮಠದ ಸುರಕ್ಷಾ ವಿಭಾಗದ ಆರ್. ಚಂದ್ರಶೇಖರ ಹಳದಿಪುರ ಎಂಬುವವರು ಸ್ವಾಮಿಗಳೊಂದಿಗೆ ಚರ್ಚಿಸಿ ದೂರು ನೀಡಿದ್ದರು. ಹೊಸದಾಗಿ ನೇಮಕಗೊಂಡ ಕಲಾವಿದೆ ದೀಪಿಕಾ ಕೂಡ ತನಗೆ ಅಪರಿಚಿತರಿಂದ ಕರೆ ಬಂದಿರುವುದಾಗಿ 23–7–2014ರಂದು ಹೊನ್ನಾವರದಲ್ಲಿಯೂ ಇನ್ನೋರ್ವ ಕಲಾವಿದೆ ಸುಳ್ಯದ ಶಂಕರಿಮೂರ್ತಿಯ ಗಂಡ ಸತ್ಯಮೂರ್ತಿ ಸುಳ್ಯ ಠಾಣೆಯಲ್ಲಿಯೂ ದೂರು ದಾಖಲಿಸಿದರು. ಕಲಾವಿದೆಯ ಸವಾರಿ ವ್ಯವಸ್ಥಾಪಕ ರಾಘವೇಂದ್ರ ವೆಂಕಟ್ರಮಣ ಮಧ್ಯಸ್ಥರಿಗೆ ಕರೆಮಾಡಿ ಶ್ರೀಗಳು ಪೀಠ ತ್ಯಾಗ ಮಾಡಬೇಕೆಂದು ಇಲ್ಲದಿದ್ದರೆ ಮಾಧ್ಯಮದ ಮುಂದೆ ಹೋಗುವುದಾಗಿ ಬೆದರಿಸಿದ್ದರಂತೆ. ಈ ಎಲ್ಲ ದೂರುಗಳಲ್ಲೂ ಕಲಾವಿದೆ ಪ್ರೇಮಲತಾ ಹಾಗೂ ಪತಿ ದಿವಾಕರ ಶಾಸ್ತ್ರಿಯನ್ನು ಕೇಂದ್ರೀಕರಿಸಿಯೇ ಒಳಸಂಚು ಹಾಗೂ ಷಡ್ಯಂತ್ರದ ದೂರುಗಳನ್ನು ಹೆಣೆಯಲಾಗಿದೆ ಎಂದು ಕಾಣುತ್ತದೆ. ಮುಖ್ಯವಾಗಿ ಸ್ವಾಮಿ ತನಗೆ 3 ಕೋಟಿ ರೂಪಾಯಿ ನೀಡಬೇಕೆಂದು, ಮಠದ ಆಡಳಿತ ಮಂಡಳಿಯಲ್ಲಿ ಪ್ರಮುಖ ಸ್ಥಾನ ನೀಡಬೇಕೆಂದು, ರಾಮಕಥಾ ಕಾರ್ಯಕ್ರಮದಲ್ಲಿ ಪ್ರಮುಖ ಗಾಯಕಿ ಸ್ಥಾನ ನೀಡಬೇಕೆಂದು ಬೆದರಿಸಿದ್ದರೆಂದೂ ಇದು ಈಡೇರದಿದ್ದರೆ 'ಲೈಂಗಿಕ ಕಿರುಕುಳದ ಕೇಸ್ ದಾಖಲಿಸಿ ದೃಶ್ಯ ಮಾಧ್ಯಮದ ಮೂಲಕ ಬಿತ್ತರಿಸುವುದಾಗಿ ಬೆದರಿಕೆ ಒಡ್ಡಿದ್ದರು.' ಎಂದು ಮಠ ಹೇಳಿಕೊಳ್ಳುತ್ತಿದೆ.

ಈ ಹಿನ್ನೆಲೆಯಲ್ಲಿ ಅಗಸ್ಟ್ 27ರಂದು ದಿವಾಕರ ಶಾಸ್ತ್ರಿ ಮತ್ತು ಪ್ರೇಮಲತಾ ದಂಪತಿಗಳನ್ನು ಬಂಧಿಸಿ ಹೊನ್ನಾವರ ಪೋಲಿಸ್ ಠಾಣೆಗೆ ಹಾಜರು ಪಡಿಸಲಾಗಿತ್ತು. ನ್ಯಾಯಾಧೀಶರು ಒಂದು ದಿನದ ಮಟ್ಟಿಗೆ ಈರ್ವರನ್ನೂ ಕ್ರಮವಾಗಿ ಪೋಲಿಸ್ ಕಸ್ಟಡಿಗೂ, ನ್ಯಾಯಾಂಗ ಬಂಧನಕ್ಕೂ ವಹಿಸಿದ್ದರು. ಇದೇ ಸಂದರ್ಭದಲ್ಲಿ ಪ್ರೇಮಲತಾ ತನ್ನ ಮೇಲಿನ ಲೈಂಗಿಕ ದೌರ್ಜನ್ಯದ ತನಿಖೆ ಮಾಡಬೇಕೆಂದು 30 ಪುಟಗಳ ದೂರನ್ನು ಪರಿಶೀಲಿಸಲು ಕೇಳಿಕೊಂಡರು ಎನ್ನುವುದು ಮಹತ್ವದ್ದು. ಈ ದೂರನ್ನು ನ್ಯಾಯಾಲಯ ಸೇಫ್ ಕಸ್ಟಡಿಯಲ್ಲಿರಿಸಿತ್ತೇ ವಿನಃ ಯಾವುದೇ ತನಿಖೆಗೆ ಇನ್ನೂ ಆದೇಶಿಸಿರಲಿಲ್ಲ. ನಂತರದ ಬೆಳವಣಿಗೆಯಲ್ಲಿ ಈ ದೂರನ್ನೂ ವಿಚಾರಣೆಗೆ ಕೈಗೆತ್ತಿಕೊಳ್ಳಬಹುದು ಎಂದು ನ್ಯಾಯಾಲಯ ಅನುಮತಿ ನೀಡಿದೆ. ಆದರೆ ಮಠದ ವಿರುದ್ಧ ಅವಹೇಳನಕಾರಿ ಹೇಳಿಕೆಗಳನ್ನು ಮಾಧ್ಯಮಗಳಿಗೆ ನೀಡಬಾರದೆಂದು ಮಠದ ವಕೀಲರಾದ ಜಿ.ಜಿ.ಭಟ್ಟರ ಮೂಲಕ ಬಂದ ಅರ್ಜಿ ಮಾನ್ಯ ಮಾಡಿ ಮಧ್ಯಂತರ ಆದೇಶ ನೀಡಿದೆ. 30ಕ್ಕೆ ಜಾಮೀನು ಅರ್ಜಿಗೆ ಅವಕಾಶ

ಪುಟ 14 ಕ್ಕೆ

ಸಿಓಡಿ ಅಥವಾ ಸಿಬಿಐ ತನಿಖೆಯಾಗಲಿ – ಸಿಪಿಐ(ಎಂ)

ಇತ್ತೀಚಿನ ಕೆಲದಿನಗಳಲ್ಲಿ ಬೆಳಕಿಗೆ ಬಂದ ಶ್ರೀ ರಾಮಚಂದ್ರಾಪುರ ಮಠವನ್ನು ಸುತ್ತಿಕೊಂಡಿರುವ ಹಲವು ಪ್ರಕರಣಗಳು ರಾಜ್ಯದ ಜನತೆಯನ್ನು ಆತಂಕಕ್ಕೀಡು ಮಾಡಿವೆ ಎಂದಿರುವ ಸಿಪಿಐ(ಎಂ) ರಾಜ್ಯ ಸಮಿತಿಯು ದಂಪತಿಗಳ ಬ್ಲಾಕ್ ಮೇಲ್ ಅರೋಪ, ಆತ್ಮಹತ್ಯೆ ಪ್ರಕರಣ, ಲೈಂಗಿಕ ದೌರ್ಜನ್ಯದ ಆರೋಪ ಈ ಎಲ್ಲಾ ಪ್ರಕರಣಗಳು ಒಂದೇ ವಿಚಾರಕ್ಕೆ ಸಂಬಂಧಿಸಿದ್ದು ಯಾವುದೇ ರೀತಿಯ ಪ್ರಭಾವಕ್ಕೊಳಗಾಗದೆ, ನಿಸ್ಪಕ್ಷಪಾತ ತನಿಖೆಗೊಳಪಡಿಸಿ ಜನರ ಆತಂಕ ನಿವಾರಿಸಲು ರಾಜ್ಯ ಸರ್ಕಾರ ಮುಂದಾಗ ಬೇಕು ಎಂದು ಆಗ್ರಹಿಸಿದೆ. ಆದ್ದರಿಂದ ಒಟ್ಟು ಪ್ರಕರಣವನ್ನು ಸಿಓಡಿ ಅಥವಾ ಸಿಬಿಐ ತನಿಖೆಗೆ ಒಳಪಡಿಸಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಸಿಪಿಐ(ಎಂ) ರಾಜ್ಯಸಮಿತಿ ಒತ್ತಾಯಿಸಿದೆ.

ಯೋಜನಾ ಆಯೋಗದ 'ವಿಸರ್ಜನೆ'

– ಪ್ರೊ. ಪ್ರಭಾತ್ ಪಟ್ನಾಯಕ್

(ಸಂಗ್ರಹಾನುವಾದ: ಕೆ.ಎಂ. ನಾಗರಾಜ)

ಅಭಿವೃದ್ಧಿಯ ಫಲ ಎಲ್ಲರಿಗೂ ದಕ್ಕದಿದ್ದರೂ, ದುಡಿಯುವವರು ಮತ್ತು ದುಡಿಸಿಕೊಳ್ಳುವ ಜನರ ನಡುವಿನ ಆರ್ಥಿಕ ಅಸಮಾನತೆಯು ವಿಷಮ ಪರಿಸ್ಥಿತಿಯನ್ನು ಮುಟ್ಟಿದ್ದರೂ ಸಹ ಭಾರತದ ಇಲ್ಲಿಯವರೆಗಿನ 'ಆರ್ಥಿಕ ಬೆಳವಣಿಗೆ'ಯ ಹಿಂದೆ ಯೋಜನಾ ಆಯೋಗದ ಒಂದು ಮಹತ್ವದ ಪಾತ್ರವಿದೆ. ಆದರೆ ಮೋದಿ ಸರ್ಕಾರವು ಯೋಜನಾ ಆಯೋಗವನ್ನೇ ರದ್ದು ಮಾಡುವ ಕ್ರಮಕ್ಕೆ ಮುಂದಾಗಿದೆ. ಈ ಹಿನ್ನೆಲೆಯಲ್ಲಿ ಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ಅವರ ಒಂದು ವಿಶ್ಲೇಷಣಾತ್ಮಕ ಲೇಖನ.



ನರೇಂದ್ರ ಮೋದಿಯವರು ಈ ಯೋಜನಾ ಆಯೋಗವನ್ನು ರದ್ದುಮಾಡುವುದಾಗಿ ಹೇಳಿರುವುದೇ ಅಲ್ಲದೆ ಅದರ ಜಾಗದಲ್ಲಿ ಎಂತಹ ಏರ್ಪಾಡು ತರಬೇಕೆಂದೂ ಹೇಳಿದ್ದಾರೆ. ಜೊತೆಗೆ 'ಆಮ್ ಆದ್ಮಿ ಪಕ್ಷ'ದ ಶೈಲಿಯಲ್ಲಿ, ಜನರೊಂದಿಗೆ ಸಮಾಲೋಚನೆ ಮಾಡುವುದಾಗಿಯೂ ಹೇಳಿದ್ದಾರೆ. ತೋರಿಕೆಯ ಈ ಸಮಾಲೋಚನೆ ಅವರ ಬೌದ್ಧಿಕ ದಿವಾಳಿತನ ಅಥವಾ ಅವರ ದಗಾಬಾಜಿತನದ ಸೂಚನೆಯಾಗಿದೆ. ಏಕೆಂದರೆ ಅವರಿಗೆ ಬದಲಿ ವ್ಯವಸ್ಥೆ ಏನಿರಬೇಕೆಂದು ನಿಜಕ್ಕೂ ಗೊತ್ತಿಲ್ಲದಿದ್ದರೆ ಅದು ಅವರ ಬೌದ್ಧಿಕ ದಿವಾಳಿತನದ ಲಕ್ಷಣವಾಗುತ್ತದೆ. ಬದಲಿ ವ್ಯವಸ್ಥೆ ಏನಿರಬೇಕೆಂದು ಅವರಿಗೆ ಗೊತ್ತಿದ್ದರೂ ಸಹ ಜನರೊಂದಿಗೆ ಸಮಾಲೋಚನೆ ಮಾಡುವುದಾಗಿ ಒಗಟಿನ ರೂಪದಲ್ಲಿ ಹೇಳಿರುವುದು ಅವರ ದಗಾಬಾಜಿತನದ ಲಕ್ಷಣವಾಗಿದೆ. (ಅವರು ಈ ವಿಷಯದಲ್ಲಿ ಪ್ರಾಮಾಣಿಕವಾಗಿದ್ದಿದ್ದರೆ ಯೋಜನೆ ಆಯೋಗವನ್ನು ರದ್ದು ಮಾಡುವ ಮುಂಚೆಯೇ ಈ ಬಗೆಗೆ ಜನಾಭಿಪ್ರಾಯ ಪಡೆಯಬಹುದಿತ್ತು.) ಸಮಾಲೋಚನೆಯ ಈ ನಾಟಕವನ್ನು ಹೇಗೆ ಬೇಕಾದರೂ ನೋಡಬಹುದು. ಇಲ್ಲಿ ಮುಖ್ಯವಾದ ಪ್ರಶ್ನೆ ಎಂದರೆ, ಯೋಜನಾ ಆಯೋಗವನ್ನು ಮುಗಿಸುವುದು ಏನನ್ನು ಸೂಚಿಸುತ್ತದೆ ಎಂಬುದು.?

ಸೋವಿಯತ್ ಒಕ್ಕೂಟದಲ್ಲಿದ್ದಂತೆ ಉತ್ಪಾದನಾ ಸಾಧನಗಳು ಪ್ರಭುತ್ವದ ಒಡೆತನದಲ್ಲಿರುವ ಅರ್ಥವ್ಯವಸ್ಥೆಯಲ್ಲಿ ಮಾತ್ರ ಯೋಜನಾ ಆಯೋಗ ಇರುತ್ತದೆ ಎಂದು ನಂಬುವುದು ದಾರಿ ತಪ್ಪುವ ಒಂದು ಕ್ರಮವಾಗುತ್ತದೆ. 'ಯೋಜನೆ' ನಿರೂಪಿಸಲು ಅನೇಕ ಮಾದರಿಗಳಿವೆ. ಎಲ್ಲವನ್ನೂ ಒಳಗೊಳ್ಳುವ ಕೇಂದ್ರೀಕೃಕವಾದ ಸೋವಿಯತ್ ಶೈಲಿಯ ಯೋಜನಾ ಮಾದರಿ, ಸಾಮಾಜಿಕ ಪ್ರಜಾಪ್ರಭುತ್ವವಾದಿ ಫ್ರೆಂಚ್ ಯೋಜನಾ ಮಾದರಿ, ನಿಯಂತ್ರಣಕ್ಕೊಳಪಟ್ಟ ನೆಹರೂ–ಮಹಲನೋಬಿಸ್‌ರವರ ಭಾರತೀಯ ಯೋಜನಾ ಮಾದರಿ ಮತ್ತು ಯುದ್ಧ ಸನ್ನದ್ಧವಾಗುವ ಸಲುವಾಗಿ ನಾಝಿ ಜರ್ಮನಿಯ ಫ್ಯಾಸಿಸ್ಟ್ ಯೋಜನಾ ಮಾದರಿಗಳು ಕೆಲವು ಉದಾಹರಣೆಗಳು. ಯೋಜನೆಯ ಪ್ರೌಢಾವಸ್ಥೆಯ ದಿನಗಳಲ್ಲಿಯೂ ಕೂಡ ಭಾರತದಲ್ಲಿ ಉತ್ಪಾದನಾ ಸಾಧನಗಳ ಸಾರ್ವಜನಿಕ ಒಡೆತನ ಬಲು ಸೀಮಿತವಾಗಿತ್ತೆಂಬ ಅಂಶವನ್ನು ನಿಸ್ಸಾರದ ಹಿಂದೂ ಬಲಪಂಥೀಯ ಬುದ್ಧಿಜೀವಿಗಳು ಮರೆಮಾಚುತ್ತಾರೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಯೋಜನೆ ಅಂದರೆ ಅದು ಪಂಚವಾರ್ಷಿಕ ಯೋಜನೆಯ ವಿವರಗಳನ್ನೊಳಗೊಂಡ ಬರೀ ಕಾಗದಪತ್ರಗಳಲ್ಲ; ಅದು, ರಾಷ್ಟ್ರಪ್ರಭುತ್ವವು ತಾನು ಎದುರಿಸುತ್ತಿರುವ ಸಾಮಾಜಿಕ–ಆರ್ಥಿಕ ಸವಾಲುಗಳನ್ನು ಚಾಕಚಕ್ಯತೆಯಿಂದ ನಿಭಾಯಿಸುವ ಪರಿ.

ಇಂದು ನವ–ಉದಾರವಾದಿ ಅರ್ಥವ್ಯವಸ್ಥೆಯಲ್ಲಿ ರೈತರು ಮತ್ತು ಕಿರು ಉತ್ಪಾದಕರು ನಿರ್ಗತಿಕರಾಗುತ್ತಿದ್ದಾರೆ. ಹಸಿವು ತಾಂಡವವಾಡುತ್ತಿದೆ. ಮತ್ತು ಹಣಕಾಸಿನ ಮೇಲೆ ನಿಯಂತ್ರಣ ಹೊಂದಿರುವ 'ಭಾರಿ ಕುಳಗಳು' (ಫೈನಾನ್‌ಶಿಯಲ್ ಆಲಿಗಾರ್ಕಿ) ಎಲ್ಲರಿಗೂ ಸೇರಿದ ಸಂಪನ್ಮೂಲಗಳನ್ನು ಕವಡೆ ಕಾಸಿಗೆ ವಶಪಡಿಸಿಕೊಳ್ಳುತ್ತಿದ್ದಾರೆ. ಇಂಥದ್ದು ಭಾರತದಲ್ಲೂ ನಡೆಯುತ್ತಿದೆ. ಯೋಜನೆ ಅಂದರೆ ಇಂತಹ ಪರಿಸ್ಥಿತಿಗಳನ್ನು ಚಾಕಚಕ್ಯತೆಯಿಂದ ನಿಭಾಯಿಸಲು ಇರುವ ಒಂದು ವ್ಯವಸ್ಥೆ. ಆರ್ಥಿಕ ಉನ್ನತಿಯ ಗುರಿ ಸಾಧಿಸಲು ಯೋಜನೆಗಳನ್ನು ನಿರೂಪಿಸುವವರು ಕೇವಲ ಶ್ರಮಜೀವಿಗಳ ಮತ್ತು ರೈತರ ಪ್ರಾಬಲ್ಯದ ಪ್ರಭುತ್ವಗಳಷ್ಟೇ ಅಲ್ಲ. ಬೂರ್ಜ್ವಾ ರಾಷ್ಟ್ರಪ್ರಭುತ್ವಗಳೂ ಕೂಡ ಯೋಜನೆಗಳನ್ನು ನಿರೂಪಿಸುತ್ತವೆ. ನಮ್ಮ ದೇಶದ ಬ್ಯಾಂಕುಗಳ ರಾಷ್ಟ್ರೀಕರಣ ಇದಕ್ಕೊಂದು ಉದಾಹರಣೆ.



ನವ–ಉದಾರವಾದಿ ಪ್ರಭುತ್ವದ ಬಲ ವರ್ಧನೆ

ಯೋಜನಾ ಆಯೋಗವನ್ನು ಕೊನೆಗೊಳಿಸುವ ಈ ಪ್ರಯತ್ನವು ಪ್ರಭುತ್ವದ ಗುಣ ಲಕ್ಷಣಗಳಲ್ಲಾಗುತ್ತಿರುವ ಬದಲಾವಣೆಗಳನ್ನು ಸೂಚಿಸುತ್ತದೆ. ಒಟ್ಟಾರೆಯಾಗಿ ಆಳುವ ವರ್ಗಗಳ ಬದಲಾವಣೆಯಲ್ಲದಿದ್ದರೂ, ಆ ವರ್ಗಗಳೊಳಗಿನ ಪಲ್ಲಟವನ್ನು ಅದು ಸೂಚಿಸುತ್ತಿದೆ. ಇನ್ನೊಂದು ರೀತಿಯಲ್ಲಿ ಈ ಬದಲಾವಣೆಯನ್ನು ವರ್ಣಿಸುವುದಾದರೆ ಅದು 'ನೆಹರೂವಾದಿ ಪ್ರಭುತ್ವ'ದಿಂದ 'ನವ–ಉದಾರವಾದಿ ಪ್ರಭುತ್ವ'ವಾಗಿ ರೂಪುಗೊಳ್ಳುತ್ತಿದೆ. ನವ–ಉದಾರವಾದಿ ನೀತಿಗಳು ಜಾರಿಗೆ ಬಂದ ಕಾಲದಿಂದ ಕ್ರಮೇಣವಾಗಿ ಬದಲಾವಣೆಗಳು ಆಗುತ್ತಿವೆ. ಈಗ ಅದರ ಬಲವರ್ಧನೆಯಾಗುತ್ತಿದೆ.

ಸ್ವಾತಂತ್ರ್ಯಾನಂತರದ ನೆಹರೂವಾದಿ ಪ್ರಭುತ್ವವು ಬಂಡವಾಳಶಾಹಿಯನ್ನು ಬೆಳೆಸುತ್ತಿದ್ದರೂ ಸಹ ಅದು ಬಂಡವಾಳಗಾರರ ಹಿತರಕ್ಷಣೆಯೊಂದೇ ತನ್ನ ಆದ್ಯತೆಯೆಂಬಂತೆ ತೋರಿಸಿಕೊಳ್ಳಲಿಲ್ಲ. ಬದಲಿಗೆ ಅಗತ್ಯವಿದ್ದಾಗ, ಬಂಡವಾಳಗಾರರ ಮೇಲೆ ಅದು ನಿರ್ಬಂಧಗಳನ್ನು ಹೇರಿದಂತೆ, ದುರ್ಬಲರ ಹಕ್ಕುಗಳಿಗೆ ಧಕ್ಕೆಯಾದಾಗ ಒಂದು ಹಂತದವರೆಗೆ ಅವರ ಹಕ್ಕುಗಳನ್ನು ಅದು ರಕ್ಷಿಸಿದಂತೆ ಹಾಗೂ ವರ್ಗಗಳನ್ನು ಮೀರಿ ನಿಂತಂತೆ ಕಾಣಿಸಿಕೊಂಡಿತು. ಆದರೆ, ನವ–ಉದಾರವಾದಿ ಪ್ರಭುತ್ವವು, ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ಜೊತೆ ಕೈಗೂಡಿಸಿರುವ ಬಲಾಢ್ಯರಾದ ಕೆಲವೇ ಕೆಲವು ದೇಶೀ ಹಣಕಾಸು ಬಂಡವಾಳಿಗರ (ಫೈನಾನ್‌ಶಿಯಲ್ ಆಲಿಗಾರ್ಕಿ) ಹಿತಾಸಕ್ತಿಗಳಿಗೆ ಒತ್ತಾಸೆ ಕೊಡುವುದೇ ತನ್ನ ಆದ್ಯತೆಯೆಂಬಂತೆ ವರ್ತಿಸುತ್ತಿದೆ. ಈ ವರ್ತನೆಗೆ ಅದರದ್ದೇ ಆದ ಒಂದು ಸೈದ್ಧಾಂತಿಕ ಸಮರ್ಥನೆಯೂ ಇದೆ. ಪ್ರಭುತ್ವವು ಯಾವುದೇ ಅನುಕೂಲವನ್ನು ಬಲಾಢ್ಯರಾದ ಕೆಲವೇ ಕೆಲವು ಹಣಕಾಸು ಬಂಡವಾಳಿಗರ (ಫೈನಾನ್‌ಶಿಯಲ್ ಆಲಿಗಾರ್ಕಿ)ಹಿತಾಸಕ್ತಿಗಳಿಗೆ ಒದಗಿಸಿದರೆ ತನ್ಮೂಲಕ ಅದು ಇಡೀ ದೇಶಕ್ಕೆ ಆಗುವ ಅನುಕೂಲವೆಂದೇ ಬಗೆಯುತ್ತದೆ. ಈ ಬಲಾಢ್ಯ ಹಣಕಾಸು ಬಂಡವಾಳಗಾರರ ವರ್ಗವು ತನ್ನ ಪೋಷಕನಂತಿರುವ ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ಜೊತೆಗೆ ಬೆಸುಗೆ ಹಾಕಿಕೊಂಡಿದೆ. ಹಾಗಾಗಿ, ಅಂತರಾಷ್ಟ್ರೀಯ ಹಣಕಾಸು ಬಂಡವಾಳವು ಬಯಸಿದ್ದನ್ನೆಲ್ಲಾ ಈಡೇರಿಸುವ ಪ್ರಭುತ್ವದ ಕ್ರಮಗಳು 'ರಾಷ್ಟ್ರದ ಹಿತ' ಕಾಯುವ ಸಲುವಾಗಿ ಎಂಬಂತಾಗಿದೆ.

ಜಾಗತೀಕರಣದ ಅಧಿಪತ್ಯದಲ್ಲಿ, ಜಾಗತೀಕರಣಗೊಂಡಿರುವ ಹಣಕಾಸು ಬಂಡವಾಳವು ತನಗೆ ಒಪ್ಪಿಗೆಯಾಗದಂತಹ ಬದಲಾವಣೆಗಳನ್ನು ಪ್ರಭುತ್ವವು ಮಾಡಿದ್ದೇ ಆದರೆ, ಅದು ಹಿಂಡಾಗಿ ದೇಶ ಬಿಟ್ಟು ಹೋಗುತ್ತದೆ. ಆಗ ದೇಶದಲ್ಲಿ ತೀವ್ರವಾದ ಬಿಕ್ಕಟ್ಟು ಉಂಟಾಗುತ್ತದೆ. ಅಂತಹ ಸಂದರ್ಭದಲ್ಲಿ, ದೇಶದ ಹಿತದೃಷ್ಟಿಯಿಂದ ಜಾಗತೀಕರಣದ ಹಿಡಿತದಿಂದ ಬಿಡಿಸಿಕೊಂಡು ದೇಶದ ಅನುಕೂಲಕ್ಕೆ ತಕ್ಕಂತೆ ಆರ್ಥಿಕ ನೀತಿಗಳನ್ನು ರೂಪಿಸಲು ಯೋಜನಾ ಆಯೋಗ ಪ್ರಸ್ತುತವಾಗುತ್ತದೆ. ಆದರೆ, ನವ–ಉದಾರವಾದಿ ಪ್ರಭುತ್ವಕ್ಕೆ ಯೋಜನಾ ಆಯೋಗವು ಅಪ್ರಸ್ತುತವಾಗುತ್ತದೆ.

ನವ–ಉದಾರವಾದಿ ಪ್ರಭುತ್ವದ ಸಮರ್ಥನೆ ಮಾಡಲು ಒಡ್ಡುವ ವಾದ ವಿಚಿತ್ರವಾಗಿದೆ: ಜಾಗತೀಕರಣಗೊಂಡಿರುವ ಹಣಕಾಸು ಬಂಡವಾಳವು ಪ್ರಭುತ್ವದ ಮೇಲೆ ಒತ್ತಾಯವನ್ನೇನೂ ಹೇರುವುದಿಲ್ಲ. ಅದರ ಅಪೇಕ್ಷೆಯಂತೆ ಪ್ರಭುತ್ವವು ತೆಗೆದುಕೊಳ್ಳುವ ಕ್ರಮಗಳು ದೇಶಕ್ಕೆ ಹಿತವಾಗಿಯೇ ಇರುತ್ತವೆ.

ರಾಷ್ಟ್ರ ಪ್ರಭುತ್ವದ ಹಿತಾಸಕ್ತಿಯು ಯೋಜನಾ ಆಯೋಗದ ತಳಹದಿಯಾಗಿದೆ. ಅದು ಜಾಗತೀಕರಣಗೊಂಡಿರುವ ಹಣಕಾಸು ಬಂಡವಾಳದೊಂದಿಗೆ ಗುರುತಿಸಿಕೊಳ್ಳುವುದಿಲ್ಲ.

ನವ–ಉದಾರವಾದಿ ಪ್ರಭುತ್ವವು ತನ್ನದೇ ಆದ ನಿರ್ದಿಷ್ಟ ನೀತಿಗಳ ಜೊತೆಗೆ ತನ್ನದೇ ಆದ ನಿರ್ದಿಷ್ಟ ಸಂಸ್ಥೆಗಳನ್ನು ಹೊಂದಿರುತ್ತದೆ. ಕೇಂದ್ರ ಬ್ಯಾಂಕಿನ ಸ್ವಾಯತ್ತತೆ ಹಾಗೂ ಹಣಕಾಸು ಮಂತ್ರಾಲಯಕ್ಕೆ ವಿಶೇಷ ಮನ್ನಣೆ ಮತ್ತು ಅಂತಹ ಆಯಕಟ್ಟಿನ ಹುದ್ದೆಗಳಲ್ಲಿ ಐಎಂಎಫ್ ಮತ್ತು ವಿಶ್ವ ಬ್ಯಾಂಕಿನ ಮಾಜಿ ಅಧಿಕಾರಿಗಳನ್ನು ಕೂರಿಸುವುದು ಅದರ ಸಾಂಸ್ಥಿಕ ವ್ಯವಸ್ಥೆಯ ಲಕ್ಷಣಗಳು. ರಾಜಕೀಯ ಪ್ರತಿನಿಧಿಗಳು 'ಭ್ರಷ್ಟ'ರೆಂಬುವ ನೆಪದ ಮೇಲೆ ಆರ್ಥಿಕ ವಿಷಯಗಳಿಗೆ ಸಂಬಂಧಿಸಿ ಅವರು ತೆಗೆದುಕೊಳ್ಳುತ್ತಿದ್ದ ತೀರ್ಮಾನದ ವ್ಯಾಪ್ತಿಯನ್ನು ಅಧಿಕಾರಶಾಹಿಗೆ ವಹಿಸಿರುವುದು ಅದರ ಮತ್ತೊಂದು ಸಾಂಸ್ಥಿಕ ಲಕ್ಷಣ.

ಮೂರನೇ ಜಗತ್ತಿನ ಅನೇಕ ದೇಶಗಳಂತಲ್ಲದೆ, ಭಾರತವು ಇನ್ನೂ ಒಂದು ಪೂರ್ಣ ಪ್ರಮಾಣದ ನವ–ಉದಾರವಾದಿ ಪ್ರಭುತ್ವವಾಗಿ ಬದಲಾಗಿಲ್ಲ. ಆದರೆ, ಮೋದಿ ಸರ್ಕಾರವು ಈ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಹಾತೊರೆಯುತ್ತಿದೆ. ಕಾರ್ಮಿಕ ಸಂಘಟನೆಗಳನ್ನು ನುಚ್ಚುನೂರು ಮಾಡುವ ಕ್ರಮಗಳಿಗೆ ಸುತ್ತಿ ಬಳಸಿ ಹೇಳುವ ಪದಕಟ್ಟು –'ಕೂಲಿಕಾರರ ಬಳುಕುವ ಮಾರುಕಟ್ಟೆ' ಸುಧಾರಣೆಗಳು, ಬ್ಯಾಂಕುಗಳ ಖಾಸಗೀಕರಣ, ವಿಮಾ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಮಿತಿ ಹೆಚ್ಚಳ ಮುಂತಾದ ಕ್ರಮಗಳು ಯೋಜನಾ ಆಯೋಗದ ಕೊನೆಗಾಲವನ್ನು ಸೂಚಿಸುವುದೇ ಅಲ್ಲದೆ ಅವು ನವ–ಉದಾರವಾದಿ ಪ್ರಭುತ್ವದತ್ತ ವಾಲುವ ಸ್ಪಷ್ಟವಾದ ಸೂಚನೆಗಳಾಗಿವೆ. ಯುಪಿಎ–2 ಸರ್ಕಾರವು ಈಗ ಮೋದಿ ಸರ್ಕಾರವು ಮಾಡುತ್ತಿರುವ ಬದಲಾವಣೆಗಳನ್ನು ತಾನೇ ಮಾಡಬಯಸಿತ್ತಾದರೂ ಅದು ಯೋಜನಾ ಆಯೋಗವನ್ನು ಮುಚ್ಚುವ ತನಕ ಹೋಗಿರಲಿಲ್ಲ. ಆದರೆ, ಅದನ್ನು ನಿಷ್ಕ್ರಿಯಗೊಳಿಸಲು ಸಾಕಾಗುವಂತಹ ವಿಶ್ವ ಹಣಕಾಸು ಸಮುದಾಯಕ್ಕೆ ಸೇರಿದ ಒಬ್ಬ ಮಹಾನ್ ಮೇಧಾವಿಯೊಬ್ಬನನ್ನು ತಂದು ಕೂರಿಸಿತ್ತು. ಆತ ಮಾಡಿದ ಒಂದು ಮಹತ್ಕಾರ್ಯವೆಂದರೆ ಖಾಸಗಿ–ಸಾರ್ವಜನಿಕ ಸಹಭಾಗಿತ್ವದ ಭಾರಿ ಸ್ಕೀಂಗಳಿಗೆ ಚಾಲನೆ ನೀಡಿದ್ದು ಅಷ್ಟೇ. ಆದರೆ, ಮೋದಿ ಸರ್ಕಾರವು ನಿರ್ದಯವಾಗಿ ಆ ನಿಟ್ಟಿನಲ್ಲಿ ಸಾಗುತ್ತಿದೆ.

'ಕೋಮುವಾದಿ–ಫ್ಯಾಸಿಸಂ'ನ ಪಾಲನೆ

ವಸಾಹತು ಕಾಲಾನಂತರದ ಅಂದರೆ ಸ್ವಾತಂತ್ರ್ಯದ ನಂತರದ ನೆಹರೂ ಕಾಲದ ಪ್ರಭುತ್ವವು ಸಾರ್ವತ್ರಿಕ ವಯಸ್ಕ ಚುನಾವಣಾ ಪದ್ಧತಿ ಇರುವ ಒಂದು ರಾಜಕೀಯ ಚೌಕಟ್ಟಿನಲ್ಲಿ ನವ–ಉದಾರವಾದಿ ಪ್ರಭುತ್ವವಾಗಿ ರೂಪುಗೊಳ್ಳುವ ಬದಲಾವಣೆ ಅಷ್ಟೇನೂ ಸುಲಭವಲ್ಲ. ಕಾರ್ಪೊರೇಟ್ ಪರವಿರುವ ಆರ್ಥಿಕ ನೀತಿಗಳಿಗೆ ಧಕ್ಕೆಯಾಗದಂತೆ ನೋಡಿಕೊಳ್ಳಲು ಒಂದು ಸಾಂಸ್ಥಿಕ ಚೌಕಟ್ಟನ್ನು ನಿರ್ಮಿಸಿದರೆ ಅದಷ್ಟೇ ಸಾಕಾಗುವುದಿಲ್ಲ. ಅಂತಹ ನೀತಿಗಳನ್ನು ವಿರೋಧಿಸಲು ಸಜ್ಜಾಗುವ ಭಾರಿ

ಪುಟ 15 ಕ್ಕೆ

ಕಾರ್ಪೊರೇಟ್‌ಗಳಿಗೆ ರಕ್ಷಣಾ ಮಂತ್ರಿಗಳ ರಿಪೋರ್ಟ್‌ಕಾರ್ಡ್:

ರಕ್ಷಣಾ ಉತ್ಪಾದನೆಯಷ್ಟೇ ಅಲ್ಲ, ಶಿಕ್ಷಣದಲ್ಲೂ ಖಾಸಗೀಕರಣದ 'ಒಳ್ಳೆಯ ದಿನಗಳು'

ಮೋದಿ ಸರಕಾರ ನೂರು ದಿನಗಳನ್ನು ಪೂರೈಸುತ್ತಿರುವಂತೆ ಅವರ ಸರಕಾರದ ಪ್ರಮುಖ ಮಂತ್ರಿಗಳು ಕಾರ್ಪೊರೇಟ್‌ಗಳಿಗೆ ತಮ್ಮ ಸಾಧನೆಗಳ ರಿಪೋರ್ಟ್ ಕಾರ್ಡ್ ಕೊಟ್ಟಿದ್ದಾರೆ. ಬೆಲೆಯೇರಿಕೆಯನ್ನು ತಡೆಯಲು ಏನು ಮಾಡಲಾಗಿದೆ ಎಂದು ವರದಿ ನೀಡುವ ಅಗತ್ಯವಿಲ್ಲ ಎಂದು ಬಗೆದಂತಿರುವ ರಕ್ಷಣಾ ಮಂತ್ರಿಗಳೂ ಆಗಿರುವ ಹಣಕಾಸುಮಂತ್ರಿಗಳು ಸದ್ದಿಲ್ಲದೆ ರಕ್ಷಣಾ ಉತ್ಪಾದನೆಯಲ್ಲಿ ಖಾಸಗಿಯವರಿಗೆ ಭಾರೀ ಅವಕಾಶ ನೀಡಲಾಗುತ್ತಿದೆ ಎಂದು ಮುಂಬೈಯಲ್ಲಿ 'ಎಕ್ಸ್‌ಪ್ರೆಸ್ ಅಡ್ಡಾ'ದಲ್ಲಿ ಕಾರ್ಪೊರೇಟ್ ಘಟಾನುಘಟಿಗಳನ್ನು ಉದ್ದೇಶಿಸಿ ಮಾತನಾಡುತ್ತ ಹೇಳಿದ್ದಾರೆ.

ತನ್ನ ರಕ್ಷಣಾ ಮಂತ್ರಾಲಯ ಇದುವರೆಗೆ ಹೊಂದಿದ್ದ 'ಅತಿ ಸಂಪ್ರದಾಯಶರಣ' ಸ್ವರೂಪವನ್ನು ತ್ಯಜಿಸುವ ಮೂರ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ, 53ಶೇ.ದಷ್ಟು ರಕ್ಷಣಾ ಸಾಮಗ್ರಿಗಳಿಗೆ ಲೈಸೆನ್ಸ್ ಅಗತ್ಯ ವಿಲ್ಲದಂತೆ ಮಾಡಿದ್ದೇನೆ, ಲೈಸೆನ್ಸ್ ಅಗತ್ಯವಿರುವ ಐಟಂಗಳ ಪಟ್ಟಿ ಆರು ಪುಟಗಷ್ಟಿದ್ದನ್ನು ಎರಡು ಪುಟಗಳಿಗೆ ಇಳಿಸಲಾಗಿದೆ ಎಂದು ತಮ್ಮ ಕಾರ್ಪೊರೇಟ್ ಮಿತ್ರರ ಮುಂದೆ ಬೆನ್ನು ತಟ್ಟಿಕೊಂಡರು. ಸಾರಿಗೆ ವಿಮಾನ ಉದ್ದಿಮೆಯಲ್ಲಿ ಖಾಸಗಿ ವಲಯಕ್ಕೆ ಉತ್ತೇಜನೆ ನೀಡಲು ಸಾರ್ವಜನಿಕ ವಲಯವನ್ನು ಹೊರಗಿಡಲು ನಿರ್ಧರಿಸಿದ್ದೇವೆ ಎಂದು ನೇರವಾಗಿಯೇ ಹೇಳಿದ ಅವರು "ಅಂದರೆ ನಿಮಗೆ ರಕ್ಷಣಾ ಮತ್ರಾಲಯದಲ್ಲಿ ಮಾಡಬಹುದಾದ್ದು ಬಹಳಷ್ಟು ಇದೆ ಎಂದು ನಾನು ಭಾವಿಸುತ್ತೇನೆ" ಎಂದರು.

ರಕ್ಷಣಾಮಂತ್ರಿಗಳು ತಮ್ಮ ಎರಡೂ ಖಾತೆಗಳಿಗೆ ಸಂಬಂಧಪಡದ ಶಿಕ್ಷಣ ರಂಗದಲ್ಲಿಯೂ ಖಾಸಗೀಕರಣದ ಭರವಸೆಯನ್ನು ತಮ್ಮ ಕಾರ್ಪೊರೇಟ್ ಮಿತ್ರರಿಗೆ ನೀಡಿದರು. ಹೆಚ್ಚು ಸ್ವಾಯತ್ತ ಶಿಕ್ಷಣ ಸಂಸ್ಥೆಗಳನ್ನು, ಸ್ವತಂತ್ರ ವಿಶ್ವವಿದ್ಯಾಲಯಗಳನ್ನು, ಹೆಚ್ಚು ಡೀಮ್ಡ್ ವಿಶ್ವವಿದ್ಯಾಲಯಗಳಿಗೆ ಅವಕಾಶ ನೀಡಲು ಇದೇ ಸರಿಯಾದ ಸಮಯ ಎಂದ ಅವರು ಶಿಕ್ಷಣವನ್ನು ಖಾಸಗಿಯವರಿಗೆ ತೆರೆಯುವ ಬಗ್ಗೆ ಮಾನವ ಸಂಪನ್ಮೂಲ ಮಂತ್ರಿಗಳೊಂದಿಗೆ ಮಾತಾಡುವುದಾಗಿ ಅಲ್ಲಿ ನೆರೆದಿದ್ದ ಕಾರ್ಪೊರೇಟ್ ಮಿತ್ರರುಗಳಿಗೆ ಭರವಸೆ ನೀಡಿದರು.ಮೆಡಿಕಲ್ ಕಾಲೇಜುಗಳಲ್ಲಿ ಕ್ಯಾಪಿಟೇಶನ್ ಶುಲ್ಕದ ಬಗ್ಗೆ ಹೇಳುತ್ತ ವೈದ್ಯಕೀಯ ಶಿಕ್ಷಣವನ್ನು ನಿಯಂತ್ರಿಸುವವರು ಹೆಚ್ಚು 'ಉದಾರ'ವಾಗಿರಬೇಕು ಎಂದು ಅಭಿಪ್ರಾಯಪಟ್ಟರು! ಅದೇ ರೀತಿ ಭೂಸ್ವಾಧೀನ ಕಾನೂನು ರಚಿಸಿದ ಪುಣ್ಯಾತ್ಮ ದೇಶದ ಜಿಡಿಪಿಗೆ ಭಾರೀ ಅನ್ಯಾಯ ಮಾಡಿದ್ದಾರೆ ಎನ್ನುತ್ತ ಅದನ್ನೂ 'ಉದಾರೀಕರಿಸ'ಬೇಕಾದ ಅಗತ್ಯವಿದೆ ಎಂಬ ಸೂಚನೆಯನ್ನು ನೀಡಿ ತನ್ನ ಕಾರ್ಪೊರೇಟ್ ಮಿತ್ರರಿಗೆ 'ಒಳ್ಳೆಯ ದಿನಗಳು' ಖಂಡಿತಾ ಬರುತ್ತಿದೆ ಎಂದು ಮನವರಿಕೆ ಮಾಡಿಕೊಟ್ಟರು!


ಹಿಂದಿನ ಎನ್‌ಡಿಎ ಖಾಸಗೀಕರಣ ಹಗರಣಕ್ಕೆ ಮತ್ತೆ ಜೀವ?

'ಇಂಡಿಯನ್ ಎಕ್ಸ್‌ಪ್ರೆಸ್' ನಲ್ಲಿ ಅಗಸ್ಟ್ 28ರಂದು ಹಣಕಾಸು/ ರಕ್ಷಣಾ ಮಂತ್ರಿಗಳ ಈ 'ಎಕ್ಸ್‌ಪ್ರೆಸ್ ಅಡ್ಡಾ' ಸಭೆಯ ಸುದ್ದಿ ಬಂದ ಎರಡು ದಿನಗಳ ನಂತರ ಟೈಂಸ್ ನ್ಯೂಸ್ ಸರ್ವಿಸ್ ಸುದ್ದಿಯೊಂದನ್ನು ಪ್ರಕಟಿಸಿತು. ಅದು ಹಿಂದಿನ ಎನ್‌ಡಿಎ ಸರಕಾರ ಕುರಿತಾದದ್ದು. ಆಗ ವಾಜಪೇಯಿ ಸಂಪುಟದಲ್ಲಿ ಒಬ್ಬ ಖಾಸಗೀಕರಣ ಮಂತ್ರಿಗಳೇ ಇದ್ದರು, 'ಶೇರು ಹಿಂಪಡಿಕೆ ಇಲಾಖೆ'ಯ ಮಂತ್ರಿಗಳು!

ಆಗ ಈ ಇಲಾಖೆಯಲ್ಲಿ ಕಾರ್ಯದರ್ಶಿಗಳಾಗಿದ್ದ ಪ್ರದೀಪ್ ಬೈಜಾಲ್‌ರ ಮೇಲೆ ಈಗ ಸಿಬಿಐನವರು ಎಫ್‌ಐಆರ್ ದಾಖಲಿಸಿದ್ದಾರೆ. ಅವರು ಭಾರತ ಸರಕಾರದ ನಿಗಮವಾದ ಐಟಿಡಿಸಿ ಒಡೆತನದಲ್ಲಿದ್ದ ಉದಯಪುರದ ಲಕ್ಷ್ಮೀ ವಿಲಾಸ ಪ್ಯಾಲೇಸ್ ಹೊಟೇಲನ್ನು ಮೂರುಕಾಸಿಗೆ ಮಾರಿ ಮೋಸ ಮಾಡಿದ್ದಾರೆ ಎಂಬುದು ಅವರ ಮೇಲಿನ ಆಪಾದನೆ. ಅದಕ್ಕೆ ಉತ್ತರವಾಗಿ ಈ ಮಾಜೀ ಶೇರು ಹಿಂಪಡಿಕೆ ಕಾರ್ಯದರ್ಶಿ "ಶೇರು ಹಿಂಪಡಿಕೆಯ ಎಲ್ಲ ನಿರ್ಧಾರಗಳನ್ನು ಆಗಿನ ಶೇರು ಹಿಂಪಡಿಕೆ ಮಂತ್ರಿ ಅರುಣ್ ಶೌರಿ ಮತ್ತು ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೆಯಿ ಅಧ್ಯಕ್ಷತೆಯ ಶೇರು ಹಿಂಪಡಿಕೆ ಸಂಪುಟ ಸಮಿತಿ(ಸಿಸಿಡಿ) ಕೈಗೊಳ್ಳುತ್ತಿತ್ತು." ಎಂದು ಎನ್‌ಡಿಎ ಸರಕಾರದ ಪ್ರಮುಖರು ಇದಕ್ಕೆ ಹೊಣೆ ಎಂದಿದ್ದಾರೆ. ಈ ಕುರಿತ ಫೈಲಿನ ಮೇಲೆ ಇವರೆಲ್ಲರ ಸಹಿಗಳಿವೆ, ತನ್ನದು ಮಾತ್ರವೇ ಅಲ್ಲ ಎಂದವರು ಹೇಳಿದ್ದಾರೆ. 151 ಕೋಟಿ ರೂ. ಬೆಲೆಬಾಳುವ ಈ ಹೊಟೇಲನ್ನು ಅತಿ ಹೆಚ್ಚು ಹರಾಜು ಕೂಗಿದ್ದ ಭಾರತ ಹೊಟೇಲ್ಸ್‌ಗೆ ಕೇವಲ 7.52ಕೋಟಿ ರೂ.ಗಳಿಗೆ ಮಾರಲಾಗಿತ್ತು. ಅಂದರೆ ದೇಶದ ಖಜಾನೆಗೆ ಹನ್ನೆರಡು ವರ್ಷಗಳ ಹಿಂದೆ 143 ಕೋಟಿ ರೂ.ಗಳ ನಷ್ಟ. ಆದರೆ ಈ ಮೌಲ್ಯೀಕರಣ ಮಾಡಿದ್ದು ತಾನಲ್ಲ ಎಂದು ಈ ಮಾಜಿ ಶೇರು ಹಿಂಪಡಿಕೆ ಕಾರ್ಯದರ್ಶಿಗಳ ಸ್ಪಷ್ಟೀಕರಣ. ಮಾಜಿ ಶೇರು ಹಿಂಪಡಿಕೆ ಮಂತ್ರಿಗಳು ಇದುವರೆಗೆ ಈ ಬಗ್ಗೆ ಪ್ರತಿಕ್ರಿಯಿಸಿದ್ದು ವರದಿಯಾಗಿಲ್ಲ.

ಎನ್‌ಡಿಎ ಸರಕಾರದ ಖಾಸಗೀಕರಣದ ಭರದಲ್ಲಿ ಇಂತಹ ಹಲವು ಹಗರಣಗಳು ನಡೆದಿವೆ, ಅಂದರೆ ಮೇಲಿನಂತೆ ದೇಶದ ಖಜಾನೆಯನ್ನು ಲೂಟಿ ಮಾಡಿ ಹಲವು ಖಾಸಗಿಯವರಿಗೆ ಬಹಳ 'ಒಳ್ಳೆಯ ದಿನಗಳು' ಬಂದಿದ್ದವು.

ಈಗ ಮತ್ತೆ ಖಾಸಗಿಯವರಿಗೆ ಅಂತಹ 'ಒಳ್ಳೆಯ ದಿನಗಳ' ಭರವಸೆ ನೋಡಲಾಗುತ್ತಿದೆ!




ಕೃಪೆ: ಮುಹಮ್ಮದ್, ವಿಜಯ ಕರ್ನಾಟಕ

'ಒಳ್ಳೆಯ ದಿನ'ಗಳ ಡೈರಿ

ವೇದರಾಜ ಎನ್.ಕೆ.





ನೂರೇ ದಿನಗಳಲ್ಲಿ ನವ-ಉದಾರವಾದಿ 'ಸುಧಾರಣೆ'ಗಳಿಗೆ ತಟ್ಟಿದ 'ಗ್ರಹಣ' ಬಿಡಿಸಿದ್ದೇವೆ ಎನ್ನುವವರಿಗೆ ಬೆಲೆಗಳನ್ನು ಇನ್ನೂ ಹತೋಟಿಗೆ ತರಲಾಗಿಲ್ಲ.
ಡಿಎನ್‌ಎ ಯಲ್ಲಿ ಮಂಜುಲ್ ಅವರ ವ್ಯಂಗ್ಯ.

'ಅಭಿವೃದ್ಧಿ' ಅಜೆಂಡಾದ ಆಚೆ

ಉತ್ತರ ಪ್ರದೇಶ ಉಪಚುನಾವಣೆಗಳಿಗೆ 'ಕೋಮುಧ್ರುವೀಕರಣ ವಿಶೇಷಜ್ಞ'ನ ಉಸ್ತುವಾರಿ

ಇನ್ನು ಹತ್ತು ವರ್ಷಗಳ ಕಾಲ ಕೋಮುಘರ್ಷಣೆಗಳು ನಡೆಯಬಾರದು, ಅದರಿಂದ ಯಾರಿಗೂ ಪ್ರಯೋಜನವಾಗಿಲ್ಲ ಎಂದು ಪ್ರಧಾನ ಮಂತ್ರಿಗಳು ಕೆಂಪುಕೋಟೆಯಿಂದ ಕರೆ ನೀಡಿ ಎರಡು ವಾರಗಳೂ ಕಳೆದಿಲ್ಲ. ಆಗಲೇ ದೀಪಾವಳಿ, ಹೋಳಿ ಆಚರಿಸದವರು ಪಾಕಿಸ್ತಾನಕ್ಕೆ ಹೋಗಲಿ, ಒಬ್ಬ ಹಿಂದೂವನ್ನು ಕೊಂದರೆ ಹತ್ತು ಮುಸ್ಲಿಮರನ್ನು ಕೊಲ್ಲುತ್ತೇವೆ, ಒಂದು ಕೈಯಲ್ಲಿ 'ಮಾಲಾ' (ಜಪಮಾಲೆ) ಹಿಡಿದಿರುವ ನಾನು ಇನ್ನೊಂದು ಕೈಯಲ್ಲೀ 'ಭಾಲಾ'(ಭರ್ಜಿ) ಹಿಡಿದಿದ್ದೇನೆ ಎನ್ನುತ್ತ ತಿರುಗಾಡುತ್ತಿರುವ ಗೋರಖ್‌ಪುರದ ಸಂಸತ್ ಸದಸ್ಯ ಯೋಗಿ ಆದಿತ್ಯನಾಥರನ್ನು ಉತ್ತರ ಪ್ರದೇಶದಲ್ಲಿ ನಡೆಯಲಿರುವ ಉಪಚುನಾವಣೆಗಳಿಗೆ ನಡೆಸಬೇಕಾದ ಪ್ರಚಾರ ಕಾರ್ಯದ ನೇತೃತ್ವವನ್ನು ವಹಿಸಿಕೊಡಲಾಗಿದೆ. ಅದು ಕೂಡ ಅರವತ್ತಕ್ಕೂ ಹೆಚ್ಚು ಜೀವಗಳನ್ನು ಬಲಿ ತೆಗೆದುಕೊಂಡು ಸಾವಿರಾರು ಮಂದಿಯನ್ನು ನಿರಾಶ್ರಿತರಾಗಿಸಿದ ಮುಝಪ್ಫರ್‌ನಗರದ ಗಲಭೆಗಳಿಗೆ ಒಂದು ವರ್ಷ ತುಂಬುವ ಸಂದರ್ಭದಲ್ಲೇ ಒಬ್ಬ 'ಧ್ರುವೀಕರಣ ವಿಶೇಷಜ್ಞ'ನಿಗೆ ಚುನಾವಣಾ ಪ್ರಚಾರದ ಉಸ್ತುವಾರಿಯನ್ನು ಕೊಡಲಾಗಿದೆ ಎಂದು ಪತ್ರಿಕೆಯೊಂದು ವರ್ಣಿಸಿದೆ.

ಅಭಿವೃದ್ಧಿಕಾರ್ಯ ನಡೆಸಲು ಕೋಮು ಘರ್ಷಣೆಗಳು ನಡೆಯಬಾರದು ಎಂದು ಪ್ರಧಾನ ಮಂತ್ರಿಗಳು ಹೇಳಿದರೆ, ಅವರು ಪ್ರಧಾನಮಂತ್ರಿಯಾಗಲು ಅತಿ ಹೆಚ್ಚು ಸೀಟುಗಳನ್ನು ಕೊಡಮಾಡಿದ ರಾಜ್ಯದ ಅವರ ಪಕ್ಷದ ಪ್ರಮುಖರು ಹಿಂದುತ್ವವಿಲ್ಲದೆ ಅಭಿವೃದ್ಧಿ ಇಲ್ಲ ಎನ್ನುತ್ತಿದ್ದಾರೆ, ಅಂದರೆ ಕೋಮುಧ್ರುವೀಕರಣ ಮಾಡದೆ ಚುನಾವಣೆ ಗೆಲ್ಲಲು ಸಾಧ್ಯವಿಲ್ಲ ಎಂದು ಪರೋಕ್ಷವಾಗಿ ಸಮರ್ಥಿಸಿಕೊಳ್ಳುತ್ತಿದ್ದಾರೆ!

ಮುಗಿಸದ 'ಹಿಂದೂ'-ಹಿಂದುತ್ವ ಸಮೀಕರಣ

ಆರೆಸ್ಸೆಸ್ ಮುಖ್ಯಸ್ಥರು ಹರಿಯ ಬಿಟ್ಟ ಹಿಂದುಸ್ತಾನದಲ್ಲಿರುವವರೆಲ್ಲ ಹಿಂದೂಗಳು ಎನಿಸಿಕೊಳ್ಳಬೇಕೆಂಬ ಹೇಳಿಕೆಯ ಸುತ್ತ ಎದ್ದಿರುವ ವಿವಾದ ತಣ್ಣಗಾಗಲು ಬಿಡಬಾರದು ಎಂದು ಮೋದಿ ಸರಕಾರದ ಮಂದಿ ನಿರ್ಧರಿಸಿರುವಂತೆ ಕಾಣುತ್ತದೆ. ಆ ಸರಕಾರದ ಅಲ್ಪಸಂಖ್ಯಾತ ವ್ಯವಹಾರಗಳ ಮಂತ್ರಿಗಳು ಭಾರತದಲ್ಲಿರುವವರನ್ನೆಲ್ಲ ಹಿಂದೂಗಳು ಎಂದರೆ ತಪ್ಪಿಲ್ಲ ಎಂದು ಹೇಳಿರುವುದಾಗಿ ವರದಿಯಾಗಿತ್ತು. ಈ ಬಗ್ಗೆ ಮತ್ತೆ ವಿವಾದ ಎದ್ದಾಗ ತಾನು 'ಹಿಂದೂ' ಎಂದದ್ದಲ್ಲ 'ಹಿಂದಿ' ಎಂದದ್ದು', ತಾನು ಹಾಗೆ ಹೇಳಿದ್ದು ಧರ್ಮದ ದೃಷ್ಟಿಯಿಂದ ಅಲ್ಲ, ರಾಷ್ಟ್ರೀಯತೆಯ ದೃಷ್ಟಿಯಿಂದ, ಅರೇಬಿಕ್‌ನಲ್ಲಿ ಭಾರತದಲ್ಲಿ ನೆಲೆಸಿರುವವರನ್ನು 'ಹಿಂದಿ'ಗಳು ಎನ್ನಲಾಗುತ್ತದೆ ಎಂದು 'ಸ್ಪಷ್ಟೀಕರಣ' ನೀಡಿದರು. ಆದರೆ ಅವರ ಹಿಂದುತ್ವ ಸಹಯೋಗಿಗಳು 'ಹಿಂದೂ' ಪದಪಠಣವನ್ನೇ ಮುಂದುವರೆಸುತ್ತಿದ್ದಾರೆ.

ಹಿಂದುತ್ವವಾಲಾಗಳು ತಮ್ಮ ರಾಜಕೀಯ ಸ್ವಾರ್ಥಸಾಧನೆಗೆ ಚರಿತ್ರೆಯನ್ನು ವಿರೂಪಗೊಳಿಸುತ್ತಿದ್ದಾರೆ ಎಂದು ಸಿಪಿಐ(ಎಂ) ಮುಖಂಡರಾದ ಸೀತಾರಾಂ ಯೆಚುರಿ ಇದಕ್ಕೆ ಪ್ರತಿಕ್ರಿಯಿಸುತ್ತ ಹೇಳಿದ್ದಾರೆ. ಹಿಂದುಕುಶ್ ಪರ್ವತಗಳ ಆಚೆಯ ಪಯಣಿಗರು ಸಿಂಧೂ ನದಿಯ ಈಚೆಗಿನ ಪ್ರದೇಶವನ್ನು ಸಿಂಧೂಸ್ತಾನ ಎಂದರು. ಅರೇಬಿಕ್ ಭಾಷೆಯ ಅಕ್ಷರಮಾಲೆಯಲ್ಲಿ ಸ ಎಂಬುದನ್ನು ಹ ಎಂದು ಉಚ್ಚರಿಸುವುದರಿಂದ ಅದು ಹಿಂದುಸ್ತಾನವಾಯಿತು ಎಂಬುದನ್ನು ಅವರು ನೆನಪಿಸಿದ್ದಾರೆ.

ಈ ನಡುವೆ ಬಿಜೆಪಿಯ ಮಿತ್ರಪಕ್ಷ ಅಕಾಲಿದಳವೂ ಆರೆಸ್ಸೆಸ್-ಬಿಜೆಪಿ ಇಂತಹ ವಿಭಜನಕಾರೀ ಪ್ರಶ್ನೆಗಳನ್ನು ಎತ್ತುತ್ತಿರುವ ಬಗ್ಗೆ ಅಸಮಾಧಾನ ವ್ಯಕ್ತ ಪಡಿಸಿದೆ. ಜನಗಳನ್ನು ಒಂದುಗೂಡಿಸುವ ಪ್ರಶ್ನೆಗಳ ಮೇಲೆ ಗಮನ ಕೇಂದ್ರೀಕರಿಸುವ ಬದಲು ಇಂತಹ ವಿಭಜನಕಾರೀ ಪ್ರಶ್ನೆಗಳನ್ನು ಎಬ್ಬಿಸಬಾರದು ಎನ್ನುತ್ತ ಇಂತಹ ಪ್ರಶ್ನೆಗಳನ್ನು ಯಾರು ಎತ್ತುತ್ತಾರೋ ಅವರು ದೇಶಕ್ಕೆ ಯಾವ ಅನುಕೂಲವನ್ನೂ ಮಾಡುತ್ತಿಲ್ಲ ಎಂದು ಅಕಾಲಿ ದಳ ಸಂಸತ್ ಸದಸ್ಯ ನರೇಶ ಗುಜ್ರಾಲ್ ಹೇಳಿದ್ದಾರೆ.

ಇದಕ್ಕೆ ಮೊದಲು ಪಂಜಾಬಿನ ಅಕಾಲಿ ದಳ ಮುಖ್ಯಮಂತ್ರಿಗಳು "ಭಾರತ ವಿಭಿನ್ನ ಧರ್ಮಗಳ ಜನರು ನೆಲೆಸಿರುವಂತಹ ಜಾತ್ಯಾತೀತ ದೇಶ, ಬೇರೆ ದರ್ಮಗಳನ್ನು ಅನುಸರಿಸುವ ಜನಗಳ ಭಾವನೆಗಳನ್ನು ನೋಯಿಸಬಾರದು" ಎಂದು ಹಿಂದುತ್ವವಾಲಗಳನ್ನು ಪರೋಕ್ಷವಾಗಿ ಟೀಕಿಸಿದ್ದಾರೆ.

'ಗುರು ಉತ್ಸವ': ಮತ್ತೊಂದು ವಿವಾದ ಸೃಷ್ಟಿ ಮತ್ತು ಇನ್ನೊಂದು 'ಸ್ಪಷ್ಟೀಕರಣ'

ಸಪ್ಟಂಬರ್ 5 'ಶಿಕ್ಷಕರ ದಿನಾಚರಣೆ'ಯಂದು ದೇಶದ ಎಲ್ಲ ಶಾಲೆಗಳಲ್ಲಿ ವಿದ್ಯಾರ್ಥಿಗಳು ಪ್ರಧಾನ ಮಂತ್ರಿಗಳ ಭಾಷಣವನ್ನು ಕೇಳುವಂತೆ ಮಾಡಬೇಕು ಎಂಬ ನಿರ್ದೇಶನ/ಸೂಚನೆಯನ್ನು ಸರಕಾರ ನೀಡಿದೆಯೆಂದು ವರದಿಯಾಗಿತ್ತು. ಸ್ವತಂತ್ರ ಭಾರತದಲ್ಲಿ ರಾಷ್ಟ್ರಪತಿಗಳು ಮತ್ತು ಪ್ರಧಾನ ಮಂತ್ರಿಗಳು ಮಾಡುವ ಅಧಿಕೃತ ಭಾಷಣಗಳ ಸಂದರ್ಭದಲ್ಲೂ ಇಂತಹ ನಿರ್ದೇಶನಗಳನ್ನು ಇದುವರೆಗೆ ನೀಡಲಾಗಿಲ್ಲ. ಆರೆಸ್ಸೆಸ್/ ಬಿಜೆಪಿ ಈ ಸಂದರ್ಭವನ್ನೂ ತಮ್ಮ ತತ್ವಗಳನ್ನು ಯುವ ಮನಸ್ಸಲ್ಲಿ ತುಂಬಲು ಬಳಸುವ ಪ್ರಯತ್ನ ನಡೆಸಿದೆ ಎಂಬುದು ಸ್ಪಷ್ಟವಾಗಿದೆ ಎಂದು ಈ ನಿರ್ದೇಶನವನ್ನು ಖಂಡಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅದನ್ನು ಕೂಡಲೇ ಹಿಂತೆದುಕೊಳ್ಳಬೇಕೆಂದು ಆಗ್ರಹಿಸಿದೆ. ಯುವ ಮನಸ್ಸುಗಳು ಎಲ್ಲ ವಿಚಾರಗಳಿಗೆ ತೆರೆದಿರಲು ಅವಕಾಶ ಕಲ್ಪಿಸಬೇಕು, ಆಮೂಲಕ ಅವರು ತಮ್ಮ ಸ್ವಂತ ಬುದ್ಧಿಯಿಂದ ಆಯ್ಕೆ ಮಾಡಿಕೊಳ್ಳಲು ಬಿಡಬೇಕು ಎಂದು ಸಿಪಿಐ(ಎಂ) ಹೇಳಿದೆ.

ದೇಶಾದ್ಯಂತ ಇಂತಹ ಪ್ರತಿಕ್ರಿಯೆಗಳು ಬಂದುದರಿಂದ ಕೆಲವು ರಾಜ್ಯ ಸರಕಾರಗಳೂ ಇದು ಒಕ್ಕೂಟ ತತ್ವದ ಉಲ್ಲಂಘನೆ ಎಂದು ನೆನಪಿಸಿದಾಗ ಇದರಲ್ಲಿ ಕಡ್ಡಾಯವೇನೂ ಇಲ್ಲ ಎಂದು ಮಂತ್ರಿಗಳು ಸ್ಪಷ್ಟೀಕರಣ ನೀಡಿದರು, ಜತೆಗೇ ದೇಶದ ಪ್ರಧಾನ ಮಂತ್ರಿಗಳಿಗೆ ಮಕ್ಕಳನ್ನುದ್ದೇಶಿಸಿ ಮಾತಾಡುವ ಹಕ್ಕಿಲ್ಲವೇ ಎಂಬ ಕೊಂಕು ಮಾತನ್ನೂ ಆಡದೇ ಇರಲಿಲ್ಲ. ■

ರಾಮಚಂದ್ರಾಪುರ ಮಠದ ಗೋಸ್ವಾಮಿಯ........

ಪುಟ 11 ರಿಂದ

ಮುಂದೂಡಲಾಗಿತ್ತು. ಆದರೆ ಇದೀಗ ಪ್ರೇಮಲತಾ ಕಾರವಾರದ ಸ್ವೀಕಾರ ಕೇಂದ್ರದಲ್ಲಿದ್ದಾರೆ. ಇಬ್ಬರಿಗೂ ನ್ಯಾಯಾಂಗ ಬಂಧನವನ್ನು ಸೆಪ್ಟೆಂಬರ್ 10ರತನಕ ವಿಸ್ತರಿಸಲಾಗಿದೆ.

ಸರ್ಕಾರದ ಪ್ರತಿಕ್ರಿಯೆ:

ಈ ಪ್ರಕರಣದ ಕುರಿತು ಗೃಹ ಸಚಿವ ಜಾರ್ಜ್ ಪ್ರತಿಕ್ರಿಯಿಸಿ ಶ್ರೀಗಳಿಗೆ ಸಂಬಂಧಿಸಿದ ಲೈಂಗಿಕ ಕಿರುಕುಳದ ಹಾಗೂ ಚಿತ್ರನಟಿಯನ್ನು ಮದುವೆಯಾಗಿ ಇನ್ನೊಂದು ಮದುವೆಗೆ ಪ್ರಯತ್ನಿಸಿದ ಕೇಂದ್ರ ಸಚಿವ ಸದಾನಂದ ಗೌಡರ ಪುತ್ರ ಕಾರ್ತಿಕ್‌ಗೆ ಸಂಬಂಧಿಸಿದ ಎರಡೂ ಪ್ರಕರಣಗಳನ್ನೂ ರಾಜ್ಯ ಪೋಲಿಸ್ ಇಲಾಖೆಯ ಮೂಲಕವೇ ನಿಸ್ಪಕ್ಷಪಾತ ತನಿಖೆಗೆ ಒಳಪಡಿಸುವುದಾಗಿಯೂ ಸಿಬಿಐ ಅಥವಾ ಸಿಓಡಿಗೆ ಒಪ್ಪಿಸುವ ಪ್ರಶ್ನೆಯೇ ಇಲ್ಲವೆಂದೂ ಎರಡೂ ಘಟನಾವಳಿಗಳಿಗೆ ಒಂದೇ ಹೇಳಿಕೆ ಮೂಲಕ ಉತ್ತರ ಹೇಳಿದ್ದಾರೆ. ಆದರೆ ಇದೊಂದು ಹಾರಿಕೆಯ ಉತ್ತರದಂತೆ ಕಂಡುಬರುತ್ತದೆ.

ಪ್ರೇಮಲತಾ ಮಗಳಿಂದ ಸ್ವಾಮಿ ವಿರುದ್ಧ ದೂರು:

ಈ ಮಧ್ಯೆ ಪ್ರೇಮಲತಾ ಅವರ ಮಗಳು ಅಂಶುಮತಿ ಅಗಸ್ಟ್ 27ರಂದು ಬೆಂಗಳೂರಿನ ಬನಶಂಕರಿ ಪೋಲಿಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಅದರ ಸಾರಾಂಶವಿಷ್ಟು. 'ಸ್ವಾಮಿ ಮತ್ತು ಅವರ ಸಹಚರ ಶಿಷ್ಯಂದಿರುಗಳು ತನ್ನ ತಾಯಿಗೆ ಲೈಂಗಿಕ ಕಿರುಕುಳ ನೀಡಿ ದೌರ್ಜನ್ಯವೆಸಗಿದ್ದಾರೆ. ಈ ಕುರಿತು ಪೋಲಿಸರಿಗೆ ದೂರು ನೀಡುವ ವಿಚಾರ ಮಠದವರಿಗೆ ಹಾಗೂ ಸ್ವಾಮಿಗೆ ತಿಳಿದು ನಾವು ದೂರು ನೀಡದಂತೆ ಬೆದರಿಕೆ ಹಾಕಿ, ನಮಗಿಂತ ಮೊದಲೇ ಅವರು ನಮ್ಮ ಪಾಲಕರ ಮೇಲೆಯೇ ಬ್ಲ್ಯಾಕ್ ಮೇಲ್ ಆರೋಪ ಹೊರಿಸಿ ಮಠದ ಅಧಿಕಾರ ಬಳಸಿ ದೂರು ನೀಡಿದ್ದಾ-ರೆ. ಸ್ವಾಮಿ ಸಹಚರರು ದೈಹಿಕ ಹಲ್ಲೆ ನಡೆಸುವ ಬೆದರಿಕೆ ಹಾಕಿದ್ದಾರೆ. ಹಾಗಾಗಿ ಸೂಕ್ತ ರಕ್ಷಣೆ ನೀಡಬೇಕೆಂದು ಕೋರಿಕೆ' ಎಂದು ಅವರು ದೂರು ನೀಡಿದ್ದಾರೆ.

ಈ ಪ್ರಕರಣದಲ್ಲಿ ಭಾರತೀಯ ದಂಡ ಸಂಹಿತೆ ಕಲಂ 354 ಹಾಗೂ 506 ರ ಪ್ರಕಾರ ಪೋಲಿಸರು ಪ್ರಕರಣ ದಾಖಲಿಸಿ ಪೂರಕ ದಾಖಲೆ ಒದಗಿಸಲು ಕೇಳಿದ್ದಾರೆ. ಆದರೆ ಸ್ವಾಮಿಯ ಕಡೆಯವರು ದೂರು ನೀಡಿದಾಗ ಪೂರಕ ದಾಖಲೆಯನ್ನು ಕೇಳದೇ ಕೇವಲ ದೂರಿನ ಆಧಾರದಲ್ಲಿ ದಂಪತಿಗಳನ್ನು ಬಂಧಿಸಲಾಗಿದೆ.!! ಹಾಗಾಗಿ ಮಠ ಹಾಗೂ ಧಾರ್ಮಿಕ ಸಂಸ್ಥೆಗಳು ಸರ್ಕಾರಿ ಯಂತ್ರದ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ. ಇಂಥ ಕಾರಣಕ್ಕಾಗಿಯೇ ಪ್ರೇಮಲತಾ ದಂಪತಿಗಳು ದೂರು ನೀಡದಂತೆ ಬೆದರಿಸಿದ್ದರೆಂದು ಭಾವಿಸಲು ಕಾರಣವಿದೆ.

ಆತ್ಮಹತ್ಯೆಯ ದುರಂತದ ಹಿಂದಿನ ಒತ್ತಡ

ಈ ಮಧ್ಯೆ ಒಂದು ದುರಂತ ಸಾವು ಸಂಭವಿಸಿದೆ. ಮಠದ ಭಕ್ತರು ಮತ್ತು ಶಿಷ್ಯವೃಂದವು ಲೈಂಗಿಕ ಕಿರುಕುಳದ ಮೊಕದ್ದಮೆಯನ್ನು ವಾಪಸ್ ಪಡೆಯಬೇಕೆಂದು ಹಾಕಿದ ಒತ್ತಡವನ್ನು ತಡೆದುಕೊಳ್ಳಲಾಗದೇ ದಿವಾಕರ ಶಾಸ್ತ್ರಿಯವರ ಸಹೋದರ ಶ್ಯಾಮ್ ಪ್ರಸಾದ್ ತಲೆಗೆ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಕಾಣುತ್ತಿದೆ. " ನನ್ನ ಪತಿಗೆ ರಾಮಚಂದ್ರಪುರ ಮಠದ ಕಡೆಯಿಂದ ಒತ್ತಡ ಇತ್ತು. ಅದರಿಂದ ಅವರು ತೀವ್ರವಾಗಿ ನೊಂದಿದ್ದರು." ಎಂದು ಶ್ಯಾಮ ಪ್ರಸಾದ್ ಅವರ ಪತ್ನಿ ಸಂಧ್ಯಾಲಕ್ಷ್ಮಿ ಹೇಳಿದ್ದಾರೆ. ಇದು ಪ್ರಕರಣ ಎಷ್ಟು ಗಂಭೀರ ಎಂಬುದನ್ನು ಎತ್ತಿ ತೋರಿಸುತ್ತಿದೆ. ವಿಳಂಬವಿಲ್ಲದ ನಿಷ್ಠುರ ನಿಸ್ಪಕ್ಷಪಾತ ತನಿಖೆ ಮಾತ್ರ ಸತ್ಯವನ್ನು ಹೊರತರಬಲ್ಲುದು.

ಆಪಾದಿತ ಸ್ವಾಮಿಯನ್ನು ಬಂಧಿಸುವ ಧೈರ್ಯ ಮಾಡಲಿಲ್ಲ ಯಾಕೆ?

ಕಾನೂನನ್ನು ಇಬ್ಬರಿಗೂ ಒಂದೇ ರೀತಿಯಾಗಿ ಯಾಕೆ ಅನ್ವಯಿಸಲಿಲ್ಲ ? ಪ್ರಭಾವ ಬಳಸುವ ಶಕ್ತಿಯಿಲ್ಲದವರನ್ನು ಮೊದಲು ಬಂಧಿಸುವ ಈ ಪರಿಸ್ಥಿತಿಯಿಂದ ಕಾನೂನಿನ ಮೇಲಿರುವ ಗೌರವ ಕಡಿಮೆ ಆಗಿದೆ.

ಗುರುಪೀಠ ಅಲಂಕರಿಸುವವರು ಭಾರತ ದೇಶ ಹಾಗೂ ಸಂವಿದಾನಕ್ಕಿಂತ ಶ್ರೇಷ್ಠರೇ? ಇವರು ಮನುಷ್ಯರಲ್ಲವೇ? ಇವರನ್ನು ಪ್ರಶ್ನಿಸಬಾರದೇ? ಇವರಿಗೆ ಸರ್ವಾಧಿಕಾರ ಕೊಟ್ಟವರಾರು? ಇವರಿಗೆ ಪ್ರತಿಯೊಂದು ಜಾತಿ ಹಾಗೂ ಧರ್ಮದ ಗುತ್ತಿಗೆ ಕೊಟ್ಟವರಾರು? ಪ್ರಶ್ನಿಸಿದವರೆಲ್ಲ



ಸಮಾಜದ್ರೋಹಿಗಳೆನ್ನುತ್ತಾರೆ. !!!

ಮಠದ ರಕ್ಷಣೆಗೆ ಯಾರೆಲ್ಲಾ

ಇದೀಗ ರಾಮಚಂದ್ರಾಪುರ ಮಠಾಧಿಪತಿಯ ರಕ್ಷಣೆಗೆ ಹವ್ಯಕ ಮಹಾ ಸಭಾ, ಹವ್ಯಕ ಮಂಡಲ, ಮಾತೃ ಮಂಡಲ, ಮಹಾ ಮಂಡಲ ಪ್ರಧಾನರು, ಇತ್ಯಾದಿ ಮಠದ ಭಕ್ತ ವೃಂದದವರು ನಿಂತಿದ್ದಾರೆ. ಹಿಂದೂ ಸೇನೆಯ ಪ್ರಮೋದ ಮುತಾಲಿಕ್ ಕೂಡ ಪತ್ರಿಕಾ ಹೇಳಿಕೆ ನೀಡಿದ್ದಾರೆ. ಅಲ್ಲಲ್ಲಿ ಸಭೆ ಸಮಾರಂಭ ಪ್ರತಿಭಟನೆ ನಡೆಸಿ ಸ್ವಾಮಿಗಳ ಹಾಗೂ ಮಠದ ಕೃತ್ಯ ಬಯಲಿಗೆಳೆದವರನ್ನು ಗುರು ವಿರೋಧಿ, ಸ್ವಸ್ಥ ಸಮಾಜಕ್ಕೆ ಕಂಟಕಪ್ರಾಯರಾದವರು, ಸಮಾಜ ದ್ರೋಹಿಗಳೆಂದು ಜರೆಯುತ್ತಿದ್ದಾರೆ. ಪ್ರೇಮಲತಾ ದಂಪತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುವಾಗ ನ್ಯಾಯಾಲಯದ ಆವರಣದಲ್ಲಿ ನುಗ್ಗಿ ಪ್ರತಿಭಟಿಸಲು ಮಠದ ಭಕ್ತರು ಮುಂದಾಗಿದ್ದರೆಂದೂ ಮಾಧ್ಯಮದಲ್ಲಿ ವರದಿಯಾಗಿದೆ. ಸಾಮಾಜಿಕವಾಗಿ ಅತ್ಯುನ್ನತ ಸ್ಥಾನದಲ್ಲಿರುವ ಶ್ರೀಗಳವರ ವಿರುದ್ಧ ಆರೋಪ ಮಾಡಿರುವುದೇ ಅಸಭ್ಯ ವರ್ತನೆ, ಸಮಾಜೋದ್ಧಾರ ಕೆಲಸ ಸಹಿಸದವರು ತೇಜೋವಧೆ ಮಾಡುತ್ತಿದ್ದಾರೆ ಎಂದು ನೂರಾರು ಮಹಿಳೆಯರನ್ನು ಸೇರಿಸಿ ಸಭೆಯಲ್ಲಿ ನಿರ್ಣಯ ಮಾಡಿಸುತ್ತಿದ್ದಾರೆ.

ತಮ್ಮ ಗುರುಗಳ ಮೇಲೆ ಬಂದ ಲೈಂಗಿಕ ದೌರ್ಜನ್ಯದ ಆಪಾದನೆ, ಅದು ಗುರು ಪೀಠದ ಮೇಲೆ ಮಾಡಿದ ಆಪಾದನೆ ಎಂದೂ, ಶಂಕರಾಚಾರ್ಯ ಪರಂಪರೆಯ ಇತಿಹಾಸದ ಮೇಲೆ ಹಾಗೂ ಧಾರ್ಮಿಕ ಶ್ರದ್ಧಾಕೇಂದ್ರದ ಮೇಲಿನ ಭಾವನಾತ್ಮಕ ಹಲ್ಲೆ ಎಂದೂ ಎನ್ನುವ ಶಿಷ್ಯ ಸಮೂಹದವರು ಹವ್ಯಕರ ಜೊತೆಗೆ ವಿವಿಧ ಜಾತಿ ಬಾಂಧವರನ್ನು ಸಂಘಟಿಸುತ್ತಿದ್ದಾರೆ.

ತಮ್ಮ ಸಂಘದ ವತಿಯಿಂದ ಹೇಳಿಕೆ ಎನ್ನದೇ ಇಡೀ ಜಾತಿ ಸಮಾಜದ ವತಿಯಿಂದ ಎಂದು ಸುಳ್ಳು ಹೇಳುತ್ತಿದ್ದಾರೆ. ಯಾವ ಜಾತಿಯ ಸೂಕ್ಷ್ಮ ಮನಸ್ಸಿನವರೂ ಲೈಂಗಿಕ ದೌರ್ಜನ್ಯವನ್ನಾಗಲೀ, ಆರ್ಥಿಕ ಅವ್ಯವಹಾರವನ್ನಾಗಲೀ ಬೆಂಬಲಿಸುವುದಿಲ್ಲ.

ಸ್ವಾಮೀಜಿಯ ಬದಲಾಗುತ್ತಿರುವ ಇನ್ನೊಂದು ಮುಖ

ಇದೀಗ ಸ್ವಾಮಿಯವರು ಚಾತುರ್ಮಾಸ ಸಭೆಗಳಲ್ಲಿ 'ಸಮಾಜ ಘಾತುಕರು ಪೀಠದ ಮಾನದ ವರೆಗೆ ಬಂದ್ರು, ಇನ್ನು ಪ್ರಾಣವೊಂದಿದೆ.' ಎಂದು ಭಕ್ತರನ್ನು ಪ್ರಚೋದಿಸುತ್ತಿದ್ದಾರೆ. 'ರಾಮಚಂದ್ರಾಪುರ ಮಠ ಎಂಬ ಕಲ್ಪವೃಕ್ಷವನ್ನು ಕಡಿಯುವುದು ಸುಲಭವಲ್ಲ' ಎಂದು ತನ್ನ ವೈಯಕ್ತಿಕ ಬದುಕನ್ನು ಅನಾವರಣ ಮಾಡುವವರಿಗೆ ಎಚ್ಚರಿಸುತ್ತಿದ್ದಾರೆ.

ಕೆಲವು ಹಾಲಿ ಘಟನಾವಳಿಗಳತ್ತ ಒಂದು ನೋಟ

ರಾಮಚಂದ್ರಪುರ ಸ್ವಾಮೀಜಿಯ ಸುತ್ತ ಹಲವಾರು ವಿವಾದಗಳಿವೆ. ರಾವಣ ಮತ್ತು ಗಣಪತಿಯ ಸಂಬಾಷಣೆ ಮತ್ತು ಆತ್ಮಲಿಂಗ ಹೇಗೆ ಆಯಿತು ಎಂದು ಕಥೆ ಕಟ್ಟಲ್ಪಟ್ಟ ಗೋಕರ್ಣ ಮಹಾಬಲೇಶ್ವರ ಕ್ಷೇತ್ರ ಮೂಲದಲ್ಲಿ ಕಾಡುವಾಸಿಗಳ, ಬೇಡರ ಶಿವಾರಾಧನೆಯ ಸ್ಥಾನವಾಗಿತ್ತು ಎಂಬ ವಿಶ್ಲೇಷಣೆ ಇದೆ. ಈ ಅಂಶಗಳನ್ನು ಮರೆಮಾಚಿ ಗೋಕರ್ಣದ ಆಸುಪಾಸಿಗೆ 8–9 ನೇ ಶತಮಾನದ ಅವಧಿಯಲ್ಲಿ ಶಂಕರಾಚಾರ್ಯ ಬಂದರೆಂದೂ ಅವರು ಈ ದೇವಸ್ಥಾನ ತನ್ನ ಪರಂಪರೆಗೆ ಸೇರಬೇಕೆಂದು ಹೇಳಿದ್ದಾರೆಂದು, ಹಾಗಾಗಿ ಇದು ರಾಮಚಂದ್ರಾಪುರ ಮಠದ ಸುಪರ್ದಿಗೆ ಸೇರಬೇಕೆಂದು ಚಿತ್ರವಿಚಿತ್ರವಾಗಿ ವಾದಿಸಿ ಅಂದಿನ ರಾಜ್ಯಪಾಲರ ಆದೇಶದೊಂದಿಗೆ ಮಠಕ್ಕೆ ಹಸ್ತಾಂತರಿಸಿಕೊಂಡರು.

ಎಲ್ಲಾ ಜಾತಿ ಧರ್ಮೀಯರೂ ಸಮಾನವಾಗಿ ಮುಟ್ಟಿ ನಮಸ್ಕರಿಸುವ ಅಧಿಕಾರವಿರುವ, ವಿವಿಧ ಪೂಜಾ ಕೈಂಕರ್ಯದಲ್ಲಿ ಸುತ್ತಲಿನ ಆಸುಪಾಸಿನ ಎಲ್ಲರನ್ನೂ ಒಳಗೊಳ್ಳುತ್ತಿದ್ದ ಈ ದೇವಸ್ಥಾನವೀಗ ಮಠದ ವಶವಾಗಿದೆ. ಅಷ್ಟೇ ಅಲ್ಲ ಗೋಕರ್ಣ ಪರಿವಾರ ದೇವಳವೂ ತಮ್ಮದೇ ಆಸ್ತಿ ಎಂದು ಇವರ ವಾದ. ಗೋಕರ್ಣ ದೇವಸ್ಥಾನದ ಹಸ್ತಾಂತರದ ವಿರುದ್ಧ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹೋರಾಟ ನಡೆಸಿತ್ತು. ಮಾತ್ರವಲ್ಲ ಗೋಕರ್ಣದಿಂದಲೇ ವಾಹನ ಜಾಥಾವನ್ನೂ ರಾಜ್ಯದಾದ್ಯಂತ ನಡೆಸಿತ್ತು ಎಂಬುದನ್ನಿಲ್ಲಿ ಸ್ಮರಿಸಬಹುದು.

ಗೋಕರ್ಣ ದೇವಸ್ಥಾನ ವಶಕ್ಕೆ ಪಡೆಯುತ್ತಲೇ ಅಲ್ಲಿರುವ ಹುಂಡಿಯನ್ನು ಖಾಲಿ ಮಾಡಿದ್ದು, ಕೆಲವು ದಿನಗಳ ನಂತರ ಕಳವು ಪ್ರಕರಣ ಹಾಕಿದ್ದು, ಸಿಓಡಿ ತನಿಖೆಗೆ ಒಪ್ಪಿಸಿದರೆ ಇನ್ನೇನು ಸತ್ಯಾಂಶ ಹೊರಬರುತ್ತದೆಂದು ಹುಂಡಿ ಕದ್ದವರು ಸಿಕ್ಕಿಬಿದ್ದಿದ್ದಾರೆಂದು ಕೆಲವರನ್ನು ಫಿಕ್ಸ್ ಮಾಡಲಾಗಿದೆ ಎಂಬ ಆಪಾದನೆಯೂ ಇವರ ಮೇಲಿದೆ.

ಇತ್ತೀಚಿನ ವರ್ಷಗಳಲ್ಲಿ ಸ್ವಾಮಿಗಳು ಸುಮಾರು 400 ಕೋಟಿ ರೂಪಾಯಿಯ ಹಗರಣದ ಪ್ರಕರಣವನ್ನೂ ಎದುರಿಸುವಂತಾಗಿದೆ. ಅದಿನ್ನೂ ಬೆಳಕಿಗೆ ಬರಬೇಕಷ್ಟೇ. ಇವರೇ ಅಧ್ಯಕ್ಷರಾಗಿರುವ 'ಧರ್ಮಚಕ್ರ ಚಾರಿಟೇಬಲ್ ಸಂಸ್ಥೆ'ಯ ಹೆಸರಿನಲ್ಲಿ ವಿದೇಶಿ ಹಣವನ್ನು ಪಡೆದು ಸಕಾಲದಲ್ಲಿ ಮತ್ತು ಸಹಾಯ ಪಡೆದ ಮೂಲ ಉದ್ದೇಶಕ್ಕೆ ಬಳಸದೇ ಇರುವುದರಿಂದ ವಿದೇಶಿ ಹಣ ಬಳಕೆಯ ಕುರಿತ ಕಾಯ್ದೆ ಅಡಿಯಲ್ಲಿ ಈ ಸಂಸ್ಥೆಯು ತನಿಖೆಗೊಳಪಡುತ್ತಿದೆ ಎಂಬ ಮಾತುಗಳೂ ಕೇಳಿಬರುತ್ತಿವೆ. ದೇಶದಲ್ಲಿ ಯಾವೆಲ್ಲ ಇಂಥ ಪ್ರಕರಣಗಳಿದಾವೋ ಅವುಗಳ ಕುರಿತು ಸಿಬಿಐ ತನಿಖೆ ನಡೆಯುತ್ತಿದೆ. ಅದರಲ್ಲಿ ಇದೂ ಒಂದಂತೆ!

ಕಳೆದ 3–4ವರ್ಷಗಳ ಹಿಂದೆ ಬಯಲು ಸೀಮೆಯಲ್ಲಿ ನೆರೆ ಸಂತ್ರಸ್ತರಿಗೆ 5,000 ಮನೆ ಕಟ್ಟಿಕೊಡುತ್ತೇನೆಂದು ಹೇಳಿ ಅದಕ್ಕಾಗಿ ವ್ಯಾಪಕ ಪ್ರಚಾರ ಮಾಡಿ ಹಣ ಸಂಗ್ರಹಿಸಿ ಒಂದು ಮನೆಯೂ ತಲೆ ಎತ್ತದೆ ಇರುವುದರ ಬಗೆಗೆ ಕೂಡ ಮಾಹಿತಿ ಹಕ್ಕು ಕಾರ್ಯಕರ್ತರು ಮಾಹಿತಿ ಹೊರತೆಗೆದಿದ್ದಾರೆ.

ಗೋಕರ್ಣ ದೇವಸ್ಥಾನವನ್ನು ಮಠಕ್ಕೆ ಹಸ್ತಾಂತರಿಸುವ ಕ್ರಿಯೆಯ ವಿರುದ್ಧ ಸೆಣಸಾಡುತ್ತಿರುವ ಅವರದೇ ಜಾತಿ ಬಾಂಧವರ ಮೇಲೂ ತಮ್ಮ ಶಿಷ್ಯವರ್ಗದ ಮೂಲಕ ಇಲ್ಲ ಸಲ್ಲದ ಹಲವು ಪ್ರಕರಣಗಳನ್ನು ಹಾಕಿಸಿ ಇಂದಿಗೂ ಮಾನಸಿಕವಾಗಿ ಕಿರುಕುಳ ನೀಡಲಾಗುತ್ತಿದೆ. ಈ ಎಲ್ಲಾ ಅಂಶಗಳೂ ಇವರ ಸುತ್ತ ಇರುವುದು ಸಾವಕಾಶ ಬೆಳಕಿಗೆ ಬರುತ್ತಿದೆ.

ತತ್‌ಕ್ಷಣ ಆಗಬೇಕಾದದ್ದು

- ಸ್ವಾಮಿಯ ಮೇಲಿನ ಲೈಂಗಿಕ ದೌರ್ಜನ್ಯದ ಆರೋಪ ಸೇರಿದಂತೆ ಒಟ್ಟು ಪ್ರಕರಣದ ವಿಚಾರಣೆಯು ಪಾರದರ್ಶಕವಾಗಿ ನಡೆದು ನಿಜವಾದ ಅಪರಾಧಿಗಳಿಗೆ ಶಿಕ್ಷೆ ಆಗಬೇಕು.
- ಸ್ವಾಮಿ ಪೀಠದಲ್ಲೇ ಕುಳಿತಿದ್ದರೆ ವಿಚಾರಣೆಯ ಮೇಲೆ ಅವರು ತಮ್ಮ ಹಸ್ತಕ್ಷೇಪ ಮಾಡುವ ಸಾಧ್ಯತೆ ಇರುವುದರಿಂದ ಅವರು ವಿಚಾರಣೆ-ಯ ತೀರ್ಪು ಬರುವವರೆಗೆ ನೈತಿಕ ನಿಲುವು ತಳೆದು ಪೀಠವನ್ನು ತ್ಯಜಿಸಬೇಕು.
- ಸ್ವಾಮಿಯ ಮೇಲಿನ ದೂರು ಹಾಗೂ ಕಲಾವಿದರ ಮೇಲಿನ ದೂರು ಎರಡನ್ನೂ ಸಮಾನವಾಗಿಯೇ ನೋಡಿ ವಿಚಾರಣೆಗೆ ಒಳಪಡಿಸಬೇಕು. ಪ್ರೇಮಲತಾರ ಮಗಳು ಅಂಶುಮತಿಗೆ ರಕ್ಷಣೆ ನೀಡಬೇಕು.
- ಮಠದ ಹಣ ಸಾರ್ವಜನಿಕರದ್ದಾಗಿರುವುದರಿಂದ ಲೆಕ್ಕ ಪರಿಶೋಧಕರನ್ನು ನೇಮಿಸಬೇಕು. ●

ಶಾಲಾ–ಕಾಲೇಜು ಬಂದ್‌ಗೆ ಕರೆ......

ಪುಟ 3 ರಿಂದ

ಕೇವಲ ಸುಮಾರು 30 ರೂ.ಗಳನ್ನು ನೀಡುತ್ತಿದೆ. ದೈಹಿಕವಾಗಿ–ಮಾನಸಿಕವಾಗಿ ಬೆಳವಣಿಗೆ ಹೊಂದಬೇಕಾದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ ನೀಡಲು ಈ ಹಣದಿಂದ ಸಾಧ್ಯವೇ..? ಬಹುತೇಕ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳ ಅಗತ್ಯಕ್ಕೆ ಅನುಗುಣವಾಗಿ ಕನಿಷ್ಠ ಶೌಚಾಲಯಗಳಿಲ್ಲ. ಬಾಡಿಗೆ ಕಟ್ಟಡಗಳಲ್ಲಿ ನಡೆಸುತ್ತಿರುವ ಕೆಲವು ಹಾಸ್ಟೆಲ್‌ಗಳಂತೂ ಹಂದಿಗೂಡಿಗಿಂತಲೂ ಕೀಳಾಗಿವೆ. ಪ್ರತಿ ಹಾಸ್ಟೆಲ್‌ಗಳಿಗೂ ಗ್ರಂಥಾಲಯಗಳಿರಬೇಕೆಂದು ನಿಯಮವಿದೆ. ಆದರೆ ಎಲ್ಲಿಯೂ ಜಾರಿಯಲ್ಲಿಲ್ಲ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಾದ ಪುಸ್ತಕಗಳು, ವಿವಿಧ ಭಾಷೆಗಳ ಹತ್ತಾರು ದಿನಪತ್ರಿಕೆಗಳು, ಮಾಸ ಪತ್ರಿಕೆಗಳು ಹಾಸ್ಟೆಲ್‌ನ ಗ್ರಂಥಾಲಯಗಳಲ್ಲಿ ಇರಬೇಕು. ಆದರೆ ಅವು ವಿದ್ಯಾರ್ಥಿಗಳಿಗೆ ಸಿಗುತ್ತಿಲ್ಲ. ಅಷ್ಟೇ ಅಲ್ಲದೆ ಗುಣಮಟ್ಟದ ಆಹಾರ, ಶುದ್ಧ ಕುಡಿಯುವ ನೀರು, ಸೂಕ್ತ ಕಟ್ಟಡ, ಹಾಸಿಗೆ, ಹೊದಿಕೆಗಳಿಲ್ಲದೆ ವಿದ್ಯಾರ್ಥಿಗಳು ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಕ್ರೀಡೋಪಕರಣಗಳೂ ಕೂಡ ಸಿಗುತ್ತಿಲ್ಲ. ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಟಿವಿ, ಕಂಪ್ಯೂಟರ್‌ಗಳು, ಇಂಟರ್‌ನೆಟ್ ಸೌಲಭ್ಯ ಇಲ್ಲದೆ ಹೊಸ ಆವಿಷ್ಕಾರಗಳ ಮತ್ತು ಬದಲಾವಣೆಗಳ ಅರಿವೇ ಇಲ್ಲದಂತಾಗಿದೆ. ಒಬ್ಬ ವಾರ್ಡನ್ 2ಕ್ಕಿಂತ ಹೆಚ್ಚು ಹಾಸ್ಟೆಲ್‌ಗಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ಹಾಸ್ಟೆಲ್ ಮತ್ತು ಶೌಚಾಲಯಗಳನ್ನು ಶುಚಿಗೊಳಿಸುವವರಿಗೆ ತಿಂಗಳಿಗೆ ಕೇವಲ 600 ರೂ.ಗಳನ್ನು ನೀಡಿ ಅವರನ್ನು ಅವಮಾನಿಸಲಾಗುತ್ತಿದೆ. ಹಾಸ್ಟೆಲ್‌ಗಳಲ್ಲಿ ಖಾಯಂ ಅಡುಗೆ ಸಿಬ್ಬಂದಿ ನೇಮಕಾತಿ ನಿಂತುಹೋಗಿದೆ. ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗುತ್ತಿದ್ದರೂ ಅವರಿಗೆ ಸರಿಯಾದ ಸಮಯಕ್ಕೆ ಸೂಕ್ತ ಸಂಬಳ ನೀಡುತ್ತಿಲ್ಲ.

ಹಾಸ್ಟೆಲ್ ವಿದ್ಯಾರ್ಥಿಗಳ ಗೋಳು ಸರ್ಕಾರಕ್ಕೆ ಕೇಳಿಸುತ್ತಿಲ್ಲ

ಮೆಟ್ರಿಕ್ ನಂತರದ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಭೋಧನಾಶುಲ್ಕ, ಪ್ರಯೋಗಾಲಯ ಶುಲ್ಕ, ಪರೀಕ್ಷಾ ಶುಲ್ಕ, ಕ್ರೀಡಾಶುಲ್ಕ, ಗ್ರಂಥಾಲಯ ಶುಲ್ಕಗಳು ವಿನಾಯಿತಿಗೆ ಅರ್ಹವಾಗಿರುವ ಶುಲ್ಕಗಳಾಗಿವೆ. ಈ ಶುಲ್ಕದ ಹೆಸರಿನಲ್ಲಿ ವಿದ್ಯಾರ್ಥಿಗಳು ನೀಡುವ ಶುಲ್ಕಗಳಿಗೆ ವಿನಾಯಿತಿ ನೀಡಲು ಸರಕಾರ ಅಳವಡಿಸಿರುವ ನಿಯಮ ಸಂವಿಧಾನ ಬಾಹಿರವಾಗಿದೆ. ವಿದ್ಯಾರ್ಥಿಯು ಕಾಲೇಜು ಪ್ರವೇಶ ಸಂದರ್ಭದಲ್ಲಿಯೇ ಎಲ್ಲ ಶುಲ್ಕಗಳನ್ನು ನೀಡಬೇಕು. ನಂತರ ವಿನಾಯಿತಿ ಪಡೆಯುವುದಕ್ಕಾಗಿ 'ಆನ್‌ಲೈನ್' ಮೂಲಕ ಅರ್ಜಿ ಹಾಕಲು ತಿಳಿಸಲಾಗಿದೆ. ಈ ಸೌಲಭ್ಯ ಪಡೆಯಬೇಕಾದರೆ ವಿದ್ಯಾರ್ಥಿಯು ವಾರ್ಷಿಕ ಪರೀಕ್ಷೆಯಲ್ಲಿ ಪ್ರವರ್ಗ 1 ಶೇ.40, ಪ್ರವರ್ಗ 2ಎ, 3ಎ, 3ಬಿ – ಶೇ.50% ಅಂಕಗಳನ್ನು ಪಡೆದಿರಬೇಕು, ನವೀಕರಣ ವಿದ್ಯಾರ್ಥಿಗಳು ಶೇ.60% ರಿಂದ ಶೇ.70% ಅಂಕಗಳನ್ನು ಪಡೆದಿರಬೇಕು ಎಂಬ ನಿಯಮಗಳನ್ನು ಮಾಡಿರುವುದು ಸಂವಿಧಾನ ವಿರೋಧಿಯಾಗಿದೆ. ಆರ್ಥಿಕವಾಗಿ ಹಿಂದುಳಿದಿರುವ ಕಾರಣ ಶುಲ್ಕ ವಿನಾಯಿತಿ ಕೋರಿ ವಿದ್ಯಾರ್ಥಿಗಳು ಅರ್ಜಿ ಹಾಕಿರುತ್ತಾರೆ. ಅಂಕಗಳ ಆಧಾರದ ಮೇಲೆ ಜಾರಿ ಮಾಡಿದರೆ ಇದರಿಂದ ಅನೇಕ ಬಡ ವಿದ್ಯಾರ್ಥಿಗಳಿಗೆ ಅನ್ಯಾಯವಾಗಲಿದೆ. ಬಡ ವಿದ್ಯಾರ್ಥಿಗಳಿಗೆ ಸೌಲಭ್ಯ ನೀಡುವಾಗ ಅಂಕದ ಮಾನದಂಡ ಸರಿಯಾದ ಕ್ರಮವಲ್ಲ.

ಕಾಂಗ್ರೆಸ್ ಹಾದಿಯಲ್ಲೇ ಬಿಜೆಪಿ

ಕಾಂಗ್ರೇಸ್ ನೇತೃತ್ವದ ಯುಪಿಎ ಮತ್ತು ಬಿಜೆಪಿ ನೇತೃತ್ವದ ಎನ್‌ಡಿಎ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಹಿಂದಿನ ಯುಪಿಎ ಮಾದರಿಯಲ್ಲಿಯೇ ಎನ್‌ಡಿಎ ಸರಕಾರ ಸಾಗುತ್ತಿದ್ದು ಇಬ್ಬರ ಆರ್ಥಿಕ ನೀತಿಗಳು ವಿಭಿನ್ನವಾಗಿರದೇ ಒಂದೇ ಆಗಿದೆ. ನರೇಂದ್ರ ಮೋದಿ ನೇತೃತ್ವದ ಬಿಜೆಪಿಯು ಜುಲೈ ತಿಂಗಳಲ್ಲಿ ಮಂಡಿಸಿರುವ ಚೊಚ್ಚಲ ಬಜೆಟ್‌ನಲ್ಲಿ ಶಿಕ್ಷಣಕ್ಕೆ ಗಣನೀಯವಾಗಿ ಹಣ ಕಡಿಮೆಮಾಡಿದೆ. ಶಾಲಾ ಶಿಕ್ಷಣ, ಸಾಕ್ಷರತೆ ಮತ್ತು ಉನ್ನತ ಶಿಕ್ಷಣ ಯೋಜನೆಗೆ ಹಿಂದೆಗಿಂತ 6.61 ರಷ್ಟು, ಸರ್ವ ಶಿಕ್ಷಣ ಅಭಿಯಾನಕ್ಕೆ ಶೇ.6.61 ರಷ್ಟು, ಅಕ್ಷರ ದಾಸೋಹ ಯೋಜನೆಗೆ ಶೇ.10 ರಷ್ಟು, ಯುಜಿಸಿಗೆ ಶೇ.5.1ರಷ್ಟು, ತಾಂತ್ರಿಕ ಶಿಕ್ಷಣಕ್ಕೆ ಶೇ.12ರಷ್ಟು ಮತ್ತು ಐಐಎಸ್‌ಸಿಗೆ ಶೇ.15ರಷ್ಟು ಅನುದಾನವನ್ನು ಕಡಿಮೆ ಮಾಡಲಾಗಿದೆ. ಬದಲಾಗಿ ಶ್ರೀಮಂತರಿಗೆ ತೆರಿಗೆ ವಿನಾಯಿತಿಯನ್ನು ಹೆಚ್ಚು ಮಾಡಲಾಗಿದೆ. ಹೊಸದಾಗಿ ರಾಷ್ಟ್ರೀಯ ಉನ್ನತ ಶಿಕ್ಷಣ ಅಭಿಯಾನ(ರುಸಾ) ಎಂಬ ಯೋಜನೆಯನ್ನು ಜಾರಿಗೆ ತರುತ್ತಿದ್ದು ಈ ಯೊಜನೆ ವಿದ್ಯಾರ್ಥಿ ವಿರೋಧಿಯಾಗಿದೆ. ಅಲ್ಲದೇ ಪ್ರಮುಖ ಸೇವಾ ಕ್ಷೇತ್ರಗಳಾದ ಶಿಕ್ಷಣವು ಸೇರಿದಂತೆ ಜೀವವಿಮಾ ಕ್ಷೇತ್ರದಲ್ಲಿ ಶೇ.49 ರಷ್ಟು, ಬ್ಯಾಂಕಿಂಗ್‌ನಲ್ಲಿ ಸರ್ಕಾರಿ ಶೇ.49 ಖಾಸಗಿ ಶೇ.74.1ರಷ್ಟು, ರೈಲು ಮತ್ತು ರಕ್ಷಣಾ ಇಲಾಖೆಗಳಲ್ಲಿ ಶೇ. 100ರಷ್ಟು ವಿದೇಶಿ ನೇರ ಬಂಡವಾಳ ಹೂಡಿಕೆಗೆ (ಎಫ್‌ಡಿಐ) ಅವಕಾಶ ನೀಡಲು ಮುಂದಾಗಿದೆ.

ಹಣದ ಕೊರತೆ

ರಾಜ್ಯದ ಶಿಕ್ಷಣ ಕ್ಷೇತ್ರ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳಿಗೆ ಶಾಶ್ವತ ಪರಿಹಾರಗಳನ್ನು ಕಂಡುಕೊಳ್ಳಬೇಕಾದರೆ ಮುಂಬರುವ ಬಜೆಟ್‌ನಲ್ಲಿ 1966 ರಲ್ಲಿ ಶಿಕ್ಷಣ ತಜ್ಞ ಕೊಠಾರಿ ಆಯೋಗದ ಶಿಫಾರಸ್ಸಿನಂತೆ ರಾಜ್ಯ ಸರ್ಕಾರ ಶೇ.30ರಷ್ಟು, ಕೇಂದ್ರ ಸರ್ಕಾರ ಶೇ.10ರಷ್ಟು ಒಟ್ಟಾರೆ ದೇಶದ ಜಿಡಿಪಿಯಲ್ಲಿ ಶೇ.6ರಷ್ಟು ಹಣವನ್ನು ಶಿಕ್ಷಣಕ್ಕೆ ಮೀಸಲಿಡಬೇಕಾಗುತ್ತದೆ.

ಚಳುವಳಿಯ ಉತ್ತರ

ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಸೇವಾ ಕ್ಷೇತ್ರವಾದ ಶಿಕ್ಷಣವನ್ನು ಕಡೆಗಣಿಸಿ ಖಾಸಗೀಕರಣ, ವ್ಯಾಪಾರೀಕರಣ ಮತ್ತು ಕೋಮುವಾದೀಕರಣ ಮಾಡಲು ಹೊರಟಿದೆ. ಈ ಹಿನ್ನೆಲೆಯಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಸಂಘಟನೆಯು 10 ಸೆಪ್ಟೆಂಬರ್ 2014 ರಂದು ರಾಜ್ಯದಾದ್ಯಂತ ಶಾಲಾ ಕಾಲೇಜು ವಿಶ್ವವಿದ್ಯಾಲಯ ಬಂದ್‌ಗೆ ಕರೆ ನೀಡಿದೆ. ಶಿಕ್ಷಣ ಪ್ರೇಮಿ ವಿದ್ಯಾರ್ಥಿ ಚಳುವಳಿಗೆ ಎಲ್ಲರ ಸಹಕಾರ ಬೇಕಾಗಿದೆ. ●

ಯೋಜನಾ ಆಯೋಗದ........

ಪುಟ 12 ರಿಂದ

ಸಂಖ್ಯೆಯ ಒಟ್ಟಾದ ಸಾಮಾನ್ಯ ಜನರ ಬಲವನ್ನು ನಿಷ್ಫಲಗೊಳಿಸಲು ಆ ಜನರ ವಿರುದ್ಧವಾಗಿ ಇನ್ನೂ ಹೆಚ್ಚು ಬಲದ ಜನಸಮೂಹವನ್ನು ಅಣಿಗೊಳಿಸಬೇಕಾಗುತ್ತದೆ. ಈ ಕಾರಣಕ್ಕಾಗಿಯೇ, ಪ್ರಭುತ್ವದ ಬದಲಾವಣೆ ಸಾಕಾರಗೊಳಿಸಲು ಫ್ಯಾಸಿಸಂನ ಪಾಲನೆ ಮಾಡಬೇಕಾಗುತ್ತದೆ. ನಮ್ಮ ನಿರ್ಧಿಷ್ಟ ಪರಿಸ್ಥಿತಿಯಲ್ಲಿ ಕೋಮುವಾದಿ–ಫ್ಯಾಸಿಸಂ ಈ ಕೆಲಸದಲ್ಲಿ ತೊಡಗಿದೆ.

'ಹಿಟ್ಟೂ ಹಳಸಿತ್ತು; ನಾಯಿಯೂ ಹಸಿದಿತ್ತು'

ನವ–ಉದಾರವಾದಿ ಪ್ರಭುತ್ವವು ಬೇರೂರಬೇಕಾದರೆ, ಬಲಾಢ್ಯರಾದ ಕೆಲವೇ ಕೆಲವು ಕಾರ್ಪೊರೆಟ್ ಹಣಕಾಸು ಬಂಡವಾಳಿಗರ ಗುಂಪು (ಫೈನಾನ್‌ಶಿಯಲ್ ಆಲಿಗಾರ್ಕಿ)ಮತ್ತು ಬಲಪಂಥೀಯ ಹಿಂದೂ ಕೋಮುವಾದಿ– ಫ್ಯಾಸಿಸ್ಟ್‌ಗಳ ನಡುವೆ ಇಬ್ಬರಿಗೂ ಲಾಭವಾಗುವಂತಹ ಒಂದು ಒಡಂಬಡಿಕೆ/ ಚೌಕಾಶಿ ನಡೆಯಬೇಕಾಗುತ್ತದೆ. ಸಧ್ಯದ ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಜರ್ಜರಿತವಾಗಿರುವ ಕಾರ್ಪೊರೆಟ್ ಹಣಕಾಸು ಬಂಡವಾಳಿಗರನ್ನು ಬೆಂಬಲಿಸಲು ಒಂದು ದೊಡ್ಡ ಜನವಿಭಾಗವು ಮುಂದೆ ಬಂದಿರುವುದು ಅದಕ್ಕೆ ಒಳ್ಳೆಯ ದಿನಗಳು ಬಂದಂತಾಗಿದೆ. ಮೈತ್ರಿ ಕೂಟದ ಅಡ್ಡ ಪರಿಣಾಮಗಳಿಂದ ಜರ್ಜರಿತವಾಗಿದ್ದ ಹಿಂದೂ ಬಲ ಪಂಥವು ತನ್ನ ಗುರಿ ಸಾಧಿಸಲು ಕಾಯುತ್ತಿತ್ತು. ಅದಕ್ಕೆ ಒಳ್ಳೆಯ ದಿನಗಳು ಬಂದಿವೆ. ಅಧಿಕಾರ ರಾಜಕೀಯದ ಅಂಚಿನಲ್ಲಿದ್ದ ಅದು ಕಾರ್ಪೊರೆಟ್ ಹಣಕಾಸು ಬಂಡವಾಳಿಗರ ಗುಂಪು ತನ್ನ ತೆರೆದಿಟ್ಟ ಖಜಾನೆಯನ್ನು ಅದು ಉಪಯೋಗಿಸಿಕೊಂಡು ಅಧಿಕಾರದ ರಂಗ ಕೇಂದ್ರಕ್ಕೆ ಬಂದು ನಿಂತಿದೆ. ಸಂವಿಧಾನದ ಕಲಂ 370ನ್ನು ತೆಗೆದುಹಾಕುವ ಕನಸನ್ನು ನನಸಾಗಿಸುವ ಸಾಧ್ಯತೆ ಇದೆ. ಅತ್ಯಂತ ಪ್ರತಿಗಾಮಿ ಸಾಮಾಜಿಕ ಶಕ್ತಿಗಳನ್ನು ಪ್ರತಿನಿಧಿಸುವ ಹಿಂದೂ ಬಲ ಪಂಥ ಮತ್ತು ಅತಿ ದುರಾಶೆಯ ಹಾಗೂ ಸುಲಿಗೆಕೋರ ಕಾರ್ಪೊರೆಟ್ ಹಣಕಾಸು ಬಂಡವಾಳಿಗರ ಗುಂಪು ಒಟ್ಟಿಗೆ ಬೆರೆತಿರುವುದು ಭವಿಷ್ಯದ ಒಂದು ಕೇಡಿನ ಸೂಚನೆಯಾಗಿದೆ. ಯೋಜನಾ ಆಯೋಗವನ್ನು ವಿಸರ್ಜಿಸುವ ಕ್ರಮವು ಒಂದು ಚಿಕ್ಕ ವಿಷಯ ಅನ್ನಿಸಬಹುದು. ಆದರೆ, ಅದು ಒಂದು ಮಹತ್ವದ ಬದಲಾವಣೆಯ ಸೂಚನೆಯಾಗಿದೆ. ನವ–ಉದಾರವಾದಿ ಪ್ರಭುತ್ವವು ಬೇರೂರುವಂತೆ ಮಾಡಲು ಅದು ವಸಾಹತು ವಿರೋಧಿ ಹೋರಾಟಗಳ ಕಾಳಜಿಯಾಗಿದ್ದ ಪ್ರಗತಿಶೀಲ ಮತ್ತು ಸಮಾನತೆಯ ಹುರುಪಿನೊಂದಿಗೆ ಇರುವ ಸಂಬಂಧಗಳನ್ನು ಕಡಿದುಕೊಳ್ಳಲು ಪ್ರಜ್ಞಾಪೂರ್ವಕವಾಗಿ ಬಯಸುತ್ತದೆ.

ಕೆಲವೇ ಕೆಲವು ಬಲಾಢ್ಯ ಹಣಕಾಸು ಬಂಡವಾಳಿಗರ ಗುಂಪು ಮತ್ತು ಹಿಂದೂ ಬಲ ಪಂಥಗಳ ಒಡಂಡಿಕೆಯು, ನಮ್ಮಂತಹ ಸಮಾಜಗಳಲ್ಲಿ ಬಂಡವಾಳಶಾಹಿಯು ಒಂದು 'ಪ್ರಗತಿಶೀಲ ಪಾತ್ರ' ವಹಿಸುತ್ತದೆಂಬ ಅಭಿಪ್ರಾಯವನ್ನು ನಮ್ಮ ಮನಸ್ಸಿನಿಂದ ಹೋಗಲಾಡಿಸುತ್ತದೆ. ಚಾರಿತ್ರಿಕ ಲೆಕ್ಕಾಚಾರದಲ್ಲಿ ಬಂಡವಾಳಶಾಹಿಯು ತಡವಾಗಿ ರೂಪುಗೊಂಡ ಸಮಾಜಗಳಲ್ಲಿ ಅದು ಊಳಿಗಮಾನ್ಯ ಆಸಾಮಿಗಳೊಂದಿಗೆ ಕೈ ಜೋಡಿಸಿದ್ದರಿಂದ ತನ್ನ ಚಾರಿತ್ರಿಕ ಹೊಣೆಗಾರಿಕೆಯಾದ ಪ್ರಜಾಪ್ರಭುತ್ವ ಕ್ರಾಂತಿಯನ್ನು ಅದು ಮುಂದೊಯ್ಯಲಿಲ್ಲ ಎಂಬುದನ್ನು ಲೆನಿನ್ ಮನಗಂಡಿದ್ದರು. ಆ ಕಾರಣದಿಂದ ಪ್ರಜಾಪ್ರಭುತ್ವ ಕ್ರಾಂತಿಯನ್ನು ರೈತ–ಕಾರ್ಮಿಕರ ಸಖ್ಯವು ಮುಂದುವರೆಸುತ್ತದೆಂದು ಅವರು ವಿಶ್ವಾಸವಿಟ್ಟಿದ್ದರು. ನೆಹರೂ ಅವರನ್ನು 'ಸಮಾಜವಾದದ ಅಧ್ವರ್ಯು' ಎಂದು ಜರಿಯುತ್ತಿದ್ದ ಹಿಂದೂ ಬಲ ಪಂಥವು ಅದೇ ಕಾರಣಕ್ಕಾಗಿ ಅವರನ್ನು ದ್ವೇಶಿಸುತ್ತಿತ್ತು ಕೂಡ. ವ್ಯಂಗ್ಯವೆಂದರೆ, ಈ ಅಂಶವನ್ನು ಒಪ್ಪಿಕೊಳ್ಳಲು ನೆಹರೂ ತುಂಬಾ ಸಂಕೋಚಪಡುತ್ತಿದ್ದರು. ●

ಪಾಕಿಸ್ತಾನದಲ್ಲಿ ಹುಸಿ.....

ಪುಟ 16 ರಿಂದ

ಎಡ ಪಕ್ಷಗಳ ಟೀಕೆ–ವಿರೋಧ

ಪಾಕಿಸ್ತಾನದ ಎಡ–ಪ್ರಗತಿಪರ ಪಕ್ಷಗಳು (ಅವಾಮಿ ವರ್ಕರ್ಸ್ ಪಾರ್ಟಿ, ಕಮ್ಯುನಿಸ್ಟ್ ಪಕ್ಷ) ಪಿ.ಟಿ.ಐ. ಮತ್ತು ಪಿ.ಎ.ಟಿ. ಪಕ್ಷದ ಈ 'ಆಜಾದಿ–ಇಂಕಲಾಬಿ' ಚಳುವಳಿಯನ್ನು ಹುಸಿಯೆಂದು ಖಂಡಿಸಿ ಅದನ್ನು ಮೊದಲಿನಿಂದಲೇ ವಿರೋಧಿಸಿದ್ದವು. ನವಾಜ್ ಶರೀಫ್ ಅವರ ನವ–ಉದಾರವಾದಿ ನೀತಿಗಳಿಂದ ಜನರ ಸಂಕಟ ಆಕ್ರೋಶ ಹೆಚ್ಚಾಗಿದೆ. ಆದರೆ ಅಂತಹ ನೀತಿಗಳನ್ನು ವಿರೋಧಿಸುವ ಬದಲು, ಚುನಾವಣೆ ನಡೆದ 14 ತಿಂಗಳ ನಂತರ ಚುನಾವಣೆ ಅಕ್ರಮಗಳಿಗೆ ರಾಜಿನಾಮೆ ಕೇಳುವುದು ನ್ಯಾಯವಲ್ಲ ಎಂದಿತ್ತು. ಈ ಚಳುವಳಿಯ ನಿಜವಾದ ಉದ್ದೇಶ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವುದು ಅಲ್ಲ. ತೀವ್ರ ರಾಜಕೀಯ ಬಿಕ್ಕಟ್ಟು ಉಂಟುಮಾಡಿ ಮಿಲಿಟರಿ ಕ್ಷಿಪ್ರಕ್ರಾಂತಿಗೆ ಹಾದಿ ಮಾಡಿಕೊಟ್ಟು ಪ್ರಜಾಪ್ರಭುತ್ವ ನಾಶ ಮಾಡುವುದು ಎಂದು ಆರಂಭದಿಂದಲೇ ಟೀಕಿಸಿದ್ದವು.

ಆರಂಭದಲ್ಲಿ ನವ–ಉದಾರವಾದಿ ನೀತಿಗಳ ಸಂತ್ರಸ್ತ ಜನ ಈ ಎರಡೂ ಜಾಥಾಗಳಿಗೆ ಚೆನ್ನಾಗೇ ಸ್ಪಂದಿಸಿದರು. ಸರಕಾರದ ಅನಗತ್ಯ ದಮನ ಮತ್ತು ಆಳುವ ಪಕ್ಷದ ಕಾರ್ಯಕರ್ತರ ದಾಳಿಯನ್ನು ಖಂಡಿಸಿತ್ತು ಕೂಡಾ. ಇದರಿಂದಾಗಿಯೂ ಜಾಥಾಗಳ ಬಗ್ಗೆ ಜನತೆಗೆ ಅನುಕಂಪ ಇತ್ತು. ಆದರೆ ಅವರ ನಿಜವಾದ ಉದ್ದೇಶ ಸ್ಪಷ್ಟವಾಗುತ್ತಾ ಹೋದಂತೆ ಆ ಬೆಂಬಲ–ಅನುಕಂಪ ವಿರೋಧ–ಆಕ್ರೋಶಕ್ಕೆತಿರುಗಿತು. ಆದ್ದರಿಂದಲೇ ಈ ಎರಡು ಪಕ್ಷಗಳು ಕರೆ ನೀಡಿದ ದೇಶದಾದ್ಯಂತ ಕಾನೂನು ಭಂಗ, ಹರತಾಳಗಳಿಗೆ ಯಾವುದೇ ಸ್ಪಂದನೆ ಸಿಗಲಿಲ್ಲ. ಒಂದು ಲಕ್ಷ ಮೋಟಾರ್ ಬೈಕ್ ಸವಾರರ ನಾಯಕತ್ವದಲ್ಲಿ ಹತ್ತು ಲಕ್ಷ ಜನರ ಜಾಥಾ ರಾಜಧಾನಿಗೆ ಬರುವಂತೆ ಮಾಡುವುದು ಅವರಿಗೆ ಸಾಧ್ಯವಾಗಲಿಲ್ಲ. ಪಿಟಿಐ ಪಾರ್ಲಿಮೆಂಟು ಸದಸ್ಯರು ರಾಜಿನಾಮೆ ಕೊಟ್ಟರೂ, ಆ ಪಕ್ಷ ಗಡಿಪ್ರದೇಶದ ಕೆ–ಪಿ–ಕೆ ಪ್ರಾಂತ್ಯದ ಸರಕಾರವಾಗಲಿ ರಾಜ್ಯ ವಿಧಾನಸಭೆಯ ಸದಸ್ಯರಾಗಲಿ ರಾಜಿನಾಮೆಕೊಡದ್ದು ಎಡಬಿಡಂಗಿತನ ಎಂದು ಎಲ್ಲರಿಗೂ ಅರ್ಥವಾಯಿತು.

ಈ 'ಡ್ರಾಮಾ'ದ 'ಸ್ಕ್ರಿಪ್ಟ್' ಮಿಲಿಟರಿಯದ್ದು

ಇಮ್ರಾನ್‌ಖಾನ್ ತಾಲಿಬಾನ್ ಬೆಂಬಲಿತ ಪಕ್ಷ. ತಾಲಿಬಾನ್ ಬಗ್ಗೆ ಅದನ್ನು ಹುಟ್ಟಿ ಹಾಕಿದ ಮಿಲಿಟರಿಗೂ ಸ್ವಾಭಾವಿಕವಾಗಿಯೇ ಅನುಕಂಪ ಇದೆ. ತಾಲಿಬಾನ್ ಮೇಲೆ ಯಾವುದೇ ಕ್ರಮ ಕೈಗೊಳ್ಳಬಾರದು ಎಂದು ಅವರ ಇಚ್ಚೆಯಾಗಿತ್ತು. ಅವರ ಒತ್ತಾಯದಿಂದ ಮಾತುಕತೆಗಳು ನಡೆದವಾದರೂ, ಯಾವುದೇ ಒಪ್ಪಂದಕ್ಕೆ ಬರಲು ಸಾಧ್ಯವಾಗದ್ದರಿಂದ ತಾಲಿಬಾನ್ ಮೇಲೆ ಮಿಲಿಟರಿ ಕ್ರಮ ಕೈಗೊಳ್ಳುವುದು ಅನಿವಾರ್ಯವಾಯಿತು. ತಾಲಿಬಾನ್ ಮೇಲೆ ಮಿಲಿಟರಿ ಕ್ರಮ ನಿಲ್ಲಿಸಲು ಮತ್ತು ಮಿಲಿಟರಿ ಬೆಂಬಲದಿಂದ ಅಧಿಕಾರಕ್ಕೆ ಬರಲು ಈ ಪಿ.ಟಿ.ಐ. ಮತ್ತು ಪಿ.ಎ.ಟಿ. ಪಕ್ಷಗಳ ಜಾಥಾ ಸಂಘಟಿಸಲಾಯಿತು. ಜನರಲ್ ಮುಶರಫ್ ಮೇಲೆ ಇರುವ ಕ್ರಿಮಿನಲ್ ಕೇಸುಗಳನ್ನು ಕೈ ಬಿಡಬೇಕೆಂಬುದೂ ಇನ್ನೊಂದು ಅಂಶವಾಗಿತ್ತು. ಈ 'ಡ್ರಾಮಾ'ದ 'ಸ್ಕ್ರಿಪ್ಟ್' ಬರೆದದ್ದು ಮಿಲಿಟರಿ ಎಂದು ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು ಟೀಕಿಸಿವೆ.

ಕಳೆದ 65ಕ್ಕೂ ಹೆಚ್ಚು ವರ್ಷಗಳಲ್ಲಿ ಚುನಾಯಿತ ಪ್ರಜಾಸತ್ತಾತ್ಮಕ ಸರಕಾರಗಳ ನಡುವೆ ಅಧಿಕಾರದ ಹಸ್ತಾಂತರದ ಮೊದಲ ಪ್ರಕರಣ, ನವಾಜ್ ಶರೀಫ್ ಸರಕಾರ ಅಧಿಕಾರ ವಹಿಸಿಕೊಂಡದ್ದು. ಹೀಗಿರುವಾಗ ಅದನ್ನು ಬುಡಮೇಲು ಮಾಡುವುದು ಪ್ರಜಾಪ್ರಭುತ್ವ ವಿರೋಧಿ ಎಂಬ ಬಗ್ಗೆ ಸಂಶಯವಿಲ್ಲ. ಪಿ.ಟಿ.ಐ. ಬಂಡವಾಳಶಾಹಿ–ಪರ ಬಲಪಂಥೀಯ ಪಕ್ಷ. ಪಿ.ಎ.ಟಿ. ಧಾರ್ಮಿಕ ಧೋರಣೆಯ ಬಲಪಂಥೀಯ ಪಕ್ಷ. ಇವರೆಡನ್ನೂ ಬಳಸಿಕೊಂಡು ಮಿಲಿಟರಿ ಪುನಃ ರಾಜಕೀಯ ಮಧ್ಯಪ್ರವೇಶಕ್ಕೆ ಹವಣಿಸಿತ್ತು. ಅದನ್ನು ಪಾಕಿಸ್ತಾನದ ಜನತೆ ಸೋಲಿಸಿದ್ದಾರೆ. ಅದು ಸಾಧ್ಯವಾಗುವ ಲಕ್ಷಣಗಳಿವೆ. ಆದರೆ ಈ ಪ್ರಕರಣ ನವಾಜ್ ಶರೀಫ್ ಸರಕಾರವನ್ನೂ ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸಿರುವ ಸಾಧ್ಯತೆ ಇದೆ. ಈ ಪ್ರಕರಣವನ್ನು ಬಳಸಿ ಮಿಲಿಟರಿ ಮತ್ತು ಶರೀಫ್ ಸರಕಾರದ ನಡುವೆ ಹಲವು ಕ್ಷೇತ್ರಗಳಲ್ಲಿ ಪುನಃ ಮಿಲಿಟರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುವ 'ಒಳ ಒಪ್ಪಂದ' ಆಗಿರುವ ಸಾಧ್ಯತೆಇದೆ. ಮಿಲಿಟರಿ 'ಸಾಫ್ಟ್' (ಮೆದು) 'ಕ್ಷಿಪ್ರಕ್ರಾಂತಿ' ನಡೆಸಿದೆ ಎಂದು ಒಬ್ಬ ಪಗ್ರತಿಪರ ರಾಜಕೀಯ ವೀಕ್ಷಕ ಕಮೆಂಟಿಸಿದ್ದು ನಿಜವೇ ಇರಬಹುದು. ●

JANASHAKTHI KANNADA VARA PATRIKE SEPT 14, 2014 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on every Satuarday
Licensed to Post without prepayment License No. WPP-283

ಜಗದಗಲ

ಶರತ್‌ಚಂದ್ರ





ಪಾಕಿಸ್ತಾನದಲ್ಲಿ ಹುಸಿ 'ಆಜಾದಿ'–'ಇಂಕಲಾಬಿ' ಚಳುವಳಿ

ಎರಡು ವಾರಗಳಿಗಿಂತಲೂ ಹೆಚ್ಚು ಕಾಲದಿಂದ ಪಾಕಿಸ್ತಾನದಲ್ಲೊಂದು ಚಳುವಳಿ ನಡೆದಿದೆ. ಇದರ ಹೆಸರು, ಉದ್ದೇಶ ಎಲ್ಲವೂ ಹುಸಿ. ಅದೃಷ್ಟವಶಾತ್ ಈ ಚಳುವಳಿ ಠುಸ್ಸೆನ್ನುವ ಲಕ್ಷಣಗಳು ಕಾಣುತ್ತಿವೆ. ಈ ಚಳುವಳಿಯನ್ನು ಪಾಕಿಸ್ತಾನದ ಎರಡು ಬಲಪಂಥೀಯ ಪಕ್ಷಗಳು ಅಗಸ್ಟ್ 14ರಂದು ಆರಂಭಿಸಿದವು. ಮಾಜಿ ಕ್ರಿಕೆಟ್ ಕ್ಯಾಪ್ಟನ್ ಇಮ್ರಾನ್‌ಖಾನ್ ತಮ್ಮ ಪಾಕಿಸ್ತಾನ್ ತೆಹರಿಕ್–ಎ–ಇನ್ಸಾಫ್ (ಪಿ.ಟಿ.ಐ.) ಪಕ್ಷದ ಚಳುವಳಿಯನ್ನು 'ಆಜಾದಿ' (ಸ್ವಾತಂತ್ರ್ಯ)ಜಾಥಾ ಎಂದು ಕರೆದರು. ಕೆನಡಾದಲ್ಲಿ ವಾಸಿಸಿರುವ ಮುಲ್ಲಾತಾಹಿರ್–ಉಲ್–ಖಾದ್ರಿ ತಮ್ಮ ಪಾಕಿಸ್ತಾನ್ ಅವಾಮಿ ತೆಹರಿಕ್(ಪಿ.ಎ.ಟಿ.) ಪಕ್ಷದ ಚಳುವಳಿಯನ್ನು 'ಇಂಕಲಾಬಿ' (ಕ್ರಾಂತಿಕಾರಿ) ಜಾಥಾ ಎಂದು ಕರೆದರು. (ಈ ಎರಡೂ ಪಕ್ಷಗಳ ಹೆಸರಲ್ಲಿರುವಂತೆ ಹರಿಕ್‌ಎಂದರೆ ನ್ಯಾಯ!).

ಶರೀಫ್ ರಾಜಿನಾಮೆ ಒನ್–ಪಾಯಿಂಟ್ ಪ್ರೋಗ್ರಾಂ

ಪಿ.ಟಿ.ಐ. ಪಕ್ಷದ ಎಲ್ಲಾ ಪಾರ್ಲಿಮೆಂಟ್ ಸದಸ್ಯರ ರಾಜಿನಾಮೆಯನ್ನು ಇಮ್ರಾನ್‌ಖಾನ್ ಸಲ್ಲಿಸಿದರು. ಈ ಎರಡೂ ಪಕ್ಷಗಳು ಜಂಟಿಯಾಗಿ ರಾಜಧಾನಿ ಇಸ್ಲಾಮಾಬಾದಿಗೆ 10ಲಕ್ಷ ಜನರ ಜಾಥಾದಲ್ಲಿ ಬಂದು ಪಾರ್ಲಿಮೆಂಟಿಗೆ ಮುತ್ತಿಗೆ ಹಾಕುವ ಬೆದರಿಕೆ ಹಾಕಿದ್ದರು. ಮೇ 2013ರಲ್ಲಿ ನಡೆದ ಚುನಾವಣೆಗಳಲ್ಲಿ ವ್ಯಾಪಕ ರಿಗ್ಗಿಂಗ್ ಆಗಿದೆ. ಆದ್ದರಿಂದ ಪ್ರ ಧಾನಿ ನವಾಜ್ ಶರೀಫ್ ರಾಜೀನಾಮೆ ಕೊಡಬೇಕು. ಮರುಚುನಾವಣೆ ಆಗಬೇಕು. ಇದು ಅವರ ಮುಖ್ಯ ಹಕ್ಕೊತ್ತಾಯ.



ಇದೇ ಇವರ 'ಆಜಾದಿ' ಮತ್ತು 'ಇಂಕಲಾಬ್'! ಹೆಸರಿಗೆ ಚುನಾವಣಾ ಸುಧಾರಣೆಗಳ ಕೆಲವು ಹಕ್ಕೊತ್ತಾಯಗಳೂ ಇವೆ.


ಅಗಸ್ಟ್ 14ರಂದು ಆರಂಭವಾಗಿ ಕೆಲವು ದಿನಗಳಲ್ಲಿ ಪಾಕಿಸ್ತಾನದ ಪ್ರಮುಖ ಸ್ಥಳಗಳನ್ನು ಹಾದು ಬಂದ ಜಾಥಾ ಪಾರ್ಲಿಮೆಂಟಿಗೆ ಮುತ್ತಿಗೆ ಹಾಕಲು ಪ್ರಯತ್ನಿಸಿತು. ಅದನ್ನು ಸೈನ್ಯ ಮತ್ತು ಪೋಲಿಸ್ ತಡೆದಾಗ ಪ್ರಧಾನಿ ನಿವಾಸಕ್ಕೆ ಮುತ್ತಿಗೆ ಹಾಕಿತು. ಅಗಸ್ಟ್ 20ರ ಹೊತ್ತಿಗೆ ಪಾರ್ಲಿಮೆಂಟಿನ ಮುಖ್ಯ ದಾರಿಗಳಿಗೆ ತಡೆಒಡ್ಡಿತ್ತು. ಹಲವು ಬಾರಿ ಚಳುವಳಿಯಲ್ಲಿ ತೊಡಗಿದ್ದ ಪಿ.ಟಿ.ಐ ಮತ್ತು ಪಿ.ಎ.ಟಿ. ಪಕ್ಷದ ಕಾರ್ಯಕರ್ತರು ಮತ್ತು ಸೈನ್ಯ–ಪೋಲಿಸ್ ಪಡೆಗಳಿಗೆ ಘರ್ಷಣೆ ಆಗಿ ನೂರಾರು ಜನರು ಗಾಯಗೊಂಡರು. ಸರಕಾರ ಚಳುವಳಿ ನಿರತ ಕಾರ್ಯಕರ್ತರನ್ನೂ ಇಬ್ಬರೂ ನಾಯಕರನ್ನೂ ದೇಶದ ವಿರುದ್ಧ ವಿದ್ರೋಹದ ಆಪಾದನೆ ಮೇಲೆ ಬಂಧಿಸುವ ಬೆದರಿಕೆ ಹಾಕಿತು. ಇಬ್ಬರೂ ನಾಯಕರೂ ತಮ್ಮ ಹಕ್ಕೊತ್ತಾಯಗಳು ಕೊಟ್ಟ ಗಡುವಿನ ಒಳಗೆ ಈಡೇರದಿದ್ದರೆ ಪಾರ್ಲಿಮೆಂಟಿನೊಳಗೆ ಬಲಪ್ರಯೋಗದಿಂದ ಮುನ್ನುಗ್ಗುವ ಬೆದರಿಕೆ ಹಾಕಿದರು. ಈ ಗಡುವನ್ನು ಹಲವು ಬಾರಿ ವಿಸ್ತರಿಸಿದರು.

ಜನರಲ್‌ರಹೀಲ್ 'ಮಧ್ಯಸ್ತಿಕೆ'

ಬಿಕ್ಕಟ್ಟು ತೀವ್ರವಾಗುತ್ತಿದ್ದಂತೆ ಕ್ರಮೇಣ ಎರಡೂ ಕಡೆ ಮಾತುಕತೆಗೆ ತಯಾರಾಗಿ ಮಾತುಕತೆಯೂ ಆಯಿತು. ಸರಕಾರದ ರಾಜಿನಾಮೆ ಬಿಟ್ಟು ಎಲ್ಲಾ ಹಕ್ಕೊತ್ತಾಯಗಳಿಗೆ ಪ್ರಧಾನಿ ಒಪ್ಪಿಕೊಂಡರು. ಆದರೆ ಇಮ್ರಾನ್‌ಖಾನ್ ಮತ್ತು ತಾಹಿರ್‌ಖಾದ್ರಿ ರಾಜಿನಾಮೆಗೆ ಹಟ ಹಿಡಿದಿದ್ದರಿಂದ ಮಾತುಕತೆಗಳು ಮುರಿದು ಬಿದ್ದವು. ಪುನಃ ಇಬ್ಬರೂ ನಾಯಕರು ಪಾರ್ಲಿಮೆಂಟಿನೊಳಗೆ ಬಲಪ್ರಯೋಗದಿಂದ ಮುನ್ನುಗ್ಗುವ ಬೆದರಿಕೆ ಒಡ್ಡಿದರು. ಆದರೆ ಪಿ.ಟಿ.ಐ.ನ ಪಾರ್ಲಿಮೆಂಟಿನ ನಾಯಕ ಸೇರಿ ಸದಸ್ಯರು ಇದನ್ನು ಸಾರ್ವಜನಿಕವಾಗಿಯೇ ವಿರೋಧಿಸಿದರು. ಬಿಕ್ಕಟ್ಟು ಇನ್ನಷ್ಟು ಕಗ್ಗಂಟಾಗುತ್ತಿದ್ದಂತೆ ಮಿಲಿಟರಿ ಕ್ಷಿಪ್ರಕ್ರಾಂತಿ ನಡೆಸುವ ಬಗ್ಗೆ ದಟ್ಟ ವದಂತಿ ಹರಡಿತು. ಮಿಲಿಟರಿ ಮತ್ತು ಸರಕಾರ ಎರಡೂ ಅದನ್ನು ನಿರಾಕರಿಸಿದವು.

ಈ ನಡುವೆ ಮಿಲಿಟರಿ ಮುಖ್ಯಸ್ಥ ಜನರಲ್ ರಹೀಲ್ ಅವರನ್ನು ಇಮ್ರಾನ್‌ಖಾನ್ ಮತ್ತು ತಾಹಿರ್‌ಖಾದ್ರಿ ಭೇಟಿ ಮಾಡಿದರು. ಜನರಲ್ ರಹೀಲ್ ತಮ್ಮ ಪ್ರಮುಖ ಕಮಾಂಡರುಗಳ ಸಭೆ ಸಹ ನಡೆಸಿದ್ದು ಮಿಲಿಟರಿ ಕ್ಷಿಪ್ರಕ್ರಾಂತಿ ನಡೆಸುವ ಬಗ್ಗೆ ಪುನಃ ದಟ್ಟ ವದಂತಿ ಹರಡಿತು. ಸರಕಾರ ಮತ್ತು ವಿರೋ ಧ ಪಕ್ಷಗಳ ನಡುವೆ ಜನರಲ್ ರಹೀಲ್ ಅವರ 'ಮಧ್ಯಸ್ತಿಕೆ'ಗೆ 'ಆಹ್ವಾನ' ನೀಡಿದ್ದು ಯಾರು ಮೊದಲು – ಸರಕಾರವೇ ಅಥವಾ ಈ ಇಬ್ಬರು ವಿರೋಧ ಪಕ್ಷಗಳ ನಾಯಕರೇ ಎನ್ನುವುದು ಅಸ್ಪಷ್ಟವಾಗೇ ಉಳಿದಿದೆ. ಎರಡೂ ಕಡೆಯಿಂದ ವಿರುದ್ಧ ಹೇಳಿಕೆಗಳು ಬರುತ್ತಿವೆ. ಈ ನಡುವೆ ಪಾರ್ಲಿಮೆಂಟಿನ ಅಧಿವೇಶನ ನಡೆಸಲಾಗಿದ್ದು ಪಿ.ಟಿ.ಐ. ಬಿಟ್ಟು ಇತರ ಎಲ್ಲಾ (ಆಳುವ ಮತ್ತು ವಿರೋಧ) ಪಕ್ಷಗಳು ಸರಕಾರದ ರಾಜಿನಾಮೆಯ ಹಕ್ಕೊತ್ತಾಯವನ್ನು ಮತ್ತು ಮಿಲಿಟರಿ 'ಮಧ್ಯಸ್ತಿಕೆ'ಗೆ 'ಆಹ್ವಾನ'ವನ್ನೂ, ಜನರಲ್‌ರ ಹೀಲ್ ರಾಜಕೀಯ ಹಸ್ತಕ್ಷೇಪವನ್ನೂ, ಮಿಲಿಟರಿ ಕ್ಷಿಪ್ರಕ್ರಾಂತಿಯ ಸಾಧ್ಯತೆಯನ್ನೂ ತೀವ್ರವಾಗಿ ಖಂಡಿಸಿವೆ. ಸ್ಪೀಕರ್ ಪಿ.ಟಿ.ಐ. ಸದಸ್ಯರ ರಾಜೀನಾಮೆಯನ್ನು ಅಂಗೀಕರಿಸಿಲ್ಲ. ಚಳುವಳಿಯಲ್ಲಿ ಭಾಗವಹಿಸದ ವಿರೋ ಧ ಪಕ್ಷಗಳು, ಚಳುವಳಿಯ ನಾಯಕರು ಮತ್ತು ಸರಕಾರದ ಮಧ್ಯೆ 'ಮಧ್ಯಸ್ತಿಕೆ' ವಹಿಸಿದ್ದು ಬಿಕ್ಕಟ್ಟು ಪರಿಹಾರವಾಗುವ ಸೂಚನೆಗಳಿವೆ. ಸುಪ್ರೀಂಕೋರ್ಟು ಸಹ ಬಿಕ್ಕಟ್ಟು ಪರಿಹಾರಕ್ಕೆ ಪ್ರಯತ್ನಿಸುವಂತೆ ನಿರ್ದೇಶಿಸಿದೆ.

ಪುಟ 15 ಕ್ಕೆ





JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**

CMYK